॥ ಶ್ರೀಃ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ॥

ಶ್ರೀ ಲಕ್ಷ್ಮೀ ಹಯಗ್ರೀವ ದಿವ್ಯಪಾದುಕಾಸೇವಕ

ಶ್ರೀ ಮದಭಿನವವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕಾನಾಂ

# ಅಷ್ಟೋತ್ತರ ಶತನಾಮಾವಳೀ

ವೇದವಿದ್ಯಾ ವಿಪಶ್ಚಿದ್ವಶಂವದಃ, ಮಹರ್ಷಿರ್ಹಾರೀತಃ, ವೇದರತ್ನಂ ಮಹಾಮಹೋಪಾಧ್ಯಾಯಃ
ಶ್ರೀಮಾನ್ ಉ. ವೇ ಡಾ॥ ಆತ್ಮಕೂರ್ ಎಸ್ ವೇಂಕಟನಾಥಾಚಾರ್ಯಃ
ಶ್ರೀಕಾರ್ಯಕರ್ತಾ ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲಸ್ವಾಮಿ ಮಠಾಸ್ಥಾನಃ ಮೈಸೂರು

---

ಹಯಾಸ್ಯಕುಲಮಾಲೊಕಂ ವೇಙ್ಕಟೇಶಕವಿರ್ಮುದಾ ।
ಅಷ್ಟೋತ್ತರಶತಂ ನತ್ವಾ ನವ್ಯವಾಗೀಶಯೋಗಿನಾಮ್ ॥

ಯೋಗಿನೇ ಮನ್ತ್ರ ಸಿದ್ಧಾಯ ಹಯಾಸ್ಯಪದಸೇವಿನೇ ।
ತಪೋನಿಷ್ಠಾಯ ಧೀರಾಯ ತುರೀಯಪದಲಕ್ಷ್ಮಣೇ ॥೧॥

ದಾನ್ತಾಯ ಪರಮಾರ್ಥಾಯ ಕೃತಿನೇ ಗುಣಿನೇ ನಮಃ ।
ಯಮಿನೇ ಪಾರಲಕ್ಷ್ಯಾಯ ಪರಮೈಕಾನ್ತಿನೇ ಯತೇ ॥೨॥

ಬೋಧಕಾಯಾರ್ಥಿಲಕ್ಷ್ಯಾಯ ಸಾಂಖ್ಯಾಯಾಮಿತತೇಜಸೇ ।
ಸತೇ ಸ್ಥಿರಾಯ ಸಿದ್ಧಾಯ ಬ್ರಹ್ಮನಿಷ್ಠಾಯ ಭೂಯಸೇ ॥೩॥

ತ್ರಯ್ಯನ್ತಾರ್ಥಾಯ ನಾಥಾಯ ತಾರಕಾಯ ಮಹಾತ್ಮನೇ ।
ಶ್ರೀಮತೇ ಮುನಯೇಗಾಢಭಗವದ್ಭಕ್ತಿ ಸಿನ್ಧವೇ ॥೪॥

ವೈರಾಗ್ಯನಿಧಯೇ ಶಾಸ್ತ್ರೇ ವಿವೇಕ-ಸ್ವ-ಪ್ರಕಾಶಿನೇ ।
ಹಂಸಾಯ ಪರಮಹಂಸಾಯ ತತ್ತ್ವವೇತ್ರೇ ದಯಾಲವೇ ॥೫॥

ದೇಶಿಕಾಯಾತ್ಮಲೋಕಾಯ ಬ್ರಹ್ಮದಂಡಾಯ ದಂಡಿನೇ ।
ಆಧ್ಯಾತ್ಮದೀಕ್ಷಿತಾಯಾಸ್ಮೈ ಪುರುಷಾಯ ಪರಾತ್ಮನೇ ॥೬॥

ಮಂಗಲಾಯ ಸ್ವಸಾಧ್ಯಾಯ ಸಾಧನಾಯ ಪ್ರಕಾರಿಣೇ ।
ಸತ್ತ್ವಾಯ ಧೀಮತೇ ಭೋಕ್ತ್ರೇ ಗುರುಭಾವಾನುರಾಗಿಣೇ ॥೭॥

ಸ್ವಾಧ್ಯಾಯಪದನಿಷ್ಠಾಯ ಪಂಚಕಾಲಪ್ರಕಾಶಿನೇ ।
ಸವನತ್ರಯನಿಷ್ಠಾಯ ಶಿಷ್ಯಚಿತ್ತಾಪಹಾರಿಣೇ ॥೮॥

ತೀಕ್ಷ್ಣಾಯ ಮೃದವೇ ಧಾತ್ರೇ ವಿಧಾತ್ರೇ ದೀರ್ಘಬಂಧವೇ ।
ಅನಘಾಯ ಸ್ಮಿತಾಸ್ಯಾಯ ಸ್ವ-ಪರ-ನ್ಯೂನ-ದರ್ಶಿನೇ ॥೯॥

ಶ್ರೀ ದಂಡಾಯ ನೃಸಿಂಹಾಯ ರಾಜ್ಞೇ ರಾಜಸ್ವದಂಡಿನೇ ।
ಲಕ್ಷ್ಮಣಾರ್ಯಾರ್ಥತತ್ತ್ವಾಯ ವೇದಮಾರ್ಗವಿಧಾಯಿನೇ ॥೧೦॥

ಅರ್ಥಪಂಚಕಲಕ್ಷ್ಯಾಯ ಸಂನ್ಯಾಸಾಶ್ರಮರೂಪಿಣೇ ।
ಹಯಾಸ್ಯಾರ್ಚಾವಿಧಾನಾಯ ತ್ರಿದಂಡ ಸ್ವಪ್ರಮಾಯುಜೇ (ಪ್ರಮಾಭುಜೇ) ॥೧೧॥

ಊರ್ಧ್ವಮೂಲೋರ್ಧ್ವಪುಂಡ್ರಾಯ ಯಜ್ಞಸೂತ್ರಾನುಶಾಸಿನೇ ।
ನವ್ಯರಂಗೇಂದ್ರ ಶಿಷ್ಯಾಯ ನವ್ಯಲಕ್ಷ್ಮಣಭೀಕ್ಷವೇ ॥೧೨॥

ಪರಕಾಲಪದೇಶಾಯ ಬ್ರಹ್ಮತಂತ್ರಸ್ವತಂತ್ರಿಣೇ ।
ತ್ರಿಕಾಲ ಜ್ಞಾನಯಜ್ಞಾಯ ಜ್ಞಾನಾಧ್ವರ್ಯಾವಭಾಸಿನೇ ॥೧೩॥

ಸ್ವಾಪಹರ್ತೃಪಕಾರಾಯ ಸ್ವಾಪಕರ್ತ್ರನುರಾಗಿಣೇ ।
ನಿರ್ದ್ವಂದ್ವಾಯ ಸ್ವತಂತ್ರಾಯ ಸತ್ಯಸಂಧವ್ರತಾತ್ಮನೇ ॥೧೪॥

ಪಾದುಕಾರ್ಚನದೀಕ್ಷಾಢ್ಯರಾಜಸದ್ಮಪ್ರಭಾಸ್ವತೇ ।
ರಾಜಸ್ವಪದ್ಮ ಮಿತ್ರಾಯ ಭಾರತಾಯಾರ್ಷಭಾಗಿನೇ ॥೧೫॥

ನಿರ್ವಿಶೇಷವಿಶೇಷಾರ್ಥತತ್ತ್ವಭೂಮ್ನ್ಯನುಷಙ್ಗಿಣೇ ।
ಭಕ್ತಿಪ್ರಪತ್ತಿತತ್ತ್ವಾರ್ಥ ಪ್ರಮಾನುಷ್ಠಾನಲಕ್ಷ್ಮಣೇ ॥೧೬॥

ಸ್ವಚ್ಛಂದವೃತ್ತನಿಷ್ಠಾಯ ಸ್ವಾರ್ಥಚ್ಛಂದಪ್ರವರ್ತಿನೇ ।
ವಿಶ್ವಾಮಿತ್ರಾನ್ವಯಾರ್ಕಾಯ ಚೇತನಾಯ ವಿಪಶ್ಚಿತೇ ॥೧೭॥

ರಂಗಾಸಾರವಿಹಾರಾಯ ಶ್ರೀನಿವಾಸವಿಹಾರಿಣೇ ।
ಶ್ರೀನಿವಾಸಾತ್ತದೀಕ್ಷಾಯ ಶಠಕೋಪಾಪ್ತಮಂತ್ರಿಣೇ ॥೧೮॥

ಕೃಷ್ಣಮಾರ್ಯಕೃಪಾಪ್ರಾಪ್ತಮಂತ್ರದೀಕ್ಷಾ ಪ್ರಮಾವತೇ ।
ದ್ರಾವಿಡಾಮ್ನಾಯ ಸೂಕ್ತ್ಯರ್ಥಮಾಧುರ್ಯಾಸ್ವಾದಕಾರಿಣೇ ॥೧೯॥

ಯೂವೋದ್ಭವವಸನ್ತಾಢ್ಯಮಧು-ಲೋಕವಿರಾಡ್ಯುಜೇ ।
ಪೂಷಾನುಭೂ ಅಲಕ್ಷ್ಯಾರ್ಥಮಹರ್ಷಿ ಪದಭೋಗಿನೇ ॥೨೦॥

ಚಿದಚಿತ್ಪರತತ್ತ್ವಾರ್ಥ ವ್ರತಷಟ್ಪದ ಚಾರಿಣೇ ।
ಭವಚ್ಛಿದೇ, ಸ್ವಬಂಧಾಯ ಬಂಧತ್ರಯವಿವೇಕಿನೇ ॥೨೧॥

ಶರಣಾಗತ ರಕ್ಷೈಕಸಂಕಲ್ಪಾಯ ಸ್ವಚಕ್ಷುಷೇ ।
ವೇದವೇದಾಂತ ದೀಪಾಯ ಜ್ಞಾನಚೂಡಾಸ್ವಬೋಧಿನೇ ॥೨೨॥

ಶ್ರೀಭಾಷ್ಯಭಾವಬೋಧಾರ್ಥ ಪ್ರಭಾಮಂಡಲಲಾಸಿನೇ ।
ರಹಸ್ಯತ್ರಯಸಾರಾರ್ಥಗ್ರಹಣೋಜ್ವಲಕಾಂತಯೇ ॥೨೩॥

ವಾಗೀಶಪದಲಕ್ಷ್ಯಾಯ ನವ್ಯವಾಗಿಶಯೋಗಿನೇ ।
ಶ್ರೀಹಯಾಸ್ಯ ಪದದ್ವಂದ್ವ ವೃತ್ತಗೋತ್ರನಿವಾಸಿನೇ ॥೨೪॥

ವ್ಯತನೋದ್ವೇಙ್ಕಟೋ ನಾಥ ಇತ್ಥಮಷ್ಟೋತ್ತರಂಶತಂ ।
ವಾಗೀಶನವ್ಯವಾಗೀಶ ಕೃಪಾಮುದ್ರಾತ್ಮ ಲಕ್ಷಣಃ ॥

॥ ಶ್ರೀಃ ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ ॥

# ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು

ಶ್ರೀಮಾನ್ ಉ. ವೇ ಹೆಬ್ಬಲಗುಪ್ಪೆ ತಿರುಮಲೆ ನಲ್ಲಾನ್ ಚಕ್ರವರ್ತಿ
ಶ್ರೀನಿವಾಸಗೋಪಾಲಾಚಾರ್

---

ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕಾಯ ನಮಃ

ಶ್ರೀ ಶ್ರೀ ಶ್ರೀ ಬ್ರಹ್ಮತಂತ್ರ ಪರಕಾಲ ಮಹಾದೇಶಿಕ ರವರ ಪೂರ್ವಾಶ್ರಮದಲ್ಲಿನ ಹೆಸರು ಸ್ವಚ್ಛಂದಂ ಶ್ರೀನಿವಾಸನ್ ಎಂದು. ನಾನು ಅವರು ಇಬ್ಬರು ೧೯೫೨ರಿಂದ  ಜೊತೆಯಲ್ಲಿದ್ದೇವೆ. ನಾವುಗಳಿಬ್ಬರು ರಾತ್ರಿ ಮಠದಲ್ಲಿ ಕೆಲಸ ಮುಗಿಸಿಕೊಂಡು ಕಳಲೆ, ಟಿ.ನರಸೀಪುರ, ಸೋಸಲೆ, ಶ್ರೀರಂಗರಾಜಪುರ ರಥೋತ್ಸವಕ್ಕೆ ಸೈಕಲ್‌ನಲ್ಲಿ ಹೋಗುತ್ತಿದ್ದೆವು. ವೈದಿಕರು ನಮ್ಮಿಬ್ಬರನು- ಬಂದು ಸಹಾಯ ಮಾಡಬೇಕೆಂದು ಕೇಳುತ್ತಿದ್ದರು. ನಾವಿಬ್ಬರೂ ಹೋಗಿ ಸಹಾಯ ಮಾಡುತ್ತಿದ್ದೆವು. ನಾವು ಸಂಭಾವನೆ ತೆಗೆದುಕೊಳ್ಳುತ್ತಿರಲಿಲ್ಲ. ೧೯೫೪ ರಲ್ಲಿ ನನಗೆ ಮದರಾಸ್‌ನಲ್ಲಿ ಉದ್ಯೋಗಕ್ಕೆ ಅವಕಾಶ ಬಂದಿತ್ತು. ನನಗೆ ವಯಸ್ಸಾದ ತಂದೆ ತಾಯಿಯರನ್ನು ಬಿಟ್ಟು ಹೋಗಲು ಮನಸ್ಸಿರಲಿಲ್ಲ. ನಾನು ರಾಮಾಯಣ ಪಾರಾಯಣ ಮಾಡುತ್ತಿದ್ದೆ. ಸ್ವಾಮಿಗಳು ವೈದಿಕರು ಸಹಾಯ ಮಾಡಿಸಿಕೊಳ್ಳುತ್ತಾರೆ. ನೀನು ಮದರಾಸಿಗೆ ಹೋಗು ಪರವಾಗಿಲ್ಲ ಎಂದರು. ಆ ದಿವಸ ಮಂಗಳವಾರ ಪಟ್ಟಾಭಿಷೇಕ ಮಾಡಿಸಿ ನನನು- ಮದರಾಸಿಗೆ ಕಳುಹಿಸಿದರು. ಅಲ್ಲಿ ಆರು ವರ್ಷಗಳ ಕಾಲ ಸರ್ಕಾರಿ ಉದ್ಯೋಗ ಮಾಡಿದೆ. ಬೇರೆ ಊರಿಗೆ ವರ್ಗ ಮಾಡುತ್ತಾರೆ ಎಂದು ತಿಳಿದು ಇದಕ್ಕಿಂತ ೩ ಪಟ್ಟು ಜಾಸ್ತಿ ಎಂದು ತಿಳಿದು private company ಗೆ ಸೇರಿದೆ. ಇದಕ್ಕಾಗಿ ನನಗೆ ಮದ್ರಾಸಿನಲ್ಲಿ  S. M. ಸುಂದರ ರಾಜು, N. S. ಸಂಪತ್‌ಕುಮಾರ್ ಎಂಬುವರು ತುಂಬಾ ಸಹಾಯ ಮಾಡಿದರು. Company ಯಲ್ಲಿ ಒಂದನೇ ತಾರೀಖು ಮತ್ತು ೧೫ನೇ ತಾರೀಖು incentive ಸಂಬಳ ಬರುತ್ತಿದ್ದು. ನನನು- ನವರಾತ್ರಿಯಲ್ಲಿ ೨೮ ಸಾರಿ ಶ್ರೀ ಸೂಕ್ತ ಪಾರಾಯಣ ರಾತ್ರಿ ವೇಳೆಯಲ್ಲಿ ಮಾಡು ಎಂಬುದಾಗಿ ತಿಳಿಸಿದರು. ಅದೇ ರೀತಿ ಮಾಡುತ್ತಾ ಇದ್ದೆ, ಈಗಲು ನವರಾತ್ರಿಯ ಹತ್ತು ದಿವಸಾನು ಹಗಲಿನಲ್ಲಿ ಪಾರಾಯಣ ಮಾಡುತ್ತಾ ಇದ್ದೇನೆ. ನನಗೆ ಹಣಕಾಸಿನ ಯಾವ ತೊಂದರೆಯು ಇಲ್ಲದೆ ಅನುಕೂಲವಾಯಿತು. ೧೯೬೬ರ ಮುಂಚೆ ನನ- ತಂಗಿಯರಿಗೆ ಮದುವೆ ಮಾಡಿದನಂತರ ನಾನು ವಿವಾಹವಾದೆ. ಅದಕ್ಕೂ ಸಹ ಬಂದ್ದಿದ್ದರು, ಮದರಾಸಿಗೆ ನನ- ತಂದೆ ತಾಯಿಯರನು-

ಕರೆದುಕೊಂಡು ಹೋಗಿ ಅವರಿಗೆ ಸೇತು ಸಾನ ಮಾಡಿಸಿದೆ. ನನ- ತಂದೆಗೆ ಆರೋಗ್ಯ ಸರಿ ಇಲ್ಲ ಎಂದು ತಿಳಿಸಿದರು. ನಾನು ಬಂದು ಒಂದು ದಿನದ ನಂತರ ನನ- ತಂದೆ ದೈವಾಧೀನರಾದರು. ಆಗಲೂ ಪೂರ್ವಾಶ್ರಮದಲ್ಲಿ ನನ- ತಂದೆಯ ವೈದಿಕ ಕಾರ್ಯದಲ್ಲಿ ಸಹಾಯ ಮಾಡಿದರು. Company ಯಲ್ಲಿ ನನಗೆ ೨ promotion ಮಂಗಳವಾರವೇ ಆಯಿತು. ನನಗೆ ನಿವೃತ್ತಿ ಕೂಡ ಮಂಗಳವಾರವೇ ಆಯಿತು. ನನಗೆ ೪ ಜನ ಹೆಣ್ಣು ಮಕ್ಕಳು. ನಮ್ಮ ಹೆಬ್ಬಲಗುಪ್ಪೆಯ ನರಸಿಂಹ ಸ್ವಾಮಿಗೆ ಸ್ವಾಮಿಗಳೇ ಅಭಿಷೇಕ ಮಾಡಿ ಪ್ರಾರ್ಥನೆ ಮಾಡಿದರು. ನಾನು ಆಗಲು ರಾಮಾಯಣ ಪಾರಾಯಣ ಮಾಡುತ್ತಿದ್ದೆ. ಅದಕ್ಕಾಗಿ ನನ- ಏಕೈಕ ಪುತ್ರನಿಗೆ ನರಸಿಂಹ ರಾಘವನ್ ಎಂದು ನಾಮಕರಣ ಮಾಡಿಸಿದರು. ಮಕ್ಕಳೆಲ್ಲ ಚೆನಾಗಿ ವಿದ್ಯಾವಂತರಾದರು. ಅವರುಗಳಿಗೆ ಅಲ್ಲೇ ಉದ್ಯೋಗವಾಗಿ ಮದುವೆಯಾಯಿತು. ನರಸಿಂಹ ರಾಘವನನು- ಮೈಸೂರಿನಲ್ಲಿ ವಿಧ್ಯಾಭ್ಯಾಸ ಮಾಡಿಸಿದೆ. ಅವನು ಸಹ ಚೆನಾ೧ಗಿ ಓದಿದ. ಅವನ ಉಪನಯನ ಮೈಸೂರಿನಲ್ಲಿ ಅಹೋಬಿಲ ಮಠದಲ್ಲಿ ಜರುಗಿತು. ಅದಕ್ಕೂ ಸಹ ಬಂದಿದ್ದರು. ಸ್ವಾಮಿಯವರ ಸಾರಥಿಯಾಗಿ ಕೆಲಸ ಮಾಡಿದೆ. ಎಲ್ಲರೂ ೪ ಜನ ಹೆಣ್ಣು ಮಕ್ಕಳಿಗೆ ಹೇಗೆ ಮದುವೆ ಮಾಡುವೆ ಎಂದು ಹೆದರಿಸಿದರು. ಹಯಗ್ರೀವನ ಧ್ಯಾನ ಮಾಡು ಎಂಬುದಾಗಿ ಹೇಳಿದರು ಎಲ್ಲರಿಗೂ ಸ್ವಂತ ಮನೆ ಮಕ್ಕಳು ಇದೆ. ಮಕ್ಕಳಿಗೆ ಬೇಗ ಮದುವೆ ಮಾಡುವುದಾಗಿ ಮಂತ್ರಾಕ್ಷತೆ ಕೊಟ್ಟರು. ಹಾಗೇನೆ ೩ ವರ್ಷಗಳಲ್ಲಿ ಮದುವೆಯಾಯಿತು. ಎಲ್ಲರು ಅನುಕೂಲವಾಗಿದ್ದಾರೆ. ಅವರುಗಳು ಹಯಗ್ರೀವನ ಧ್ಯಾನ ಮಾಡುತ್ತಾರೆ. ನನ- ತಾಯಿಯವರ ವೈದಿಕ ಕಾರ್ಯದಲ್ಲೂ ಕೂಡಿ ಸಹಾಯ ಮಾಡಿದರು. ಮಧರಾಸಿನಲ್ಲಿ ನನಗೆ housing board ನಲ್ಲಿ ಮನೆಯಾಯಿತು. ಅದನು- ಮಾರಿ ಮೈಸೂರಿನಲ್ಲಿ ಮನೆ ಖರೀದಿಸಿದೆ. ನಮ್ಮ ಗ್ರಾಮದಲ್ಲಿ ರೈತರಿಂದ ತೊಂದರೆಯಾಯಿತು. ತೊಂದರೆ ಹೋಗಲಿ ಎಂದು ಮಂತ್ರಾಕ್ಷತೆ ಕೊಟ್ಟರು. ತೊಂದರೆ ನಿವಾರಣೆಯಾಯಿತು. ನನ- ನಿವೃತ್ತಿಯಾದ ಮೂರು ವರ್ಷದ ನಂತರ ಹಯಗ್ರೀವನ ಕೈಂಕರ್ಯಕ್ಕೆ ಮೈಸೂರಿಗೆ ಬಂದು ಸುಮಾರು ೨೦ ವರ್ಷವಾಯಿತು. ಸ್ವಾಮಿಯ ಜೊತೆಯಲ್ಲಿ ಎಲ್ಲ ಕ್ಷೇತ್ರಗಳಿಗೂ ಹೋಗಿದ್ದೆ. ನನಗೆ ೨೦೧೨ ನಲ್ಲಿ ಶತಾಭಿಷೇಕ ಬೆಂಗಳೂರಿನಲ್ಲಿ ಆಯಿತು. ಅಲ್ಲಿಗೂ ಕೂಡ ಬಂದು ನಮ್ಮನು ಅನುಗ್ರಹಿಸಿದರು. (೨ ವರ್ಷ ಹಿಂದೆ ನನ- ಧರ್ಮ ಪತಿಯವರು ಆಚಾರ್ಯ ತಿರುವಡಿ ಸೇರಿದರು.) ನನ- ಪುತ್ರನಿಗೆ ಸ್ವಾಮಿಯವರ ಸಮುಖದಲ್ಲಿ ನಿಶ್ಚಯವಾಯಿತು. ಅವರಿಗೂ ಒಂದು ಮಗು ಇದೆ. ನನಗೆ ೧ ವರ್ಷಗಳ ಹಿಂದೆ ಆರೋಗ್ಯ ಇರಲಿಲ್ಲ. ವೈದ್ಯರೂ ಕೂಡ ಭರವಸೆ ಕೊಡಲಿಲ್ಲ. ಅಗಲೂ ಕೂಡ ಸ್ವಾಮಿಯವರು ಮಂತ್ರಾಕ್ಷತೆ ಕಳುಹಿಸಿದರು. ಈಗಲೂ ನಾನು ಅವರ ಅನುಗ್ರಹದಿಂದ ಹಯಗ್ರೀವನ ಕೈಂಕರ್ಯ ಮಾಡುತ್ತಿದ್ದೇನೆ.

ಹೆಬ್ಬಲಗುಪ್ಪೆ ತಿರುಮಲೆ ನಲ್ಲಾನ್ ಚಕ್ರವರ್ತಿ.
ಶ್ರೀನಿವಾಸಗೋಪಾಲಾಚಾರ್

॥ ಶ್ರೀಃ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ॥

# ಸತ್ಸಂಗದೊಂದಿಗೆ ಯಾತ್ರೆ

ಉ. ವೇ. ಶ್ರೀಮಾನ್ ಸಿ. ಗೋವಿಂದಾಚಾರ್

ಬೆಂಗಳೂರು

---

ಅದೊಂದು ಸಂಧಿಕಾಲ. ಅಭಿನವರಾಮಾನುಜಸ್ವಾಮಿಗಳ ನಂತರ ಶ್ರೀಮಠದ ಏಳಿಗೆ ಒಂದು ಆತಂಕದ ವಿಷಯವಾಗಿತ್ತು. ಅಂದಿನ ಸರ್ಕಾರದ ಭೂಸುಧಾರಣೆಯಿಂದ ಮಠಕ್ಕೆ ಪ್ರಯೋಜನವಾಗಲಿಲ್ಲ. ಹಣಕಾಸು ಹಾಗು ಸಿಬ್ಬಂದಿ ವರ್ಗದ ಪರಿಸ್ಥಿತಿ ಪ್ರಗತಿಯ ಹಾದಿಯನ್ನೇ ಎದುರುನೋಡುತ್ತಿತ್ತು. ಆಪತ್ಸಖನ ಸಂಕಲ್ಪದಿಂದಲೇ ಶ್ರೀಮಠವು ಬೆಳಕನ್ನು ಕಂಡಿತು. ಸ್ವಚ್ಛಂದಂ ವಂಶದ ಕೌಶಿಕ ಗೋತ್ರಜರಾದ ಶ್ರೀ ಶ್ರೀನಿವಾಸಾಚಾರ್ಯರು ಆಸ್ಥಾನದ ಮೂವತ್ತಾರನೇಯ ಪೀಠಾಧಿಪತಿಗಳಾಗಿ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಮಹಾದೇಶಿಕರಾಗಿ ಶ್ರೀಮಠದಲ್ಲಿ ತ್ರಿವಿಕ್ರಮ ಹೆಜ್ಜೆಯನ್ನಿಟ್ಟರು. ಮುಂದಿನ ದಿನಗಳಲ್ಲಿ ಒಳ್ಳೆಯ ಧಾರ್ಮಿಕ ವಾತಾವರಣ ಶ್ರೀಮಠದಲ್ಲಿ ಉಂಟಾಗುವ ಘನ ಉದ್ದೇಶದಿಂದ ದಿಗ್ವಿಜಯ ಯಾತ್ರೆಯನ್ನು ಸಂಕಲ್ಪಿಸಿದರು. ಜನಸಹಾಯ ಒದಗುವ ದೃಷ್ಟಿಯಿಂದ ಕೈಂಕರ್ಯಪರರನ್ನು ಒಟ್ಟುಗೂಡಿಸಿದರು. ನನಗೂ ಆಜ್ಞೆಮಾಡಿದರು. ನಾನು ಎದುರುತ್ತರ ಕೊಡಲಿಲ್ಲ. ತತ್ಕ್ಷಣ - "ಬರುವುದಿಲ್ಲ ಎಂದರೆ ನಿನ್ನನ್ನು ಬಿಡುವವರು ಯಾರು" ಎಂದರು. ನನ್ನ ಗುರು ಅಭಿನವ ರಾಮಾನುಜರ ಕೃಪೆಯಿಂದಲೇನನಗೆ ಯಾತ್ರಾ ಕೈಂಕರ್ಯ ಪ್ರಾಪ್ತಿಯಾಗಿದೆ ಎಂದು ಭಗವತ್ಸನ್ನಿಧಿ, ಆಚಾರ್ಯಸನ್ನಿಧಿ, ಭಾಗವತಸನ್ನಿಧಿ - ಈ ಮೂರರ ಸತ್ಸಂಗದೊಂದಿಗೆ ಸೇವೆ ಮಾಡಬಹುದೆಂದು ಮನದಟ್ಟಾಗಿ, ಯಾತ್ರಾ ಕೈಂಕರ್ಯಕ್ಕೆ ಸಿದ್ಧನಾದೆ.

ಈ ಸತ್ಸಂಗದಲ್ಲಿ ಯತಿವರ್ಯರು ನಾಯಕಮಣಿಯಂತೆ ನಾಯಕಸ್ಥಾನದಲ್ಲಿದ್ದು ಧರ್ಮ ಪ್ರಧಾನವಾದ ದಿನಚರಿ, ಸಾಂಸ್ಕೃತಿಕ ಪ್ರಚಾರದ್ವಾರ ಸಮಾಜೋದ್ಧರಣವನ್ನು ಸಂಕಲ್ಪಿಸಿದರು. ಧಾರ್ಮಿಕ ತತ್ತ್ವಗಳನ್ನು ಸಂಪ್ರದಾಯ ಕ್ರಮಗಳನ್ನು ಬಿತ್ತರಿಸಿ ಚೇತನ ವರ್ಗದವರನ್ನು ಕೃತಾರ್ಥರನ್ನಾಗಿ ಮಾಡುವುದೇ ಯಾತ್ರೆಯ ಉದ್ದೇಶ ಎಂಬುದೇ ಶ್ರೀಶ್ರೀಗಳ ಅಭಿಪ್ರಾಯ.

1992 ರಲ್ಲಿ ಯಾತ್ರೆ ಆರಂಭಗೊಂಡಿತು. ತುಂಬ ಭಾಗ್ಯವಂತ ಭಕ್ತರೆಂದರೆ ಬೆಂಗಳೂರಿನ ಖ್ಯಾತ ಗೃಹನಿರ್ಮಾಣ ಸಂಸ್ಥೆಯ ಮಾಲೀಕರಾಗಿದ್ದ ರಾಮಯ್ಯ ಕುಟುಂಬ ಹಾಗು ಬಂಧುಗಳು. ಯತಿದ್ವಯ - ಶ್ರೀಮದಭಿನವ ರಾಮಾನುಜರೂ ಹಾಗು ನೂತನ ವಾಗಧೀಶರುಗಳನ್ನು ಆಹ್ವಾನಿಸಿ ಗೌರವಿಸಿ ಹಾಗು ಸೇವೆ ಸಲ್ಲಿಸಿದರು. ಇದಾದ

ನಂತರ ಮೈಸೂರಿನಲ್ಲಿ ಅಭಿಗಮನ ಆರಾಧನೆಯನ್ನು ಮುಗಿಸಿ ತೊಂಡನೂರಿಗೆ ತೆರಳಿದ್ದು ಶ್ರೀಶ್ರೀಗಳ ಪ್ರಥಮ ಪ್ರವಾಸ. ಇಲ್ಲಿಯ ವರೆಗೆ ಕೈಗೊಂಡಿರುವ ಯಾತ್ರೆಗಳನ್ನು - ಅ) ಸತ್ಸಂಪ್ರದಾಯ ಆ) ಸ್ವಾಮಿಗಳ ಅಭಿಮತ ಇ) ಗಣ್ಯರ ಆಹ್ವಾನ ಈ) ಕಷ್ಟಕಾರ್ಪಣ್ಯಗಳ ಗೋಜಲು ಉ) ನೂತನ ಶಾಖೆಗಳು ಊ) ದೂರದ ಸಾಹಸ ಇನ್ನೂ ತತ್ಸಂಬಂಧಿತ ಶೀರ್ಷಿಕೆಗಳಡಿಯಲ್ಲಿ ಹಾಗೂ ಸ್ವಾಮಿದೇಶಿಕರ ಪಾದುಕಾ ಸಹಸ್ರದಲ್ಲಿ ಬರುವ ಅದ್ಭುತ ವಿಚಾರಸಾಮ್ಯವನ್ನು ಈ ಘಟನಾವಳಿಯೊಂದಿಗೆ ಕೊಡಲಾಗಿದೆ. ಮೊದಲನೆಯದಾಗಿ ಈ ಮೇರು ಕೃತಿಯಲ್ಲಿ **ಮಧು** ಎಂಬ ಪದವನ್ನು ಹದಿನಾರು ಬಾರಿ ಕೇಶವ ಪದವನ್ನು ಆರು ಬಾರಿ ಉಪಯೋಗಿಸಿರುವರು. ಅಂದ ಮೇಲೆ ಹಯಾಸ್ಯನನ್ನು ಚಿತ್ತದಲ್ಲಿರಿಸಿಕೊಂಡೇ ಕೃತಿರಚನೆಯನ್ನು ಮಾಡಿ ಯಶಸ್ವಿಯಾಗಿದ್ದಾರೆ ಎಂದು ಅರ್ಥವಾಗುವುದು.

## ಸಂಪ್ರದಾಯಗಳ ಹರಿವು – ಅಭಿಗಮನದ ಅದ್ಭುತ

ಪರಕಾಲಸ್ವಾಮಿ ಮಠ ಹಾಗು ತ್ರಿಕಾಲಪೂಜಾವಿಧಿ ಒಂದು ನಾಣ್ಯದ ಎರಡು ಮುಖವಿದ್ದಂತೆ. 'ಪಂಚಕಾಲಪ್ರಕಾಶ' ಎಂಬುದೇ ಆರಾಧನೆಯ ಆಧಾರ ಮೂಲ. ವಿವಿಧ ಆಸನಗಳೂ, ಉಪಚಾರಗಳೂ, ದಿವ್ಯಾಭರಣ ಪುಷ್ಪಾದಿಗಳಿಂದ ಅಲಂಕಾರಗಳನ್ನೊಳಗೊಂಡ ದೀರ್ಘಾವದಿಯಾರಾಧನೆ ಅನಾದಿ ಕಾಲದಿಂದಲೂ ಬಂದಿರುತ್ತದೆ. ಪಾದುಕಾಸಹಸ್ರದಲ್ಲಿನ ದೇಶಿಕರ ಉಕ್ತಿಯಂತೆ ಇದು **ಭೋಗಾರ್ಚನೆಯೇ** ಸರಿ (ಸಂಚಾರ ಪದ್ಧತಿ ೧೯೩) -

ಭೋಗಾರ್ಚನಾನಿ ಕೃತಿಭಿಃ ಪರಿಕಲ್ಪಿತಾನಿ ಪ್ರೀತ್ಯೈವ ರಂಗನೃಪತಿಃ ಪ್ರತಿಪದ್ಯಮಾನಃ ।
ಪಶ್ಯತ್ಸು ನಿತ್ಯಮಿತರೇಷು ಪರಿಚ್ಛದೇಷು ಪ್ರತ್ಯಾಸನಂ ಭಜತಿ ಕಾಂಚನ ಪಾದಕೇ ತ್ವಾಂ॥

ಅಭಿಗಮನದ ಆರಾಧನೆಯಲ್ಲಿ ಶ್ರೀಶ್ರೀಗಳ ಅಮೃತ ಹಸ್ತದಿಂದಲೇ ತೀರ್ಥ ಶಠಾರಿ ಸೇವೆ ಆಗುವುದೆಂದು ತಿಳಿದ ಭಕ್ತರು ತಂಡೋಪತಂಡವಾಗಿ ಬರುವರು. "ಆಚಾರ್ಯಸಾನಿಧ್ಯ ನಿಮ್ಮೊಬ್ಬರಿಗೇ ಯಾತ್ರೆಯಲ್ಲ, ನಮ್ಮೆಲ್ಲರಿಗೂ ಇದು ಯಾತ್ರೆ" ಎಂದು ಮುಂಬೈನ ದೊಂಬಿವಿಲೀ ಸ್ವಾಗತ ಸಮಿತೀಸದಸ್ಯರೂ, An abode of a saint is a pilgrimage for all ಎಂದು ಮರಾಠೀ ಭಕ್ತರು ಹೇಳಿಕೆಯನ್ನಿತ್ತರು.

ಹಯಾಸ್ಯನು ಪೂರ್ವಾಚಾರ್ಯರುಗಳಿಂದ ಅನಂತವಾಗಿ ಕೊಂಡಾಡಲ್ಪಟ್ಟು ಮಹಾಮಹಿಮೆಯುಳ್ಳ ದೇವರು ಎಂಬುದೇ ಭಕ್ತರ ಇಂಗಿತ. ಭಗವಂತನನ್ನು ತ್ವರಾತಿಶಯದಿಂದಲೂ, ಆನಂದದಿಂದಲೂ ಸೇವಿಸಲು ಭಕ್ತರು ದಿವ್ಯ ಸಾನಿಧ್ಯದೆಡೆಗೆ ಧಾವಿಸುವರು. ಈ ಅಂಶವನ್ನು ದೇಶಿಕರೂ ಅಭಿಪ್ರಾಯಪಟ್ಟಿರುತ್ತಾರೆ -

ಪದರಕ್ಷಿಣಿ ಪಾವನತ್ವಮಾಸ್ತಾಂ ರಸಿಕಾಸ್ವಾದಮತಃ ಪರಂ ನ ವಿದ್ಮಃ । (ಸಂಚಾರ ಪದ್ಧತಿ)

ಹೀಗೆ ತಿಳಿದ ಭಕ್ತರು ತಂತಮ್ಮ ಕೆಲಸಗಳ ಪ್ರಯುಕ್ತ ಬೆಳ್ಳಂಬೆಳಗ್ಗೆ ಸ್ವಾಮಿಗಳ ದರ್ಶನಕ್ಕಾಗಿ ಕಾಯುತ್ತಿದ್ದರು. ಅಲ್ಲೇ ಇರುತ್ತಿದ್ದ ನಾನು ಸ್ವಾಮಿಗಳ ಅನುಷ್ಠಾನಗಳ ಬಗ್ಗೆ ಅವರಿಗೆ ಸೂಕ್ಷ್ಮವಾಗಿ ತಿಳಿಸುತ್ತಿದ್ದೆ. ಶ್ರೀಗಳು ಅನುಷ್ಠಾನದಲ್ಲಿ ಸುಮಾರು ಎರಡು ಘಂಟೆಗಳಕಾಲ ತೊಡಗುವರು. ದಿನಚರಿಯು ಪ್ರಾತಃಕಾಲದ ದೀರ್ಘಧ್ಯಾನ ತಪಸ್ಸಿನೊಂದಿಗೆ ಆರಂಭವಾಗುವುದು. ಇದರಲ್ಲಿ ಸೇರಿದೆ - ಭಾವಶುದ್ಧಿ, ಸೌಮ್ಯತೆ, ಪರಬ್ರಹ್ಮ ಚಿಂತನೆ ಹಾಗು ಇಂದ್ರಿಯ ನಿಗ್ರಹ. ಎಲ್ಲಾ ಮಾನಸಿಕ. ಯಮ-ನಿಯಮಗಳಿಂದ ಕೂಡಿದ ವೇದ ಸಂಸ್ಕೃತಿಯು ಮುನಿಯ ಮನದಲ್ಲಿರುವುದು. ವೇದವು ಶಬ್ದದೊಂದಿಗೆ ಒಂದೊಂದು ಪದದಲ್ಲಿಯೂ ಭಗವಂತನ ದಿವ್ಯ ಸ್ವರೂಪವನ್ನು ವ್ಯಕ್ತಪಡಿಸುವುದು. ಇದರಿಂದಾಗಿ ಭಗವನ್ಮೂರ್ತಿಯ ಬಿಂಬ ಮುನಿಯ ಮನದಲ್ಲಿರುವುದು. ಇದೇ ಪರಜ್ಞಾನ.

ಮನಸಿನಿಯಮ ಯುಕ್ತೇವರ್ತಮಾನಾ ಮುನೀನಾಂ ।
ಪ್ರತಿಪದಮುಪಯಾಂತೀ ಭಾವನೀಯಕ್ರಮತ್ವಮ್ ॥ (ಪ್ರಕೀರ್ಣ ಪದ್ಧತಿ)

ಸಹಸ್ರನಾಮದಲ್ಲಿ ಭಗವಂತನನ್ನು ಮಹಾಮುನಿಯಂದೇ ಹೇಳಿದೆ. ಗಾಯತ್ರೀಜಪಕ್ಕೆ ಆದ್ಯತೆ ನೀಡಿ ಭಗವತ್ಸ್ವರೂಪವನ್ನೇ ಬಿಂಬದಲ್ಲಿರಿಸಿಕೊಂಡು ಭಗವಂತನಲ್ಲಿ ತದ್ಭಾವ ಹೊಂದಿರುವ ಸಿದ್ಧಪುರುಷರೇ ಸರಿ ನಮ್ಮ ನವ್ಯ ವಾಗೀಶಯೋಗೀಂದ್ರರು. ಇವರ ಸಿದ್ಧಿ ಯಶಸ್ಸನ್ನು ಗಮನಿಸಿದ ತಿರುಕ್ಕುಡಂದೈ ಆಂಡವನ್ ಇವರ ಪೂರ್ವಾಶ್ರಮದ ಗೃಹಕ್ಕೆ ಹೋದಾಗ, ಇವರು ಆರಾಧಿಸುತ್ತಿದ್ದ ಮತ್ಸ್ಯ ಸಾಲಗ್ರಾಮವನ್ನು ನೋಡಿ "ನಮ್ಮ ಆಶ್ರಮದ ಏಳಿಗೆಗಾಗಿ ಒಯ್ಯುತ್ತಿದ್ದೇನೆ" ಎಂದು ಹೇಳಿದರು.

ಅನುಷ್ಠಾನಾನಂತರ ದಿನಚರಿಯು ಸಫಲವಾಗಿ ನೆರವೇರಲು ಮಾನಸಿಕ ಪ್ರಾರ್ಥನೆಯೊಂದಿಗೆ ಶ್ರೀಗಳು ಸನ್ನಿಧಿಗೆ ತೆರಳಿ ಹನ್ನೆರಡು ದೀರ್ಘದಂಡ ಪ್ರಣಾಮಗಳನ್ನು ಮಾಡುವರು. ಪಾದುಕಾಸಹಸ್ರದಲ್ಲಿ ದೇಶಿಕರು ಸ್ತುತಿಸುವರು - "ಓ ಪಾದುಕಾದೇವಿಯೇ ಆದಿಶೇಷನ ಶಯನದಿಂದ ಎದ್ದು ನಿನ್ನೊಂದಿಗೆ ಆಸ್ಥಾನದ ಸಿಂಹಾಸನವನ್ನೇರುವ ಶ್ರೀರಂಗನಾಥನಿಗೆ ಶರಣು" -

ಉತ್ತಸ್ಥುಷೋ ರಂಗಶಯಸ್ಯ ಶೇಷಾತ್ ಆಸ್ಥಾನ ಸಿಂಹಾಸನಮಾರುರುಕ್ಷೋಃ ।
ಮಧ್ಯೇ ನಿಶಾಂತಂ ಮಣಿಪಾದುಕೇ ತ್ವಾಂ ಲೀಲಾಪದನ್ಯಾಸ ಸಖೀಂ ಪ್ರಪದ್ಯೇ॥

ನಂತರ ಸಂಪುಟಕ್ಕೆ ಹೊದ್ದಿರುವ ರೇಷ್ಮೇವಸ್ತ್ರವನ್ನು ಸರಿಸಿದಾಗ -

ಅ) ಸಿಂಹಾಸನದ ಪ್ರಥಮಹಂತದಲ್ಲಿ ಲಕ್ಷ್ಮೀನಾರಾಯಣ, ಲಕ್ಷ್ಮೀಹಯವದನ ಹಾಗು ವೇಣುಗೋಪಾಲ ಮೂರ್ತಿಗಳು ಗೋಚರಿಸುವುವು. "ವಾಸುದೇವನು ಸಮಸ್ತ ದೇವತೆಗಳಿಗೆ ಮೇಲಿದ್ದಾನೆ. ಇದಕ್ಕೆ ಅಧಿಕವಾದುದು ಮತ್ತೊಂದಿಲ್ಲ" - "ಅಹಮುಪರಿ ಸಮಸ್ತ ದೇವತಾನಾಂ ಉಪರಿಮಮ್ಯೈಷ ವಾಸುದೇವಃ" (ನಾದ ಪದ್ಧತಿ).

ಆ) ಸುಪ್ರಭಾತ ಪಠನ

ಇ) ಉಪನಿಷತ್ತು ಮತ್ತು ಮಹಾನಾರಾಯಣ ಪಾರಾಯಣ

ಈ) ಸ್ವಾಮಿಗಳು ಹಯಾಸ್ಯ ಮೂರ್ತಿಯನ್ನು ಶಿರಸ್ಸಿಗೆ ಸ್ಪರ್ಶಿಸಿಕೊಳ್ಳುವರು - 1) ಪರಾಗಪದ್ಧತಿಯಲ್ಲಿ ಹೀಗೆಯೇಹೇಳಿದೆ - "ನಿನ್ನನ್ನು ಭಾಗ್ಯಶಾಲಿಗಳು ತಮ್ಮ ಶಿರಸ್ಸಿನಲ್ಲಿ ಭಕ್ತಿಯಿಂದ ಧರಿಸುವವರು" - "ಕೃತಿನಃ ಶಿರಸಾ ಸಮುದ್ವಹಂತಃ ಕತಿಚಿತ್ ಕೇಶವಪಾದುಕೇ ರಜಸ್ತೇ". 2) ಭಗವಂತನನ್ನು ಶಿರಸ್ಸಿನಲ್ಲಿ ಧರಿಸಿದ ಮಾತ್ರದಿಂದಲೇ ಸದ್ಭಕ್ತರು ಜಯಶಾಲಿಗಳಾಗಿ ಬೆಳಗುತ್ತಾರೆ - "ಸಂತಃ ಶ್ರೀರಂಗ ಪೃಥ್ವೀಶ ಚರಣ ತ್ರಾಣ ಶೇಖರಾಃ । ಜಯಂತಿ ಭುವನತ್ರಾಣ ಪದಪಂಕಜ ರೇಣವಃ ॥". 3) ಮಧುವೈರಿಯಾದ ಭಗವನ್ಮೂರ್ತಿಯನ್ನು ಶಿರಸ್ಸಿನಲ್ಲಿ ಸ್ಪರ್ಶಿಸುವ ಸದ್ಭಕ್ತರೇ ಭಾಗ್ಯಶಾಲಿಗಳು. ಸಂಚಾರವೂ ಸಫಲವಾಗುವುದೂ, ಭಕ್ತರೂ ಆಕರ್ಷಿಸಲ್ಪಡುವರು - "ಶಿರಸಾ ಭವತೀಂ ದಧಾತಿ ಕಶ್ಚಿತ್ ವಿಧೃತಃ ಕೋಪಿ ಪದಸ್ಪೃಶಾ ಭವತ್ಯಾ । ಉಭಯೋಃ ಮಧುವೈರಿಪಾದರಕ್ಷೇ ತ್ವದಧೀನಾಂ ಗತಿಮಾಮನಂತಿ ಸಂತಃ ॥" (ಸಂಚಾರ ಪದ್ಧತಿ ೨೬೬).

ಹಯಾಸ್ಯಮೂರ್ತಿಯನ್ನು ಸ್ವಾಮಿಗಳು ಮಾತ್ರ ತಮ್ಮ ಹಸ್ತಗಳಿಂದ ಸ್ಪರ್ಶಿಸುವವರು. ಬೇರೆ ಆರಾಧಕರು ಅನಿವಾರ್ಯ ಸ್ಥಿತಿಗಳಲ್ಲಿ ರೇಷ್ಮೆ ವಸ್ತ್ರದೊಂದಿಗೆ ಮಾತ್ರ ಮೂರ್ತಿಗಳನ್ನು ಮುಟ್ಟಬಹುದು. ದೇಶಿಕೋಕ್ತಿಯಂತೆ ಅಭಿನವ ವಾಗೀಶರು ಹಯಾಸ್ಯನ ಸದ್ಭಕ್ತರೇ ಸರಿ. ಇನ್ನೊಬ್ಬ ಸದ್ಭಕ್ತರಿದ್ದಾರೆ - ಹಯಾಸ್ಯಪ್ರಿಯ ಪೌಂಡರೀಕಪುರಮ್ ಆಶ್ರಮದ ಸ್ವಾಮಿಗಳಾಗಿದ್ದ ಶ್ರೀಗೋಪಾಲದೇಶಿಕ ಮಹಾದೇಶಿಕರು. ಡೋಲೋತ್ಸವವೊಂದರಲ್ಲಿ ಶ್ರೀಗಳು ಹಯಾಸ್ಯಮೂರ್ತಿಯನ್ನು ಶ್ರೀಗೋಪಾಲದೇಶಿಕರ ಶಿರಸ್ಸಿಗೆ ಸ್ಪರ್ಶಿಸಿದಾಗ ಅವರು ಆನಂದ ಪರವಶರಾಗಿ ಅಂಜಲಿಯನ್ನು ಸಮರ್ಪಿಸಿದರು. ಪ್ರತಿ ಶ್ರವಣ, ಸಂಕ್ರಮಣ ಪುಣ್ಯಕಾಲಗಳಲ್ಲಿ

ದೀರ್ಘಕಾಲ ಆರಾಧನೆಯ ವಿಧಿಯಿರುವುದು. ಶ್ರವಣ ನಕ್ಷತ್ರದಂದು 1) ಪಂಚಾಮೃತ ಅಭಿಷೇಕ, ಹರಿಶಿನ ಲೇಪನ ನಂತರ 2) ರಜತ ಶಂಖಚಕ್ರ ಧಾರೆಗಳಿಂದ ಸಾಲಗ್ರಾಮಮಾಲೆಯನ್ನಿಟ್ಟ ಸಹಸ್ರಧಾರೆಯ ಮೂಲಕ ತೀರ್ಥಸ್ನಾನ 3) ಮಠದ ದೈನಂದಿನ ಪರಿಮಳತೀರ್ಥದಿಂದ ಸ್ನಾನ ಸುಮಾರು ಒಂದೂವರೆ ಘಂಟೆಗಳ ಕಾಲ ಹಿಡಿವುದು. ಮೂರ್ತಿಗಳು ತುಂಬ ಚಿಕ್ಕದಾಗಿರುವುದರಿಂದ ಅಲಂಕಾರ, ಪುಂಡ್ರ ಧಾರಣೆಗಳಿಗೆ ಇನ್ನೂಒಂದು ಘಂಟೆ ಕಾಲ ಬೇಕಾಗುವುದು. ನಂತರ ಶ್ರೀಗಳು ಬೆಳ್ಳಿ ತಟ್ಟೆಯಲ್ಲಿ ಮೂರ್ತಿಗಳನ್ನು ಇಟ್ಟು ಹತ್ತಿರ ದರ್ಶನ ಮಾಡಲು ಭಕ್ತರನ್ನು ಆಹ್ವಾನಿಸುವವರು.

## ಪ್ರಪತ್ತಿ – ಚಕ್ರಾಂಕನ

ನಿವೇದನೆ, ಶಾತ್ತುಮೊರೆಗೆ ಮುಂಚೆ ಭಕ್ತರ ಪ್ರಾರ್ಥನೆಯಂತೆ ಮೋಕ್ಷಕ್ಕಾಗಿ ಭಗವಂತನಲ್ಲಿ ಪ್ರಾರ್ಥಿಸುವುದೇ ಪ್ರಪತ್ತಿ - ಭರನ್ಯಾಸ. ಉಪನಯನ ಸಂಸ್ಕಾರ, ಗಾಯತ್ರೀಜಪ, ಚಕ್ರಾಂಕನದಿಂದ ಮಂತ್ರೋಪದೇಶ, ವೇದಾಭ್ಯಾಸಕ್ಕೆ ಅನುಮತಿ ಹಾಗು ಶರಣಾರ್ತಿಯ ಪಾಪ ಪರಿಹಾರವೇ ಪ್ರಪತ್ತಿಯ ರಹಸ್ಯ.

ಅ) ಮೃದ್ನಾಸಿ ರಂಗನೃಪತೇಃ ಮಣಿಪಾದುಕೇ ತ್ವಂ
ದುಃಖಾತ್ಮಕಾನ್ ಪ್ರಣಮತಾಂ ದುರಿತ ಪ್ರರೋಹಾನ್ ।
ಆ) ರಂಗಾಧೀಶೇ ಸ್ವಯಮುದಯಿನೀ ಕ್ಷೇಪ್ತುಮಂಧಂ ತಮಿಸ್ರಂ
ಗಾಯತ್ರೀವ ತ್ರಿಚತುರಪದಾ ಗಣ್ಯಸೇ ಪಾದುಕೇ ತ್ವಂ ।

(ಸಂಚಾರ ಪದ್ಧತಿ)

ಮಠದ ಇತಿಹಾಸದಲ್ಲಿ 2008 ರ ಕೇರಳದ ಸುಲ್ತಾನ್ಬತೇರಿ ಸಮೀಪ ನರಸಿಂಹ ಕ್ಷೇತ್ರಕ್ಕೆ ಎರಡು ದಿನಗಳ ಭೇಟಿ ಗಮನಾರ್ಹ. ಸೇರಿದ ದಿನವೇ ರಾತ್ರಿ ಸುಮಾರು ಎಂಭತ್ತು ಭಕ್ತರು ಚಕ್ರಾಂಕನಕ್ಕೆ ಪ್ರಾರ್ಥಿಸಿದರು. ಪ್ರಾತಃಕಾಲ ಇನ್ನೂ ಮೂವತ್ತು ಭಕ್ತರು ನೋಂದಾಯಿಸಿದರು. ಮುದ್ರಾಧಾರಣೆ ಜರಗುತ್ತಿರುವಾಗ ಇನ್ನೂ ಇಪ್ಪತ್ತೈದು ಭಕ್ತರು ಸಾಲಿನಲ್ಲಿ ನಿಂತರು. ಹೀಗೆಯೇ ಇದಕ್ಕೆ ಹಲವಾರು ತಿಂಗಳ ಹಿಂದೆ ಸಿಂಧುವಳ್ಳೀ ಗ್ರಾಮದಲ್ಲಿ ಸಾಮೂಹಿಕ ಚಕ್ರಾಂಕನವಾಗಿತ್ತು. ಸಣ್ಣ ಪುಟ್ಟ ಹುಡುಗರಿಗೆ ಇದೊಂದು ಪ್ರಯಾಸ ಕಾರ್ಯವೇ ಸರಿ. ಚೆನ್ನಾಗಿ ಕಾದ ಮುದ್ರೆಗಳನ್ನು ನೋಡಿದ ಹುಡುಗರು ಅಳುವರು ಇಲ್ಲ ಓಡುವರು. ಹೇಗೆ ಭಯದಿಂದ ಪ್ರಜ್ಞೇ ತಪ್ಪಿ ಬಿದ್ದವರು ಅಹಮದಾಬಾದಿನ ಪಟೇಲರ ಧರ್ಮಪತ್ನಿ. ಯಾತ್ರೆಯಿಂದಾಗಿ ಇದುವರೆಗೆ 2000 ಕ್ಕೂ ಹೆಚ್ಚು ಶಿಷ್ಯರು ಶ್ರೀಮಠಕ್ಕೆ ಅನ್ವಯಿಸಿರುತ್ತಾರೆ.

## ಉಪನ್ಯಾಸಗಳ ಸುಮನೋಮಾಲಾ

ಆಚಾರ್ಯಮುಖೇನ ರಹಸ್ಯತ್ರಯವನ್ನು, ಪ್ರಪತ್ತ್ಯಾದಿಗಳಿಂದ ಮೋಕ್ಷದೆಶೆಯಲ್ಲಿ ಭಗವದನುಭವವನ್ನು ಪಡೆಯುವುದೇ ರಾಮಾನುಜ ಸಿದ್ಧಾಂತ ಎಂದು ರಹಸ್ಯವಾಗಿ ಹೇಳಿ, ಇದನ್ನೇ ಸ್ವಲ್ಪ ವಿಸ್ತಾರವಾಗಿ ಸಭೆಗಳಲ್ಲಿ ಹೇಳುವುದೇ ಉಪನ್ಯಾಸದಮೂಲ. ೨೦೦೦ ದ ಮುಂಬೈ ಯಾತ್ರೆಯಲ್ಲಿ ಶ್ರೀವೈಷ್ಣವ ಸಮುದಾಯದ ಕೃಷ್ಣಸಭೆಯಲ್ಲಿ ಮಾತಿನ ಸರಣಿಯಲ್ಲಿ ಶ್ರೀಗಳು ಚೇತನೋದ್ಧರಣಕ್ಕಾಗಿ ಭಗವಂತನು ಆಳ್ವಾರರನ್ನು ಪ್ರತಿನಿಧಿಯಾಗಿ ಭೂಲೋಕಕ್ಕೆ ಕಳುಹಿಸಿದ್ದಾನೆ ಎಂದು ಹೇಳಿದಾಗ ಭಕ್ತರಲ್ಲಿ ಆಸಕ್ತಿಯುಂಟಾಗಿ ಮುಂದಿನ ಕಾರ್ಯಕ್ರಮದ ಸ್ಥಳ ದೇಶಿಕಸಭೆಯಲ್ಲಿ ಇದೇಉಪನ್ಯಾಸಕ್ಕೆ ವಿಷಯವಾಯಿತು.

ಚೆನ್ನೈ ಯಾತ್ರೆಯಲ್ಲಿ ಮೈಲಾಪುರದ ದೇಶಿಕ ಸನ್ನಿಧಿಯಲ್ಲಿ ತೆಂಗಲೈ ವಡಗಲೈ ಬಿಕ್ಕಟ್ಟಿನ ಬಗ್ಗೆ ಶ್ರೀಗಳು "ಎರಡೂ ಪಂಗಡಗಳ ನಡುವೆ ಶೇಖಡ ಒಂದು ಹತ್ತರಷ್ಟು ಮಾತ್ರ ವ್ಯತ್ಯಾಸವಿದೆಯೇ ವಿನಃ ದ್ವೇಷ ಭಾವನೆ ಮೂಡಿಸುವಂತಃ ವ್ಯತ್ಯಾಸಗಳಿಲ್ಲ" ಎಂದು ಸಮಾಧಾನಕರವಾಗಿ ಹೇಳಿ ದೇಶಿಕ ಸಂಪ್ರದಾಯದ ಬಗ್ಗೆ ರಸವತ್ತಾಗಿ ಉಪನ್ಯಾಸ ಮಾಡಿದರು.

ತಿರುಪ್ಪಾವೈ ಉಪನ್ಯಾಸ ಧನುರ್ಮಾಸದ ಯಾತ್ರೆಯ ಅವಿಭಾಜ್ಯ ಅಂಗವೇ ಸರಿ. ಮುಂಬೈ ಯಾತ್ರೆಯಲ್ಲಿ ದೊಂಬಿವಿಲೀ ಬಾಲಾಜೀ ಮಂದಿರದಲ್ಲಿ ಹಾಗು ಚೆಂಬೂರಿನ ಅಹೋಬಿಲ ಮಠದಲ್ಲಿ ತಲಾ ಹದಿನೈದು ದಿವಸಗಳಲ್ಲಿ ದಿನಕ್ಕೆ ಎರಡೆರಡು ಪಾಶುರಗಳು, 2002, 2005, 2006 ರ ಹೈದರಾಬಾದು ದೇಶಿಕ ಸಭೆಯಲ್ಲಿ, ಚೆನ್ನೈನ ನಂಗನಲ್ಲೂರಿನ ಹಯಗ್ರೀವ ದೇವಸ್ಥಾನದಲ್ಲಿ ಹೀಗೆಯೇ ೧೫ ದಿನಗಳು ಯಶಸ್ವಿಯಾಗಿ ನಡೆಸಿದರು.

ಹಯಗ್ರೀವ ಅವತಾರದ ಬಗ್ಗೆ ಉಪನ್ಯಾಸ ಮಾಡುವಾಗಲೆಲ್ಲಾ ಶ್ರೀಗಳು ಮಹಾಭಾರತದ ಶಾಂತಿಪರ್ವ ಮೋಕ್ಷಧರ್ಮಘಟ್ಟದಲ್ಲಿ ಬರುವ ವಿಚಾರ, ದೇಶಿಕರ ಹಯಗ್ರೀವ ಸ್ತೋತ್ರ, ಅಭಿನವ ರಂಗನಾಥರ ಹಯಶಿರೋಪಾಖ್ಯಾನದ ಬಗ್ಗೆ ವಿಸ್ತಾರ ವ್ಯಾಖ್ಯಾನ ಹಾಗು ಹಯಗ್ರೀವ ರತ್ನಮಾಲಾ ಸ್ತೋತ್ರ ಮುಂತಾದ ಆಧಾರಗಳಿಂದ ಉಪನ್ಯಾಸ ಮಾಡುತ್ತಿದ್ದರು. ಉಪಸಂಹಾರದ ಘಟ್ಟದಲ್ಲಿ ಹಯಾಸ್ಯ-ಪರಕಾಲಮಠದ ಸಂಬಂಧ, ಮಠದ ಇತಿಹಾಸ, ಗುರುಪರಂಪರೆಯಲ್ಲಿ ಬರುವ ಯತಿವರ್ಯರು, ಅದರಲ್ಲಿಯೂ ವಿಶೇಷವಾಗಿ ಶ್ರೀಬ್ರಹ್ಮತಂತ್ರ ಸ್ವಾಮಿ, ಶ್ರೀ ವಾತ್ಸ್ಯ ವರದರು, ಶ್ರೀಮಹಾಪರಕಾಲ ಸ್ವಾಮಿ, ಶ್ರೀ ಅಭಿನವ ರಂಗನಾಥರ ಕೊಡುಗೆಗಳನ್ನು ಪ್ರಕಾಶಪಡಿಸುತ್ತಿದ್ದರು.

1994 ರ ಅಹೋಬಿಲ ಪ್ರವಾಸದಿಂದ ಹಿಂತಿರುಗುತ್ತಿರುವಾಗ ಅನುಷ್ಠಾನಕ್ಕಾಗಿ ಮೂರು ಘಂಟೆಗಳ ಕಾಲ ಕದಿರಿ ನರಸಿಂಹ ಕ್ಷೇತ್ರದಲ್ಲಿ ತಂಗಿದ್ದರು. ಭಕ್ತರ ಪ್ರಾರ್ಥನೆಯ ಮೇರೆಗೆ ಅವತಾರದ ಬಗ್ಗೆ ಪ್ರಥಮ ಬಾರಿ ತೆಲುಗಿನಲ್ಲಿ ಉಪನ್ಯಾಸ ಮಾಡಿದರು. ದೇಶಿಕರ ಶ್ರೀಸ್ತುತಿಯಲ್ಲಿ ಬರುವ '**ಮಧುವಿಜಯಿನೋ**' ಪದಪುಂಜವನ್ನು ವ್ಯಾಖ್ಯಾನಿಸಿದರು.

2001 ಸೆಪ್ಟೆಂಬರ್ 24, ಮಧ್ಯಾಹ್ನ 3 ಘಂಟೆಗೆ ತಿರುಮಲೆಯ ಶಾಖೆ ಹಯಗ್ರೀವ ಕಲ್ಯಾಣ ಮಂಟಪದಲ್ಲಿ "ಶ್ರೀನಿವಾಸ ಹಾಗು ವ್ಯೂಹ ಪಂಚಕ" ಎಂಬ ವಿಷಯದ ಬಗ್ಗೆ ವಿದ್ವತ್ಸಭೆ. ಅಭಿನವ ವಾಗೀಶರು, ರಂಗಪ್ರಿಯ ಸ್ವಾಮಿಗಳೂ ಹಾಗು ಕಾಂಚೀಸ್ವಾಮಿಗಳು ಉಪಸ್ಥಿತರಿದ್ದರು. ಶ್ರೀಗಳ ಅನಿಸಿಕೆ - ಅ) ಪ್ರಥಮವಾಗಿ ಅಭಿನವ ರಂಗನಾಥರ ಸಂಕಲ್ಪ ಹಾಗು ಅಭೀಚ್ಛೆಯಾಗಿ ಈ ವಿದ್ವತ್ಸದಸ್ಸು ಏರ್ಪಾಡಾಗಿದೆ. ಆ) ವ್ಯೂಹಾಕಾರಿಯೇ ನಮ್ಮ ಹಯಗ್ರೀವ. "ವಾಗೀಶಾಖ್ಯಾ ವಾಸುದೇವಸ್ಸಮೂರ್ತಿಃ" ಎಂಬ ಹಯಗ್ರೀವಸ್ತೋತ್ರದಲ್ಲಿ ಬರುವ ಪದಪುಂಜದ ಉಲ್ಲೇಖ. ಇ) ಹಯಗ್ರೀವ-ಶ್ರೀನಿವಾಸ ಇಬ್ಬರೂ ಶ್ರವಣನಕ್ಷತ್ರ ಮೂರ್ತಿಗಳು. ಈ) ವ್ಯೂಹ ಚತುಷ್ಟಯದಲ್ಲಿ ಅನಿರುದ್ಧನೇ ಹಯಗ್ರೀವರೂಪಿಯಾಗಿ ಸಂಕಲ್ಪಿಸಿದ ಪ್ರಥಮ ವ್ಯಾಪಾರವೇ ರಜಸ್ತಮೋಗುಣಗಳನ್ನು ಎದುರಿಸಿ ನಿಯಂತ್ರಿಸುವ ಸತ್ತ್ವ ಗುಣ. ಇದೇ ಅವತಾರದ ತತ್ತ್ವವೂ ಆಗಿದೆ. ಆದ್ದರಿಂದ ಇದು ಉಪದೇಶಾವತಾರ.

ಶ್ರೀರಂಗಪ್ರಿಯ ಸ್ವಾಮಿಗಳು ಎರಡೂಮೂರ್ತಿಗಳ ಸರ್ವೇಶ್ವರತ್ತ್ವವನ್ನು ಹೇಳಿ ವ್ಯೂಹ-ಪರ ವಾಸುದೇವರುಗಳ ಬಗ್ಗೆ ವಿಸ್ತಾರವಾಗಿ ಪ್ರತಿಪಾದಿಸಿದರು. ಅದ್ವೈತಿಗಳಲ್ಲೂ ಹಯಗ್ರೀವೋಪಾಸಕರಿದ್ದಾರೆಂದು ಕಂಚೀ ಸ್ವಾಮಿಗಳು ಹೇಳಿದರು. ವ್ಯೂಹ ಪಂಚಕದಲ್ಲಿ ಪರ, ವ್ಯೂಹ, ಹಾರ್ದ, ವಿಭವಗಳ ಬಗ್ಗೆ ತುಂಬ ಸಂಕ್ಷಿಪ್ತವಾಗಿಯೂ, ಅರ್ಚೆಯಲ್ಲಿ ಶ್ರೀನಿವಾಸ ಮೂರ್ತಿಯ ಸಾನ್ನಿಧ್ಯಮೂರ್ತಿಯನ್ನು ಚರ್ಚಿಸಲಾಯಿತು.

ವಿಲ್ಲಿವಳಂ ಅಳಗಿಯಸಿಂಗರ್ ಸ್ವಾಮಿ ತಿರುನಕ್ಷತ್ರದಂದು ಅಭಿನವ ವಾಗೀಶರು, ಹಯಗ್ರೀವ-ನರಸಿಂಹ ಮೂರ್ತಿಗಳ ಸಾಮ್ಯಾದ್ಭುತವನ್ನು ಭಾಗವತದ ಪ್ರಹ್ಲಾದಸ್ತುತಿ ಅಧ್ಯಾಯದ ಆಧಾರಗಳಿಂದ ರಸವತ್ತಾಗಿ ಹೇಳಿದರು - ೧) ಹಂಸಾವತಾರಿಯೂ, ಅಚ್ಯುತನೂ, ಆದಿದೇವನೂ ಆದ ವಿಷ್ಣುವೇ ವೇದೋದ್ಧರಣಕ್ಕಾಗಿ ಹಯಗ್ರೀವಾವರಾರವನ್ನು ಎತ್ತಿದನು (೧೧-೪-೧೭) - "ಹಂಸಸ್ವರೂಪ್ಯ ವದಚ್ಯುತ ವಿಷ್ಣುಃ ಮಧುಭಿದಾಶ್ರುತಯೋ ಹಯಾಸ್ಯೇ". ೨) ರಜಸ್ತಮೋಗುಣರೂಪಿಗಳಾದ ಮಧು-ಕೈಟಭರೆಂಬ ದೈತ್ಯರನ್ನು ಸಂಹರಿಸಿ ವೇದವನ್ನು ಮರಳಿ ಬ್ರಹ್ಮನಿಗೆ ಹಿಂದಿರುಗಿಸಿದವನೇ, ಮಹಾವಿಷ್ಣುವೇ, ನರಸಿಂಹನೇ, ಹಯಗ್ರೀವರೂಪದಲ್ಲಿ ಅವತರಿಸಿದವನೇ ರಜಸ್ತಮೋಗುಣಗಳನ್ನು ನಿಗ್ರಹಿಸಿದ **ಸತ್ತ್ವವೇ** ನಿನಗೆ ಪ್ರಿಯವಾದ ದೇಹವೆಂದು ಜ್ಞಾನಿಗಳು ಹೇಳುವರು.

ಆದ್ಯಂತ ವಂತ ಉರುಗಾಯೋ ನೃಸಿಂಹ ತಸ್ಮೈ ಭವಾನ್
ಹಯಶಿರಸ್ತನುವಂ ಚ ಬಿಭ್ರದ್ವೇದದ್ರುಹಾವತಿ ಮಧುಕೈಟಭಾಖ್ಯಾ
ಹತ್ವಾ ನಯಚ್ಛ್ರುತಿಗಣಾಂಸ್ತು ರಜಸ್ತಮಶ್ಚ ಸತ್ತ್ವಂ ತವ
ಪ್ರಿಯತಮಾಂ ತನು ಮಾಮನಂತಿ (ಭಾಗವತ - ೭-೯-೩೭)

ಪೌಂಡರೀಕಪುರಮ್ ಸ್ವಾಮಿ ಆಶ್ರಮಕ್ಕೆ ಹೋದಾಗಲೆಲ್ಲಾ ಶ್ರೀ ಗೋಪಾಲ ದೇಶಿಕರು ಅವತಾರದ ಬಗ್ಗೆ ಲಘು ಉಪನ್ಯಾಸವನ್ನು ಮೈಸೂರು ಮಠದಲ್ಲಿ ಪೂರ್ವಾಶ್ರಮದಲ್ಲಿ ತಮಗಾದ ಅನುಭವವನ್ನು ಹೇಳುತ್ತಿದ್ದರು. ಅಭಿನವ ವಾಗೀಶರಿಂದ ಉಪಸಂಹಾರದೊಂದಿಗೆ ಉಪನ್ಯಾಸವು ಮುಕ್ತಾಯವಾಗುತ್ತಿತ್ತು.

ಉಪನ್ಯಾಸಗಳ ನಂತರ ಭಕ್ತರ ಪ್ರಶ್ನೆ ಸಂದೇಹಗಳಿಗೆ ಶ್ರೀಗಳು ಸ್ಪಂದಿಸುತ್ತಿದ್ದರು. ಹಾಗೆಯೇಕೆಲ ಭಕ್ತರು ತಂತಮ್ಮ ಕಷ್ಟ ಕಾರ್ಪಣ್ಯಗಳನ್ನು ಅವುಗಳಿಗೆ ಪರಿಹಾರವನ್ನು ಪ್ರಾರ್ಥಿಸಿದಾಗ "ಹಯಗ್ರೀವನನ್ನು ಪ್ರಾರ್ಥಿಸಿ, ಸ್ತುತಿಸಿ, ಮಠಕ್ಕೆ ಆಗಿಂದಾಗ್ಗೆ ಬಂದು ತೀರ್ಥ, ಶಠಾರಿ ಪ್ರಸಾದಾದಿಗಳನ್ನು ಸ್ವೀಕರಿಸಿರಿ"ಎಂದು ಸಲಹೆ ಕೊಟ್ಟು, ಒಂದು ಹಿಡಿ ಫಲಮಂತ್ರಾಕ್ಷತೆಯನ್ನು ದೇವಸ್ಮರಣೆಯೊಂದಿಗೆ ಭಕ್ತರಿಗೆ ಕೊಡುತ್ತಿದ್ದರು.

## ಡೋಲೋತ್ಸವಗಳು

ಮಠದ ಎರಡು ವಾಹನಗಳಲ್ಲಿ "ಹಯಗ್ರೀವ ಬಂಡಿ"ಎಂದು ಕರೆಯಲ್ಪಡುವ ವಾಹನದಲ್ಲಿ ದೈವಮೂರ್ತಿಗಳೂ, ಆಳ್ವಾರಾಚಾರ್ಯರನ್ನೊಳಗೊಂಡ ಸಂಪುಟಗಳೂ, ಡೋಲ್ ಪೆಟ್ಟಿಗೆ, ಆರಾಧನೆಯ ಪಾತ್ರೆಗಳಿರುವ ಪೆಟ್ಟಿಗೆ, ಹನ್ನೆರಡು ಆರತಿಗಳ ಪೆಟ್ಟಿಗೆ, ಕಬ್ಬಿಣದ ಸ್ತಂಭಗಳು ಇತ್ಯಾದಿ. ಇನ್ನೊಂದರಲ್ಲಿ (ಸ್ವಾಮಿಗಳ ಬಂಡಿ), ಸ್ವಾಮಿಗಳು, ಸಹಾಯಕರು ಹಾಗು ಯಾತ್ರಾಸಮಿತಿಯ ಕೆಲವು ಸದಸ್ಯರು.ಮೊದಲು ದೇವರ ವಹನವು, ಅದರಲ್ಲಿ ಅರ್ಚಕರು,

ಕೈಂಕರ್ಯಪರರೂ ಸೇರಿ ಹೊರಡುವುದು. ಸೇವಾರ್ಥಕಾರರ ಗೃಹದಲ್ಲಿ ಸಿದ್ಧಪಡಿಸುವುದಕ್ಕೆ ಅರ್ಧ ಘಂಟೆಯ ಕಾಲ ಬೇಕಾಗುವುದು. ಆರಾಧನೆಗೆ ಇನ್ನೂಒಂದು ಘಂಟೆಯ ಕಾಲ ಬೇಕಾಗುವುದು. ಸಾಮಾನ್ಯ ದಿನಗಳಲ್ಲಿ ಏಕಮುಖ ಆರತಿ, ಕುಂಭಾರತಿ ಹಾಗು ೫೬ ಮುಖಗಳುಳ್ಳ ರಥಾರತಿ, ಈಮೂರು ಮಾತ್ರವಿರುವುದು. ಶುಕ್ರವಾರ ಸಂಜೆ, ಶ್ರವಣ ಹಾಗು ತಿರುನಕ್ಷತ್ರಗಳಂದು ೧೨ ಆರತಿಗಳನ್ನು ಬೆಳಗಿಸಲಾಗುವುದು. ಭದ್ರತಾ ದೃಷ್ಟಿಯಿಂದ ವಜ್ರ ಡೋಳಿಕೆಯನ್ನು ಆಸ್ಥಾನದಿಂದ ಹೊರತರಲಾಗದು. ಅದರ ಸಂಚಾರ ಅಭಿನವ ರಾಮಾನುಜರ ಕಾಲಕ್ಕೇ ಕೊನೆಗೊಂಡಿತು. ಅನಿವಾರ್ಯವಾದಾಗ, ಶ್ರೀಗಳೇ ಡೋಲಾರಾಧನೆಯನ್ನು ಮಾಡಿ, ಮೂರ್ತಿಗಳನ್ನು ಭಕ್ತರಿಗೆ ತೋರಿಸುತ್ತಾ ಆಕರ್ಷಿತವಾಗಿ ವಿಷಯಗಳನ್ನು ಹೇಳುವರು.

1997ರ ಚೆನ್ನೈ ಸಂಯುಕ್ತಯಾತ್ರೆಯಲ್ಲಿ ಕಾರ್ಯಕಾರಿ ಸಮಿತಿಯಿಂದ ೧೩೫ ಡೋಲೋತ್ಸವಗಳನ್ನು, 2000 ದ ಮುಂಬೈ ಯಾತ್ರೆಯಲ್ಲಿ ದೂರ ದೂರದ ಬಡಾವಣೆಗಳಲ್ಲಿ ೩೫ ಡೋಲೋತ್ಸವಗಳನ್ನು ಏರ್ಪಡಿಸಲಾಗಿತ್ತು. ತುಂಬಾ ಸಿರಿವಂತ ಡೋಲೋತ್ಸವವೆಂದರೆ ಹೈದರಾಬಾದಿನಲ್ಲಿ ಗದ್ವಾಲ್ ಸಂಸ್ಥಾನದ ರಾಮಭೂಪಾಲ ವಂಶಜರು ಏರ್ಪಡಿಸಿದ್ದು. ಅರಮನೆಯೋ ಎಂಬಂತಿರುವ ಮಹಲಿನಲ್ಲಿ ಅ) ಚಪ್ಪರ ತೋರಣಗಳ ಮಹಾದ್ವಾರ, ಚಿಲುಮೆಗಳು ಆ)ವಿವಿಧ ಪುಷ್ಪ ವೃಕ್ಷಗಳೂ, ಬೋಗನ್ವಿಲ್ಲಾ, ಇಫ್ಲೋರಾ ಪತ್ರರೀತಿಯ ಪುಷ್ಪಗಳೂ, ಬಳ್ಳಿಗಳೂ ಇ)ಅದ್ಭುತ ದೀಪಾಲಂಕಾರ ಈ) ೧೦-೧೫ ದೊಡ್ಡ ಕುಕ್ಕೆಗಳಲ್ಲಿ ವಿವಿಧ ಫಲ-ಪಷ್ಪಗಳೂ, ಘನ ಪುಷ್ಪಹಾರಗಳೂ, ಉ) ಬಾದಾಮಿ-ಗೋಡಂಬಿ-ದ್ರಾಕ್ಷಿಗಳುಳ್ಳ ತಟ್ಟೆಗಳೂ ಊ) ಕುಂಚ ಕಲೆಗಾರ ರಾಜ ರವಿವರ್ಮನ ಚಿತ್ರಪಟಗಳಿಂದಲಂಕರಿಸಲ್ಪಟ್ಟ ಗೋಡೆಗಳೂ ಋ) ಶ್ರೀಮಂತ ಪೂಜಾಗೃಹ ಇತ್ಯಾದಿ ವೈಭವಗಳು. ಪಷ್ಪಾಲಂಕಾರಕ್ಕೆ ೪೫ ನಿಮಿಷಗಳು ಹಿಡಿದವು. ನೂರಾರು ಗಣ್ಯರು ಪಾಲ್ಗೊಂಡಿದ್ದರು. ಶ್ರೀಗಳಿಂದ ೧೨ ಆರತಿಗಳೊಂದಿಗೆ ಮುಗಿದು, ಪ್ರಸಾದ ವಿನಿಯೋಗ, ಸ್ವಾಮಿಗಳಿಂದ ಫಲಮಂತ್ರಾಕ್ಷತೆ ಹಾಗು ಅನುಗ್ರಹಕ್ಕೆ ಇನ್ನೂ ೧ ಘಂಟೆಯ ಕಾಲವು ಹಿಡಿಯಿತು. ಸೇವಾರ್ಥಕಾರರ ಹಾಗು ಶ್ರೀಗಳ ನಡುವೆ ಹಿಂದಿನ ಐತಿಹಾಸಿಕ ವಿಷಯ ಚರ್ಚಿಸಲಾಗುತ್ತಿತ್ತು. ಎಲ್ಲರೂ ಕನ್ನಡ ಭಾಷೆಯನ್ನು ಬಳಸುತ್ತಿದ್ದರು.

ಕೆಲವೊಮ್ಮೆ ಗೃಹಸ್ಥರ ಮನೆಯಲ್ಲಿ ಸಿದ್ಧವಾಗುತ್ತಿರುವಾಗಲೆಯೇಶ್ರೀಗಳು ಇನ್ನೊಬ್ಬ ಭಕ್ತರ ಮನೆಗೆ "ಪೊನ್ನಡಿ"ಎಂದು ಕರೆಯಲ್ಪಡುವ ಪಾದಪೂಜೆಗೆ ದಯಮಾಡಿಸುತ್ತಿದ್ದರು. ೨೦೦೨ ರಲ್ಲಿ ಚಿತ್ತೂರಿನ ನ್ಯೂಟ್ರೀನ್ ಕಾರ್ಖಾನೆಯಲ್ಲಿ ಡೋಲೋತ್ಸವ ಆರಂಭದಲ್ಲಿಯೇ ಸಂಸ್ಥೆಯ ವೀಕ್ಷಣೆ, ಪ್ರತಿ ಭಾಗ-ವಿಭಾಗಗಳಿಗೆ ಫಲಮಂತ್ರಾಕ್ಷತೆಯನ್ನು ಅನುಗ್ರಹಿಸಿದರು.

ಮೈಸೂರು ಅರಸರ ದಸರ ಮಹೋತ್ಸವ, ವರ್ಧಂತಿ ಅಥವಾ ಯಾವುದೇಶುಭಕಾರ್ಯದ ಮುಂಚೆ ಪಾದಪೂಜೆ ಮಾಡುವುದು ಅನಾದಿ ಕಾಲದಿಂದಲೂ ಸಾಂಪ್ರದಾಯಿಕವಾಗಿ ಬಂದಿರುತ್ತದೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರವರು ಕಳೆದ ಹಲವಾರು ವರ್ಷಗಳಿಂದ ಬೆಂಗಳೂರು ಅರಮನೆಯಲ್ಲಿ ಅಭಿನವ ವಾಗೀಶರನ್ನು ಆಹ್ವಾನಿಸಿ ಪಾದಪೂಜೆಯನ್ನು ಮಾಡಿರುತ್ತಾರೆ. ಇದೊಂದು ೩/೪ ಘಂಟೆಗಳ ಕಾರ್ಯಕ್ರಮ. ಶ್ರೀಮಠದಿಂದ ತುಳಸೀ, ಪುಷ್ಪ, ತೀರ್ಥ ಪ್ರಸಾದ, ರಾಜದಂಪತಿಗಳಿಗೆ ಪುಷ್ಪಹಾರಗಳು, ವಸ್ತ್ರಗಳು, ಸುಮಂಗಲಿಯರಿಗೆ ತಾಂಬೂಲ ಹಾಗು ರಾಜದಂಪತಿಗಳಿಗೆ ವೇದೋಕ್ತವಾದ ಆಶೀರ್ವಾದದೊಂದಿಗೆ ಮುಕ್ತಾಯವಾಗುತ್ತಿತ್ತು.

## ಸಂಪ್ರದಾಯ ವಿಶೇಷಣಗಳು

೧) ಚೆನ್ನೈ ಯಾತ್ರೆಯಲ್ಲಿ ಕಂಚೀ ದ್ವಾರ ಹೋದಾಗ ಇದುವರೆಗೂ ಮೂರು ಬಾರಿ ಪೆರುಮಾಳ್ ಕೋಯಿಲಿಂದ ಪ್ರಥಮ ದರ್ಜೆ ಮರ್ಯಾದೆಯಾಗಿದೆ. ಒಂದು ದಿನದ ಅವಧಿಯಲ್ಲಿ ತೂಪ್ಪುಲ್ ಮಠದಲ್ಲಿ ಅಭಿಗಮನ ಆರಾಧನೆ, ನಂತರ ದೇಶಿಕ ಹಾಗು ದೀಪಪ್ರಕಾಶರ ಸನ್ನಿಧಿಗಳಿಗೆ ಹೋಗಿ, ಭಿಕ್ಷಾನಂತರ ಪ್ರಯಾಣ ಮುಂದುವರಿಸಲಾಗುವುದು. ವೈಶಾಖ ಮಾಸದಲ್ಲಿ ಚೆನ್ನೈನಲ್ಲಿ ಬಿಡಾರ ಮಾಡಿದ್ದರೆ ಕಂಚೀ ಗರುಡೋತ್ಸವವನ್ನು, ಇನ್ನೂ 2002 ರಲ್ಲಿ ಪುಷ್ಯಮಾಸದಲ್ಲಿ ಬರುವ ಅನುಷ್ಠಾನೋತ್ಸವವನ್ನು ಸೇವೆ ಮಾಡಿದ್ದಾರೆ. ಪಾಂಡಿಚ್ಚೇರಿ ಯಾತ್ರೆಯಲ್ಲಿ ತಿರುವಹೀಂದ್ರಪುರ ಸಂದರ್ಶನ, ಮೇಲುಕೋಟೆ ವೈರಮುಡಿ ಬ್ರಹ್ಮೋತ್ಸವದಲ್ಲಿ ಕಲ್ಯಾಣೋತ್ಸವವು ಪರಂಪರೆಯಾಗಿ ಬಂದಿರುವ ಮಠದ ಕೈಂಕರ್ಯವಾಗಿದೆ. ವೈರಮುಡಿ ಧಾರಣೆಗೆ ಮುಂಚೆ ಶ್ರೀಗಳು ತಿರುನಾರಾಯಣನ ಸನ್ನಿಧಿಗೆ ತೆರಳುವರು. ಈ ಹತ್ತೂ ದಿನಗಳಲ್ಲಿ ಶ್ರೀಮಠದವತಿಯಿಂದ ಅನ್ನ ಸಂತರ್ಪಣೆ ನಡೆಯುವುದು. ೨) ಅವಭೃತೋತ್ಸವಕ್ಕಾಗಿ ಸತ್ಯಾಕಾಲಕ್ಕೆ ತೆರಳುವರು. ೩) ಪ್ರತಿ ವರ್ಷವೂ ಚಾತುರ್ಮಾಸದ ಅಂತಿಮ ಕಾರ್ಯಕ್ರಮವಾದ "ಉತ್ಥಾನ" ಶ್ರೀರಂಗಪಟ್ಟಣದ ಕೊಪ್ಪಲ್ ಮಠದಲ್ಲಿ ಜರುಗುವುದು. ಅಂದು ಸ್ವಾಮಿಗಳು ಕಾವೇರಿ ನದಿಯಲ್ಲಿ ಮಿಂದು ಪ್ರಾಚೀನಕಾಲದಿಂದಲೂ ಬಂದಿರುವ ಸಣ್ಣ ಸಂಪುಟದ ಮೂರ್ತಿಗಳಿಗೆ ಅವಭೃತಸ್ನಾನಾನಂತರ ಮಠಕ್ಕೆ ದಯಮಾಡಿಸಿ ಆರಾಧನೆ, ತೀರ್ಥಶಠಾರಿ, ಶ್ರೀನಿವಾಸ ಬ್ರಹ್ಮತಂತ್ರ ಪರಕಾಲ ಸ್ವಾಮಿ ಹಾಗು ಶ್ರೀನಿವಾಸ ದೇಶಿಕೇಂದ್ರಸ್ವಾಮಿಗಳ ಬೃಂದಾವನಗಳನ್ನು ಪ್ರದಕ್ಷಿಣೆ ಮಾಡುವರು. ಹೀಗೆ ಮಂಗಳಕರವಾಗಿ ಮುಕ್ತಾಯಗೊಂಡ ವ್ರತದಲ್ಲಿ ಭಾಗವಹಿಸಿದ್ದ ಭಾಗವತ ಗೋಷ್ಠೀ ಹಾಗು ನೆರೆದಿದ್ದ ಭಕ್ತರಿಗೆಲ್ಲಾ ದಕ್ಷಿಣೆಯನ್ನು ಕೊಡುವರು.

## ಮಂಗಳಾಶಾಸನಗಳ ಸರಪಣಿ

"ಗಚ್ಛತೆ ಯಸ್ಯ ನಗರೆ ಶ್ರೀರಂಗಯಾತ್ರಾ ದಿನೇ ದಿನೇ" ಎಂಬ ಕುಲಶೇಖರರ ವಾಣಿಯಂತೆ ಆಶ್ರಮಸ್ವೀಕಾರವಾದನಂತರ ಶ್ರೀಗಳು ಒಂದು ಹದಿನೈದು ಬಾರಿ ಶ್ರೀರಂಗಯಾತ್ರೆಯನ್ನು ಕೈಗೊಂಡಿರುತ್ತಾರೆ. ಪ್ರಥಮವಾಗಿ 1993 ರಲ್ಲಿ ಪೌಂಡರೀಕಪುರಮ್ ಸ್ವಾಮಿ, ಆಂಡವನ್, ಅಳಗಿಯಸಿಂಗರ್ ಸ್ವಾಮಿಗಳ ತಿರುನಕ್ಷತ್ರಗಳಿಗೆ ಹೊಂದುವಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಆಂಡವನ್ ಆಶ್ರಮದ ಗಣ್ಯರ ನೇತೃತ್ವ ಹಾಗು ಮಾರ್ಗದರ್ಶನದಲ್ಲಿ ಶ್ರೀಗಳು ಶ್ರೀರಂಗ, ಇದರ ಸುತ್ತಲಿರುವ ಒರೈಯೂರ್, ತಿರುವೆಳ್ಳರೈ, ಉತ್ತಮರ್ ಕೋಯಿಲ್, ಕೋಯಿಲಡಿ ದಿವ್ಯದೇಶಗಳನ್ನು ಸಂದರ್ಶಿಸಿ, ವಡುವೂರ್, ಮನ್ನಾರ್ ಗುಡಿ, ಕುಂಭಕೋಣದ ಶಾರ್ಙ್ಗಪಾಣೀ, ತಿರುವಿಣ್ಣಗರ್, ತಿರುನರೈಯೂರ್ ಗಳಲ್ಲಿ ಮಂಗಳಾಶಾಸನವನ್ನು ಮಾಡಿರುತ್ತಾರೆ. ರಂಗಪ್ರಿಯ ಸ್ವಾಮಿಗಳು ಮನ್ನಾರ್ ಗುಡಿಯ ವಿದ್ಯಾರಾಜಗೋಪಾಲಮೂರ್ತಿಯನ್ನೇ ನೋಡುತ್ತಾ ಮೈ ಮರೆತರು. ಆನಂದ ಬಾಷ್ಪದೊಂದಿಗೆ ಅಂಜಲಿ ಸಮರ್ಪಿಸಿದರು. ತಿರುಪತಿಯ ಮಂಗಳಾಶಾಸನದಲ್ಲಿ ಅರುಳಪ್ಪಾಡನ್ನು ಹೇಳುವಂತಿಲ್ಲ. ಅಭಿಗಮನ ಆರಾಧನೆಯ ಕಟ್ಟುಪಾಡಿನಿಂದ ಶ್ರೀಗಳು ಜೀಯರರೊಂದಿಗೆ ಮೂಲವರ ಶಾತ್ತುಮುರೈ ಸೇವೆಗೆ ಹೋಗಲಾಗಲಿಲ್ಲ. ಬ್ರಹ್ಮೋತ್ಸವದಲ್ಲಿ ಸಂಜೆ ಘನ ಪುಷ್ಪಹಾರದೊಂದಿಗೆ ಜೀಯರರು ಮತ್ತು ಸ್ವಾಮಿಗಳು ಮೂಲವರನ್ನು ಸೇವಿಸಿದರು. ಹತ್ತು ದಿನಗಳೂಹೀಗೆಯೇ ಸೇವೆಯಾಯಿತು. ತಿರುಚ್ಚಾನೂರು ಮಂಗಳಾಶಾಸನದ ನಂತರ ಶ್ರೀಗಳು ಇದರ ಸಮೀಪದ ನವಜ್ಯೋತಿ ನೇತ್ರಧಾಮದಲ್ಲಿ ಒಂದು ದಿನ ತಂಗಿದ್ದರು. ಅಂಧ ಬಾಲಕ

ಬಾಲಕಿಯರಿಗೆ ಶ್ರೀಗಳು ಹಯಗ್ರೀವ ದೇವರಲ್ಲಿ ವಿಶೇಷವಾಗಿ ಪ್ರಾರ್ಥಿಸಿ ಎಲ್ಲರಿಗೂ ಫಲಮಂತ್ರಾಕ್ಷತೆಯನ್ನು ಅನುಗ್ರಹಿಸಿದರು. ತಿರುವಳ್ಳೂರಿನ ಮಂಗಳಾಶಾಸನದಲ್ಲಿ ಅರುಳಪ್ಪಾಡು ಹೇಳುವರು ಆಲಯ ಕೈಂಕರ್ಯಪರರಲ್ಲಿ ಒಬ್ಬರು. ಮಹಾದೇಶಿಕ ಪದದ ಬದಲು ಮಹಾಗುರು ಎಂದು ಹೇಳುವರು.

## ಶ್ರೀಶ್ರೀಗಳ ಅಭಿಮತ

೧) ಪೆರಿಯ ಸ್ವಾಮಿ ಇಟ್ಟ ಹೆಜ್ಜೆಯಲ್ಲಿ - ಅ) ಬರೋಡಾದ ದಾಬಾಯ್ ಎಂಬ ಸಣ್ಣ ಊರಿನಲ್ಲಿ ಅಭಿನವ ರಂಗನಾಥರ ಶಿಷ್ಯರೊಬ್ಬರು ನಡೆಸುತ್ತಿದ್ದ ಶ್ರೀನಿವಾಸಕ್ಷೇತ್ರಕ್ಕೆ ಭೇಟಿ ಕೊಟ್ಟು ಎರಡು ದಿನಗಳು ತಂಗಿದ್ದರು. ನಾಲ್ಕು ಕಿ.ಮೀ ದೂರದಲ್ಲಿ ತಪತಿಯಲ್ಲಿ ಮಿಂದು ಅಭಿಗಮನ ಹಾಗು ಸಂಜೆ ಹನ್ನೆರಡು ಆರತಿಗಳೊಂದಿಗೆ ಡೋಲೋತ್ಸವದಲ್ಲಿ ಊರಿನ ಭಕ್ತರು ಪಾಲ್ಗೊಂಡಿದ್ದರು. ಆ) ಹೈದರಾಬಾದ್ ನಗರದ ಫತೆ ದರ್ವಾಜಾ ಬಡಾವಣೆಯಲ್ಲಿ ಪೆರಿಯ ಸ್ವಾಮಿ ಅಭಿನವ ರಂಗನಾಥರು ಮಂಗಳಾಶಾಸನ ಮಾಡಿದ್ದ ಶ್ರೀನಿವಾಸ ಕ್ಷೇತ್ರ ಜೀರ್ಣೋದ್ಧಾರವನ್ನು ಎದುರು ನೋಡುತ್ತಿತ್ತು. ಹೊಸ ದೇವಸ್ಥಾನ ನಿರ್ಮಿಸುವುದಕ್ಕಿಂತ ಜೀರ್ಣವಾಗಿರುವ ಹಳೆಯ ದೇವಸ್ಥಾನಗಳನ್ನು ಉದ್ಧಾರ ಮಾಡುವುದು ಪುಣ್ಯಕಾರ್ಯ ಎಂದು ಶಾಸ್ತ್ರ ಹೇಳುವುದು - "ದೇವಾಲಯಾನಾಮ್ ನಿರ್ಮಾಣಾತ್ ಪುಣ್ಯಕೋಟಿ ಫಲಂಲಭೇತ್ ಜೀರ್ಣಾಲಯಾನಾಂ ಉದ್ಧಾರಂ ತತಃ ಪುಣ್ಯತಮಂದಿದುಃ" ಎಂಬ ಉಕ್ತಿಯಂತೆ ಅಭಿನವ ವಾಗೀಶರು 2003 ರ ಹೈದರಾಬಾದ್ ಯಾತ್ರೆಯಲ್ಲಿ ಈ ಕ್ಷೇತ್ರಕ್ಕೆ ಪ್ರಥಮ ಬಾರಿ ಭೇಟಿ ನೀಡಿ ಶ್ರವಣ ನಕ್ಷತ್ರಕ್ಕೆ ಹೊಂದುಕೊಳ್ಳುವಂತೆ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಡೋಲೋತ್ಸವ, ಹನ್ನೆರಡು ಆರತಿಗಳು, ನಾಲ್ಕು ಬಗ್ಗೆ ಪ್ರಸಾದ ವಿನಿಯೋಗ ವೈಭವದಿಂದ ಜರುಗಿತು. ಶನಿವಾರ, ಭಾನುವಾರ ಅಖಂಡ ಸಹಸ್ರನಾಮ ಪಾರಾಯಣಕ್ಕೆ ಶ್ರೀಗಳು ಕರೆ ನೀಡಿದರು. ಆಲಯ ಧರ್ಮದರ್ಶಿಗಳೊಂದಿಗೆ ಮುಂದಿನ ಪ್ರಗತಿ ಕಾರ್ಯಕ್ರಮಗಳ ಬಗ್ಗೆ ಚರ್ಚೆ ನಡೆಸಿದರು. ಭಗವತ್ ಸನ್ನಿಧಿ, ಆಚಾರ್ಯ ಸನ್ನಿಧಿಗಳ ಮಹಿಮೆಯಿಂದಲೇ ಇದರೊಂದಿಗೆ ನಗರದಲ್ಲಿದ್ದ ಇನ್ನೂಹಲವಾರು ಕ್ಷೇತ್ರಗಳು ಬೆಳಕನ್ನು ಕಂಡವು. ಪಾದುಕಾ ಸಹಸ್ರದಲ್ಲಿ ದೇಶಿಕರು ಈಅಂಶವನ್ನು ಎತ್ತಿ ಹಿಡಿಯುವರು "ಭಗವಂತನ ಸಂಚಾರದ ಮಹಿಮೆಯಿಂದಲೇ ಅಯೋಧ್ಯೆ ಚೆನ್ನಾಗಿ ಬೆಳೆಯಿತು" - "ರಘುರಾಜಧಾನ್ಯಾ ಪ್ರದಕ್ಷಿಣ ಪ್ರಕ್ರಮನಾದಕಾರ್ಷೀ ಪ್ರಭಾಭಿಃ" (ಪ್ರಕೀರ್ಣ ಪದ್ಧತಿ). ಇ) ಹೈದರಾಬಾದ್ ಮಠದ ಶಾಖೆಯ ಭೂಮಿಪೂಜೆ ಸಂದರ್ಭದಲ್ಲಿ ವಿಲ್ಲಿವಳಮ್ ಅಳಗಿಯ ಸಿಂಗರ್ ಸ್ವಾಮಿಗಳು ಹೀಗೆ ಸಂಚಾರ ಮಹಿಮೆಯನ್ನು ಹೇಳಿದರು - "ಅಶ್ವದ (ಹಯಗ್ರೀವ) ಸಂಚಾರ (ಅನುಗ್ರಹ) ದಿಂದಲೇ ಇಂತಹ ಕಲ್ಯಾಣ ಕಾರ್ಯಗಳು ನಡೆಯುವುದಾಗಿದೆ. ಸಂಚಾರ ಅಶ್ವದ ಸ್ವಾಸ್ಥ್ಯ ಲಕ್ಷಣವೇ ಆಗಿದೆ. ನಮ್ಮ ಮಾಲೋಲನಿಗೂ ಪಾದುಕೆಯಿರುವುದರಿಂದಲೇ ಸಂಚಾರ ವಿಧಿತವಾಗಿದೆ. ಊರು ಗ್ರಾಮ ಪಟ್ಟಣಗಳನ್ನು ಸಂಚರಿಸಿ ಕಲ್ಯಾಣಕಾರ್ಯಗಳನ್ನು ಮಾಡಿ - ಗ್ರಾಮೇ ಗ್ರಾಮೇ ಚ ಗತ್ವಾ ಪದಕಮಲಂ ತಾನ್ ಮಾಂ ಗೃಹೀತ್ವಾ ಅಭಿರಕ್ಷ ಎಂದು ನೃಸಿಂಹಯತಿ ಆದಿವಣ್ ಶಠಕೋಪರಿಗೆ ಉಪದೇಶಿಸಿದರು". ಈ) ಹೈದರಾಬಾದ್ ಯಾತ್ರೆಗಳಲ್ಲಿ ಹೋಗಿ ಬರುವ ಎರಡೂ ಸಂದರ್ಭಗಳಲ್ಲಿ ಕೃಷ್ಣಾನದೀ ದಂಡೆಯ ಬೀಚಪಲ್ಲಿಯ ಆಂಜನೇಯ ಸ್ವಾಮಿಯನ್ನು, ಪಾಂಡಿಚೇರಿಯಿಂದ ಹಿಂತಿರುಗುವಾಗ ಪಂಚಮುಖಿ ಆಂಜನೇಯ ಬೃಹನ್ಮೂರ್ತಿಯನ್ನು ಬಿಡದೆ ಸೇವಿಸುವರು. ಉ) ಗದ್ವಾಲ್ ನಗರದಲ್ಲಿ ಪರಕಾಲಸ್ವಾಮಿಯ ಪರಂಪರೆಯ ೩೨ ನೇಯ ಸ್ವಾಮಿಗಳ ವಾಗೀಶರ ಪೂರ್ವಾಶ್ರಮ ಗೃಹಕ್ಕೆ ಭೇಟೀ ಹಾಗು ಅದೇ ರಸ್ತೆಯಲ್ಲಿರುವ ಅಹೋಬಿಲಮಠಕ್ಕೆ ಹೋಗುವರು. ಲಕ್ಷ್ಮೀಪುರಂಪ್ರವಾಸದಲ್ಲಿ ರಂಗರಾಮಾನುಜ ಮಹಾದೇಶಿಕರ ಅವತಾರಸ್ಥಳವಾದ ಕೇತಾಂಡಪಟ್ಟಿಗೆ. ಚೆನ್ನೈ ಯಾತ್ರೆಯಲ್ಲಿ

ಆಳ್ವಾರ್ಪೇಟೆಯಲ್ಲಿರುವ ಆಂಡವನ್ ಹಾಗು ದೂರದ ಬಡಾವಣೆಯಲ್ಲಿ ಸೇಲೆಯೂರಿನಲ್ಲಿರುವ ಅಹೋಬಿಲಮಠದ ಸ್ವಾಮಿಗಳನ್ನು ಸೇವಿಸುವವರು. ಯಾತ್ರೆಗಳಲ್ಲಿ ವಾಹನವನ್ನು ಹತ್ತುವುದಕ್ಕೆ ಮುಂಚೆ ಶ್ರೀಗಳು ಯಾತ್ರಾಸಾಫಲ್ಯಕ್ಕಾಗಿ ಹಯಗ್ರೀವ ವಾಹನವನ್ನು ಪ್ರದಕ್ಷಿಣೆ ಮಾಡಿ ಎಲ್ಲರೂ ಬಂದು ವಾಹನವನ್ನು ಹತ್ತಿ ಕುಳಿತಿದ್ದಾರೆಯಾ ಎಂದು ಖಚಿತಪಡಿಸಿಕೊಳ್ಳುತ್ತಿದ್ದರು. ದೇಶಿಕರ ಉಕ್ತಿಯೊಂದು ಇದಕ್ಕೆ ಒತ್ತು ಕೊಡುವುದು - "ಯಶಸ್ವೀಕಾರ್ಯಕ್ಕೆ ದೈವಬಲ, ಹಿರಿಯರ ಅನುಗ್ರಹ, ಪುರುಷ ಪ್ರಯತ್ನ ಬೇಕು. ಆಗಲೇ ಸಾಹಚರ್ಯೇ ಉಂಟಾಗುವುದು." - "ಸಾಹಸಚರ್ಯಂ ಇತ್ಥಂ ಪ್ರತಿಪನ್ನೆ ಇವ ದೈವಪೌರುಷೇ" (ದ್ವಂದ್ವ ಪದ್ಧತಿ).

ಪಶ್ಚಿಮ ದೇಶ - ಎಂದರೆ ಹಾಸನ ಜಿಲ್ಲೆಯ ಹುಳಿಕಲ್ಲು, ರಾಮನಾಥಪುರ, ಹುಲುಗುಂಡಿ, ಬಯಲಹಳ್ಳಿ, ಮಗ್ಗೆ, ಮಾದೀಹಳ್ಳಿ, ಗದ್ವಳ್ಳಿ, ಸಾಲಗ್ರಾಮ ಮುಂತಾದ ಊರಿನ ಮಕ್ಕಳು ಶ್ರೀಗಳಿಗೆ ತುಂಬಾ ಅಭಿಮತ. ಅವರಲ್ಲಿರುವ ಶ್ರದ್ಧೆ, ಭಕ್ತಿ, ಐಕ್ಯತೆ, ಸಹಕಾರ ಮನೋಭಾವಗಳೇಶ್ರೀಗಳ ಅಭಿಮತಕ್ಕೆ ಕಾರಣ. ಸಂಯುಕ್ತವಾಗಿರುವ ಈ ಊರುಗಳ ಭಕ್ತರು ಮಠದ ಕಾರ್ಯಕ್ರಮಗಳಲ್ಲಿ ಬಿಡದೆ ಪಾಲ್ಗೊಳ್ಳುವುದು ಅವರ ಭಕ್ತಿಯ ಪ್ರಾಕಾರವೇ ಆಗಿದೆ. ಸಾಂದರ್ಭಿಕವಾಗಿ ಪಾದುಕಾ ಸಹಸ್ರದ ಸುಭಾಷಿತ ಪದ್ಧತಿಯಲ್ಲಿ ಬರುವ ಶ್ಲೋಕ ಇಲ್ಲಿ ಉಲ್ಲೇಖಾರ್ಹ - "ಸಜ್ಜನರು ತಮ್ಮ ಸ್ಥಳ, ಪರಸ್ಥಳ ಎಂಬ ಭೇದವಿಲ್ಲದೆ ಎಲ್ಲಿದ್ದರೂ ತಮ್ಮ ಅನಘವಾದ ವೃತ್ತಿಯಾದ ಭಗವತ್ ಸೇವೆಯನ್ನು ಬಿಡರು" - "ಸಂತಃ ಸ್ವದೇಶ ಪರದೇಶ ವಿಭಾಗ ಶೂನ್ಯಂ ಹಂತಃ ಸ್ವವೃತ್ತಿಮನಘಾಂ ನ ಪರಿತ್ಯಜಂತೀ".

2007 ರಲ್ಲಿ ಪಾವಗಡದ ಸಮೀಪದ ಕೃಷ್ಣಾಪುರದ ಶ್ರೀನಿವಾಸ ಪ್ರತಿಷ್ಠಾಪನೆ ಮಹೋತ್ಸವದಲ್ಲಿ ಶ್ರೀಗಳ ಆದೇಶದ ಮೇರೆಗೆ ಬೆಳಗಿನ ಜಾಮವೇ ಬೆಂಗಳೂರನ್ನು ನಿರ್ಗಮಿಸಿ ಮಧುಗಿರಿ ಶ್ರೀನಿವಾಸ ಕ್ಷೇತ್ರದಲ್ಲಿ ಅಭಿಗಮನ ಆರಾಧನೆ ಜರುಗಿತು.

## ಗಣ್ಯರ ಆಹ್ವಾನ

೧) 1993-94 ೪೫ನೇಯ ಅಳಗಿಯ ಸಿಂಗರ್ ಸ್ವಾಮಿಗಳು ಅಹೋಬಿಲ ಮಠದ ೬ನೇಯ ಶತಮಾನೋತ್ಸವದ ಅಂಗವಾಗಿ ಅಭಿನವ ವಾಗೀಶರನ್ನು ಆಹ್ವಾನಿಸಿದರು. ೩ ದಿನಗಳ ಮುಖಾಂನಲ್ಲಿ ಮೇಲಿನ ಅಹೋಬಿಲ ಉಗ್ರ ನೃಸಿಂಹ ಸನ್ನಿಧಿಯಲ್ಲಿ ಅಭಿಗಮನ, ಸಂಜೆ ಕೆಳಗಿನ ಪ್ರಹ್ಲಾದ ವರದ ಸನ್ನಿಧಿ ರಸ್ತೆಯಲ್ಲಿರುವ ಮಠದಲ್ಲಿ ಡೋಲೋತ್ಸವ, ಮಾರನೇಯ ದಿನ ಬೆಳಗ್ಗೆ ಮಾಲೋಲ ಸನ್ನಿಧಿಯಲ್ಲಿ ಆಸ್ಥಾನ ವಿದ್ವಾನ್ ಈ. ಎಸ್. ವರದಾಚಾರ್ಯರಿಂದ ನೃಸಿಂಹರೂಪದ ಬಗ್ಗೆ ಉಪನ್ಯಾಸವಿತ್ತು. ಅಭಿನವ ವಾಗೀಶರು ೯ ಸನ್ನಿಧಿಗಳ ಪೈಕಿ ೫ ನ್ನು ಮಾತ್ರ, ಅದರಲ್ಲೂ ಛತ್ರವಟ ನೃಸಿಂಹ ಸನ್ನಿಧಿಯಲ್ಲಿ ವಿಶೇಷವಾಗಿ ಸೇವಿಸಿದರು. ನಿತ್ಯಾರಾಧನೆಗಾಗಿ ಗಂಧದ ಕೊರಡುಗಳನ್ನು ಸಮರ್ಪಿಸಲಾಯಿತು. ರಂಗಪ್ರಿಯ ಸ್ವಾಮಿಗಳು ಈಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ೨) 1998 ತಿರುವಳ್ಳೂರ್ ಕ್ಷೇತ್ರದ ಸಂಪ್ರೋಕ್ಷಣೆಗಾಗಿ ೫ ದಿನಗಳ ಪ್ರವಾಸ. ಇದರಲ್ಲಿ ೧ ದಿನದ ಶ್ರೀಮುಷ್ಣಂ ಪ್ರವಾಸವೂಸೇರಿದೆ. ೩) ಶ್ರೀಪೆರುಂಬೂದೂರಿನ ದೇಶಿಕ ಸನ್ನಿಧಿಯ ಉದ್ಘಾಟನಾ ಸಮಾರಂಭಕ್ಕೆ ರಂಗಪ್ರಿಯ ಸ್ವಾಮಿಗಳು ಪಾಲ್ಗೊಂಡಿದ್ದರು. ೪) 1997 ಚೆನ್ನೈನ ಪ್ರಥಮ ಯಾತ್ರೆಯಲ್ಲಿ ಸ್ವಾಮಿಗಳ ಆಗಮನವನ್ನೇ ನಿರೀಕ್ಷಿಸುತ್ತಿದ್ದವರ ಪೈಕಿ "ಸೇವಾ ಸ್ವಾಮಿ" ಎಂದು ಪ್ರಸಿದ್ಧರಾಗಿದ್ದ ಶ್ರೀನಿವಾಸ ರಾಘವಾಚಾರ್ಯರೂ ಒಬ್ಬರು. ವಿಲ್ಲಿವಾಕ್ಕಂನಲ್ಲಿ ಇವರು ನಡೆಸುತ್ತಿದ್ದ ಹಯಗ್ರೀವ ದೇವಸ್ಥಾನದಲ್ಲಿ ಡೋಲೋತ್ಸವ, ೧೨ ಆರತಿಗಳು, ಶ್ರೀಗಳಿಂದ

ಉಪನ್ಯಾಸ ಜರುಗಿತು. ಸೇವಾ ಸ್ವಾಮಿಗಳು ಹೊರಡಿಸಿರುವ ದೇಶಿಕ ಸೇವಾ ಪತ್ರಿಕೆ, ದೇಶಿಕ ದರ್ಶನ ಡೈರಿ, ನಡೆಸುತ್ತಿರುವ ದೇಶಿಕ ಸಂಶೋಧನಾ ಕೇಂದ್ರ - ಇವುಗಳ ಬಗ್ಗೆ ಮಾಹಿತಿ ನೀಡಿ ಇವು ದೇಶಿಕ ಸಂಪ್ರದಾಯಕ್ಕೆ ಎಷ್ಟರಮಟ್ಟಿಗೆ ಸಹಕಾರಿಯಾಗಿದೆ ಎಂಬುದನ್ನು ವರ್ಣಿಸಿದರು. ೫) 1997 ಸೀತಾರಾಮಸ್ವಾಮಿ ಎಂಬ ಗೃಹಸ್ಥರ ನಿರ್ವಹಣೆಯಲ್ಲಿರುವ ಸಾವಿರ ವರ್ಷಗಳ ಪುರಾಣೇತಿಹಾಸವಿರುವ ತಿರುಮಲೈವೈಯಾವೂರ್ ಗ್ರಾಮದ (ಮಧುರಾಂತಕಂ ಇಂದ ೧೦ ಕಿ.ಮೀ ದುರ) ಶ್ರೀನಿಕೇತನ ಎಂಬ ಬೆಟ್ಟದ ಶ್ರೀನಿವಾಸ ಕ್ಷೇತ್ರಕ್ಕೆ ೨ ದಿನಗಳ ಭೇಟಿ. ಇಲ್ಲಿಯ ೨ ವಿಶೇಷಣಗಳು ಶ್ರೀಗಳನ್ನು ಆಕರ್ಷಿಸಿದುವು - ಅ) ಶ್ರಾವಣಮಾಸದಲ್ಲಿ ಚೆನ್ನೈ ಹಾಗು ಇದರ ಸುತ್ತಲೂ ಇರುವ ಭಕ್ತರು ಹರಕೆ ಹೊತ್ತು ಪಾದ ಸಂಚಾರವನ್ನೇ ಮಾಡುವರು. ಆ)ಅತಿಮಾನಷ ಹರಕೆ - ನಾಲಗೆಯ ಮೇಲೆ ಕರ್ಪೂರ ಬೆಳಗಿಸಿಕೊಂಡು ಎರಡು ಕೈಗಳಲ್ಲಿಯೂ ಸೇವಾದ್ರವ್ಯಗXಇರುವ ತಟ್ಟೆಯನ್ನು ಹಿಡಿದುಕೊಂಡು ಬೆಟ್ಟ ಹತ್ತುವರು. ೬) ಅರಯರ್ ರಾಮಭಾರತಿಯವರ ಆಹ್ವಾನದ ಮೇರೆಗೆ ಚೆನ್ನೈನ ಜಲಡಾಂಪಟ್ಟಿ ಬಡಾವಣೆಯ ಶಠಕೋಪದಿವ್ಯ ಪ್ರಬಂಧ ಪಾಠಶಾಲೆಗೆ ೨ ದಿನಗಳ ಭೇಟಿ. ಆಳ್ವಾರರ ಆಯ್ದ ಪಾಶುರಗಳಿಂದ ಸಂಗೀತ, ತಾಳ, ಅಭಿನಯದೊಂದಿಗೆ ಅರಯರ್ ಎಲ್ಲರನ್ನೂ ರಂಜಿಸಿದರು. ೭)ಸ್ವಾಮಿಗಳು ಚೆನ್ನೈನಲ್ಲಿ ಬಿಡಾರ ಮಾಡಿದಾಗಲೆಲ್ಲಾ ಪಾಂಡಿಚ್ಚೇರಿಯ ಶ್ರೀವೈಷ್ಣವ ಸಭೆಯ ಸದಸ್ಯರು ತತ್ಕ್ಷಣ ಚೆನ್ನೈಗೆ ಧಾವಿಸಿ ಶ್ರೀಗಳನ್ನು ಆಹ್ವಾನಿಸುವರು. ನಿವೃತ್ತ ನ್ಯಾಯಾಧೀಶರೂ, ಅಧಿಕಾರಿಗಳೂ, ವಕೀಲರೂ ಹಾಗು ವ್ಯಾಪಾರಸ್ಥರೂ ತುಂಬಿರುವ ಈಸಮಿತಿ ಸತ್ಸಂಗವೆಂದೇ ಎಲ್ಲರ ಅಭಿಪ್ರಾಯ. ಇವರ ಕಾರ್ಯಾಚರಣೆ ಶ್ರೀಗಳಿಗೆ ತುಂಬಾ ಮೆಚ್ಚಿಗೆಯಾಗಿದೆ. ಹಲವಾರು ವರ್ಷಗಳ ಹಿಂದೆ ಬಿಡಾರಕ್ಕಾಗಿ ವರದರಾಜತಿರುಮಾಳಿಗೈ ಎಂಬ ವಸತಿಗೃಹ ಏರ್ಪಾಡಾಗಿದೆ. ೮) ಹೈದರಾಬಾದ್-ಗೋಲ್ಕೊಂಡಾ ಮಾರ್ಗದಲ್ಲಿ ತೆಲಂಗಾಣಾ ತಿರುಪತಿಯೆಂದೇ ಪ್ರಸಿದ್ಧವಾದ ಚಿಲಕೂರ್ ವೇಂಕಟೇಶಕ್ಷೇತ್ರಕ್ಕೆ ಶ್ರೀಗಳು ಇದುವರೆಗೆ ೨ ಬಾರಿ ದಯಮಾಡಿಸಿರುತ್ತಾರೆ. ಈ ಕ್ಷೇತ್ರದ ವೈಶಿಷ್ಟ್ಯಗಳು ಶ್ರೀಗಳನ್ನು ಆಕರ್ಷಿಸಿವೆ. ಅ) ದಿನಂಪ್ರತಿ ೨೦೦೦ ಸಾವಿರ ಭಕ್ತರು ಬಿಡದೆ ಗೋವಿಂದನಾಮಾವಳಿಯೊಂದಿಗೆ ಒಳ ಹಾಗು ಹೊರ ಪ್ರಾಕಾರಗಳಲ್ಲಿ ಮಹಾ ಪ್ರದಕ್ಷಿಣೆಯನ್ನು ಮಾಡುವರು. ಇದು ಒಂದು ಯಜ್ಞವೆಂದೇ ಅರ್ಚಕರು ಹೇಳುವರು. ಇದರಿಂದಾಗಿ ಈ ದೇವರಿಗೆ "ಸುತ್ತು-ಶ್ರೀನಿವಾಸ" "ಪ್ರದಕ್ಷಿಣೆ ಪ್ರಭು" ಎಂಬ ಹೆಸರುಗಳಿವೆ. ಆ) ಯಾವುದೇ ಅರ್ಜಿತಸೇವೆಗೆ ಶುಲ್ಕವಿಲ್ಲ. ಇ) ವಿದೇಶಗಳಿಗೆ ಹೋಗುವವರ ಹರಕೆ ಪ್ರಾರ್ಥನೆಗಳ ಮಹಾ ಪೂರದಿಂದ ಈ ದೇವರಿಗೆ ವಿಸಾ-ವೇಂಕಟೇಶ ಎಂಬ ಹೆಸರಿದೆ. ಈ) ವಿಶೇಷವಾಗಿ ಆಲಯಾಗಮಗಳಿಗೆ ಸಂಬಂಧಿಸಿದ ವಿಚಾರದ ಬಗ್ಗೆ ಈ ದೇವಸ್ಥಾನದ ಮುಖ್ಯಸ್ತರು "ವಿಮಾನ ಅರ್ಚನ ಕಲ್ಪ" (VAK) ಎಂಬ ತೆಲುಗು ಆಂಗ್ಲ ಲೇಖನೆಗಳ ಪತ್ರಿಕೆಯನ್ನು ಹೊರಡಿಸಿದ್ದಾರೆ. ೯) ಧರ್ಮಾಧಿಕಾರಿಗಳ ಆಹ್ವಾನದ ಮೇರೆಗೆ ಯಾದಗಿರಿ ನೃಸಿಂಹ ಕ್ಷೇತ್ರಕ್ಕೆ ಭೇಟಿ. ಇಲ್ಲಿಯ ವಿಶೇಷ - ಅ) ನಿಂತಿರುವ ಭಂಗಿಯಲ್ಲಿ ರಜತ ಲಕ್ಷ್ಮೀನೃಸಿಂಹ ಮೂರ್ತಿ. ಎಲ್ಲಾ ಕೋಮಿನವರು ಇದರ ಚಿತ್ರಪಟವನ್ನು ಮನೆಯಲ್ಲಿಟ್ಟಿರುವರು. ಆ) ಗುಹೆಯಲ್ಲಿ ಉಗ್ರ, ಯೋಗ, ಲಕ್ಷ್ಮೀನೃಸಿಂಹ ಮೂರ್ತಿಗಳು, ಬೇರೆ ಸನ್ನಿಧಿಯಲ್ಲಿ ಬಂಡೆಯಲ್ಲಿಯೇ ಕೆತ್ತಲ್ಪಟ್ಟ ಗಂಡಭೇರುಂಡ ನೃಸಿಂಹಮೂರ್ತಿ. ಈ ರೂಪದಲ್ಲಿ ಶಿವನ ಶರಭಾವತಾರ ಕೊನೆಗೊಂಡಿತು ಎಂದು ಅರ್ಚಕರು ಹೇಳುವರು. ೧೦) ಹೀಗೆ ನಿಂತ ಭಂಗಿಯಲ್ಲಿರುವ ನೃಸಿಂಹ ಮೂರ್ತಿ ಬೆಂಗಳೂರಿನಿಂದ ೪೫ ಕಿ. ಮೀ ದೂರದ ಸುಗ್ಗನ ಹಳ್ಳಿ ಕ್ಷೇತ್ರದಲ್ಲಿದೆ. ೨೦೦೮ ರಲ್ಲಿ ಶ್ರೀಗಳು ೨ ದಿನಗಳಮಟ್ಟಿಗೆ ಇಲ್ಲಿ ದಯಮಾಡಿದ್ದರು. ೧೧) ಲಕ್ಷ್ಮೀಪುರಂ ಸಮೀಪ ಕರಮನಪಲ್ಲಿ (ಕರಂಬಟ್ಟಿ) ವೇಂಕಟೇಶಕ್ಷೇತ್ರಕ್ಕೆ ಕುಂಭಾಭಿಷೇಕಕ್ಕಾಗಿ ಎರಡು ದಿನಗಳ ಪ್ರವಾಸ. ೧೨) ಬೆಂಗಳೂರಿನ ಸುತ್ತಮುತ್ತಲಿರುವ ಮಲ್ಲೇಶ್ವರಂನ ಕೃಷ್ಣ

ದೇವಸ್ಥಾನ, ಯಲಹಂಕ, ವಿಜಯಪುರ, ಕ್. ಆರ್ ಪುರಂ ನ ವೇಂಕಟೇಶ ಕ್ಷೇತ್ರಗಳ ಸಂಪ್ರೋಕ್ಷಣೆ ಹಾಗು ಬ್ರಹ್ಮೋತ್ಸವಗಳಲ್ಲಿ ಪಾಲ್ಗೊಳ್ಳುವರು.

## ಕಷ್ಟಕಾರ್ಪಣ್ಯಗಳೂ ಸಮಸ್ಯೆಗಳೂ

ಹಿಂದಿನ ಸ್ವಾಮಿಗಳ ಯಾತ್ರೆಯಂತೆಯೇ ಅಭಿನವ ವಾಗೀಶರ ವಿಜಯಯಾತ್ರೆಗಳು ಸಿಬ್ಬಂದಿ ಕೊರತೆಯ ಸಮಸ್ಯೆಯೊಂದಿಗೆ ಆರಂಭಗೊಂಡಿದ್ದು ಅಹಿತಕರ ಸಂಗತಿಯೇಸರಿ. ಒಳಗೂ ಹೊರಗೂ ತೀವ್ರವಾಗಿ ಕಾಡಿಸುವ ಸಮಸ್ಯೆಯಿದು. ಇದರಿಂದಾಗಿ ಕಾರ್ಯಗಳ ಒತ್ತಡ, ಗಾತ್ರ, ವ್ಯಾಪ್ತಿ ಕೆಲವೇ ಕೈಂಕರ್ಯಪರರಮೇಲೆ ಬೀಳುವುದು. ಬಿಡಾರ ಮಾಡುವ ಸ್ಥಳದಲ್ಲಿರುವ ಭಕ್ತರ ಸಹಾಯ ಅನಿವಾರ್ಯವಾಗುವುದು. ಈ ಪ್ರಬಲವಾದ ಸಮಸ್ಯೆಯಿಂದ ಇತರ ಸಮಸ್ಯೆಗಳ ಗೋಜಲುಂಟಾಗುವುದು -

೧) ವಿಳಂಬ ಒಂದಲ್ಲಾ ಒಂದು ಕಾರಣದಿಂದ ಉಂಟಾಗುವಂಥದ್ದು. ವೇಳಾ ನಿಯಮವನ್ನು (time schedule) ಪಾಲಿಸಲಾಗದು. ಇದಕ್ಕೆ ಕಾರಣವಿಲ್ಲದೆಯಿಲ್ಲ. ಅ) ಡೋಲೋತ್ಸವಗಳ ಒತ್ತಡ - ದಿನಕ್ಕೆರಡು ಡೋಲೋತ್ಸವಗಳಲ್ಲಿ ಸಮಸ್ಯೆಯಿರದು. ಮೂರು ಅಥವಾ ನಾಲ್ಕು ಡೋಲೋತ್ಸವಗಳಲ್ಲಿ ವಿಳಂಬದಿಂದ ಹಿಂತಿರುಗುವುದು ಮಧ್ಯರಾತ್ರಿಯೇ. ಒಮ್ಮೆ ಭಕ್ತರ ಮನೆಯಲ್ಲಿ ಮಡಿಯಲ್ಲಿದ್ದ ಆರಾಧಕರನ್ನು ಯಾರೋ ಸ್ಪರ್ಶಿಸಿಬಿಟ್ಟರು. ಪುನಃ ಅವರು ಸಿದ್ಧವಾಗಬೇಕಾದರೆ ಮುಕ್ಕಾಲು ಘಂಟೆಗಳ ಕಾಲ ಬೇಕಾಗುವುದು. ಮುಂದಿನ ಡೋಲೋತ್ಸವ ವಿಳಂಬಗೊಂಡಿತು. ಒಬ್ಬ ರೈತರ ಮನೆಗೆ ಕಾರ್ಗತ್ತಲೆಯ ವಾತಾವರಣದೊಂದಿಗೆ ಹೋಗಿ ಸಂಪುಟವನ್ನು ಉಯ್ಯಾಲೆಯ ಮೇಲಿಟ್ಟು ಹಣ್ಣುಹಾಲು ನಿವೇದನೆ, ಮಂಗಳಾರತಿಯೊಂದಿಗೆ ಮುಗಿಸಿ, ಹಿಂತಿರುಗಿದಾಗ ರಾತ್ರಿ ೧೨ ಘಂಟೆ ಮೀರಿತ್ತು. ಆ) ಉಪನ್ಯಾಸ ಪ್ರಶ್ನೋತ್ತರಗಳು ಇ) ಇತರ ಕಾರ್ಯಕ್ರಮಗಳು. ಉದಾಹರಣೆಗೆ ಉತ್ತರ ಭಾರತದ ಪ್ರವಾಸದಲ್ಲಿ ಅಹಮದಾಬಾದ್ ಬರೋಡಾ ಹೆದ್ದಾರಿಯಲ್ಲಿರುವ ಸ್ವಾಮಿನಾರಾಯಣಾಶ್ರಮಕ್ಕೆ ಭೇಟಿ ಕೊಟ್ಟು, ಬರೋಡಾ ಪಟೇಲರ ಗೃಹಕ್ಕೆ ಹಿಂತಿರುಗಿದಾಗ ರಾತ್ರಿ ೧೨ ಘಂಟೆ. ಅಂದು ಶುಕ್ರವಾರ ಖಡ್ಡಾಯವಾಗಿ ೧೨ ಮಂಗಳಾರತಿಗಳು ಆಗಲೇಬೇಕಾದ್ದು. ಈ) ಸಾರಿಗೆ ಒತ್ತಡ, ಸಿಗ್ನಲ್ಗಳು, ರೈಲ್ವೇ ಕ್ರಾಸಿಂಗ್ ಗಳು ಹಾಗು ವಾಹನದಲ್ಲಿ ತಾಂತ್ರಿಕ ತೊಂಡರೆ. ಈ ಕಾರಣಗಳಿಂದಾಗಿ, ಮುಂಬೈ ಚೆನ್ನೈನಲ್ಲಿ ಒಂದೆರಡು ಡೋಲೋತ್ಸವಗಳು ರದ್ದಾಯಿತು. ಉ) ಕಟ್ಟಡಗಳ ವಿನ್ಯಾಸ - ೫ - ೬ ಅಂತಸ್ತಿನ ಮೇಲಿರುವ ಗೃಹಗಳಲ್ಲಿ ಡೋಲೋತ್ಸವ, ಹಳೆಯಕಾಲದ ಸುರುಳಿಯಂತಿರುವ ಹಂತಗಳನ್ನು ಹತ್ತಿಹೋಗುವಾಗ, ತಲೆಯ ಮೇಲಿರುವ ಪೂಜಾಸಾಮಗ್ರಿಗಳ ಪೆಟ್ಟಿಗೆಗಳನ್ನು ತಗುಲಿಸಿಕೊಂಡೇ ಹೋಗಬೇಕು. ಊ) ರಸ್ತೆಯು ತುಂಬ ಚಿಕ್ಕದಾಗಿದ್ದಾಗ ಒಬ್ಬೊಬ್ಬರಾಗಿ ತಲೆಯಲ್ಲಿ ಸಾಮಾನುಗಳೊಂದಿಗೆ ನಡೆದುಕೊಂಡೇಹೋಗಬೇಕು. ಋ) ಚೆನ್ನೈನ ಪಶ್ಚಿಮ ಮಾಂಬಳಂನ ಗೃಹಸ್ತರ ಮನೆಯಲ್ಲಿ ಒಂದೇ ಕೊಠಡಿಯ ಇಕ್ಕಟ್ಟಿನಲ್ಲಿಯೇ ದೇವರಸನ್ನಿಧಿ, ಸ್ವಾಮಿ ಸನ್ನಿಧಿ ಹಾಗು ಭಕ್ತರ ಸನ್ನಿಧಿಯಿದ್ದು ತುಂಬಾ ಸ್ಥಳಾಭಾವ ಉಂಟಾಯಿತು. ಇಂತಹ ಎಷ್ಟೋ ಪ್ರಸಂಗಗಳಲ್ಲಿ ಮಠದ ಎರಡು ಘಂಟೆಗಳನ್ನು ಸೇವಿಸಲಾಗಲಿಲ್ಲ. ಎ) ವಿಳಾಸದ ಪರದಾಟ - 2011 ರಲ್ಲಿ ಲಕ್ಷ್ಮೀಪುರಂ ನ ಕರಂಬಟ್ಟಿ ವೇಂಕಟೇಶ ಕ್ಷೇತ್ರವನ್ನು ಸೇರಬೇಕಾಗಿದ್ದು ರಾತ್ರಿ ೦೮೩೦ಕ್ಕೆ. ಈ ಕ್ಷೇತ್ರಕ್ಕೆ ಹಲವಾರು ಬಾರಿ ಹೋಗಿದ್ದರೂ, ಬೇರಾವುದೋ ದಾರಿಯಲ್ಲಿ ತುಂಬಾ ದೂರ ಹೋಗಿ ಹಿಂತಿರುಗಿದ್ದೂ, ದಾರಿಯುದ್ದಕ್ಕೂ ಕೇಳಿಕೊಂಡು ಲಕ್ಷ್ಮೀಪುರಂ ತಲುಪಿ ಅಲ್ಲಿ ಕರಂಬಟ್ಟಿ ವಿಳಾಸ ಹುಡುಕುವುದು ಇನ್ನೂವಿಳಂಬವಾಗಿ ಸೇರಿದಾಗ ರಾತ್ರಿ ೧೦೦ ಘಂಟೆ. ಏ) ಪೂಜೋಪಕರಣಗಳ ಪೂರೈಕೆ - 2010 ರ ಹೈದರಾಬಾದು ಯಾತ್ರೆಯಲ್ಲಿ ಉಪ್ಪಲ್ ಮಠದ ಶಾಖೆಯು ನಗರದ

ಸರಹದ್ದಿಗೆ ದೂರವಿರುವುದರಿಂದ ತುಲಸೀ ಪುಷ್ಪಾದಿ ದ್ರವ್ಯಗಳು ನಗರದಿಂದಲೇ ಬರಬೇಕು. ಇದರಿಂದಾಗಿ ಅಭಿಗಮನ ಆರಾಧನೆ ವಿಳಂಬಗೊಂಡಿತು. ಆಲವಾಲಾ ಬಡಾವಣೆಯಲ್ಲಿ ೧ ದಿವಸ ಬಿಡಾರ ಮಾಡಿದ್ದಾಗ, ಎಲ್ಲಿಯೂ ತುಳಸಿ ದೊರಕಲಿಲ್ಲ. ಖ್ಯಾತ ವೇದವಿದ್ವಾನ್ ಶ್ರೀ ಪಾಂಡುರಂಗಾಚಾರ್ಯರು ಹಿರಿಯ ಅರ್ಚಕರಿಗೆ "ಪರವಾಗಿಲ್ಲ ಬಿಡಿ ದಿವ್ಯದೇಹ ಸೇವೆ (ತಿರುಮೇನಿ ಸೇವೆ) ಆಯಿತು" ಎಂದು ತೆಲುಗಿನಲ್ಲಿ ಹೇಳಿದರು. ಇವರ ಚಾಟೋಕ್ತಿಗೆ ದೇಶಿಕರ ಸ್ತುತಿಯೊಂದು ಒತ್ತುಕೊಡುವುದು. ನಿನ್ನ ಪೂಜೆಯಲ್ಲಿ ಪುಷ್ಪಗಳು ತಾನೇ ಏಕೆ? ತುಳಸಿಯೂ ಬೇಕಿಲ್ಲ, ಗರಿಕೆ ಹುಲ್ಲು ದೂರದಲ್ಲಿಯೇ ಇರಲಿ. ನಿನ್ನ ದಿವ್ಯ ಮಂಗಳ ವಿಗ್ರಹ ಒಂದು ಕಾಣಿಸುತ್ತಿದ್ದರೆ ಸಾಕು - "ಕಿಂ ಪುಷ್ಪೈಃ ತುಲಸೀದಲೈರಪಿ ಕೃತಂ ದೂರ್ವಾಪಿ ದೂರೇಸ್ಥಿತಾ | ತ್ವತ್ ಪೂಜಾಸು ಮುಕುಂದ ಪಾದು ಕೃಪಯಾ ತ್ವಂ ಕಾಮಧೇನುಸ್ಸತಾಂ || ..." (ಪುಷ್ಪ ಪದ್ಧತಿ). ಇದಾದ ಮಾರನೆಯ ದಿನವೇ ಪಾಂಡುರಂಗಾಚಾರ್ಯರ ವೇದಭವನದಲ್ಲಿ ಡೋಲೋತ್ಸವ ಜರುಗಿತು.

೨) ತೀರ್ಥಪೂರೈಕೆಗಾಗಿ ಬಾವಿ ನೀರಿನ ಪರದಾಟ - ೨೦೦೨ ಚಿತ್ತೂರಿನ ಪ್ರವಾಸದಲ್ಲಿ ೪ ಕಿ. ಮೀ ದೂರದ ಕಾಲುದಾರಿಯಲ್ಲಿದ್ದ ಬಾವಿ ನೀರಿನಲ್ಲಿ ಮಿಂದು ನಾಲ್ಕಾರು ಕೊಡಗಳಲ್ಲಿ ತುಂಬಿಕೊಂಡು ಮಠದ ವಾಹನದಲ್ಲಿ ತರಲಾಯಿತು. 1997 ಚೆನ್ನೈ ನ ಮಡಿಪಾಕ್ಕಂ ಬಡಾವಣೆಯಲ್ಲಿ ಟ್ಯಾಂಕ್ ಬೆಡ್ ನ ನೀರು ಪೂಜೆಗೆ ಅನರ್ಹ ಎಂದು ನಿರ್ಧರಿಸಿ, ಇದಕ್ಕೆ ಹಿಂದೆ ಇಳಿದುಕೊಂಡಿದ್ದ ಬಿಡಾರದಿಂದ ತೀರ್ಥವನ್ನು ತಂದು ಪೂಜಾ ಕಲಾಪಗಳನ್ನು ಆರಂಭಿಸಲಾಯಿತು. ಅಹಮದಾಬಾದ್ ಪಟೇಲರ ಮನೆಯಲ್ಲಿ ಬಾವಿ ಇಲ್ಲ. ನಾಲ್ಕು ಕಿ. ಮೀ ದೂರದಿಂದ ತುಂಬಾ ಹಿರಿಯ ಆರಾಧಕರು ಬಂಡೆಗಲ್ಲುಗಳನ್ನು ಇಳಿದು ಕೊಡಗಳಲ್ಲಿ ತೀರ್ಥ ತರುವುದು ಪ್ರಯಾಸ ಕಾರ್ಯವಾದ್ದರಿಂದ ಮನೆಯ ಮುಂದೆಯೇ ಶಾಸ್ತ್ರೋಕ್ತರೀತಿಯಲ್ಲಿ ಬೇರೆ ವ್ಯವಸ್ಥೆಯನ್ನು ಮಾಡಲಾಯಿತು.

೩) ಮಠದ ಶಾಖೆಗಳು ಬರುವುದಕ್ಕೆ ಮುಂಚೆ ಬಿಡಾರ ಸಮಸ್ಯೆ ಭೂತಾಕಾರವಾಗಿತ್ತು. 1997 ರಿಂದ 2008 ರ ವರೆಗೆ, ಚೆನ್ನೈ ಯಾತ್ರೆಯಲ್ಲಿ ಆಳ್ವಾರ್ ಪೇಟೆಯ ಆಂಡವನ್ ಆಶ್ರಮದಲ್ಲಿ ೧೫ ದಿನಗಳು, ಓರಿಯಂಟಲ್ ಶಾಲೆ, ನಂಗನಲ್ಲೂರ್, ಮೈಲಾಪುರದ ದೇಶಿಕ ಸನ್ನಿಧಿ ಹಾಗು ಭಕ್ತರ ಮನೆಗಳಲ್ಲಿ ಎರಡೆರಡು ದಿನಗಳು ಕಾಲ ಕಳೆದಿದ್ದಾಯಿತು. ಹೀಗೆಯೇ ಹೈದರಾಬಾದು ಯಾತ್ರೆಯಲ್ಲಿ 2010 ರ ವರೆಗೆ ಅಹೋಬಿಲಮಠ, ಪಶ್ಚಿಮ ಮರೇಡ್ ಪಳ್ಳಿಯ ಮಹಾಲಕ್ಷ್ಮೀ ದೇವಸ್ಥಾನ (ಆಂಡವನ್ ಆಶ್ರಮ), ಕಪಾರ, ಆಲವಾಲ ಬಡಾವಣೆ ಹಾಗು ಭಕ್ತರ ಗೃಹಗಳಲ್ಲಿ ಬಿಡಾರ ಮಾಡಲಾಯಿತು. ನೂತನ ಶಾಖೆಗಳ ಉತ್ಪತ್ತಿಯಿಂದ ಬಿಡಾರ ವ್ಯವಸ್ಥೆ ಹಾಗು ತತ್ಸಂಬಂಧಿತ ಸಮಸ್ಯೆಗಳು ಬಗೆಹರೆದಿದೆ.

## ನೂತನ ಶಾಖೆಗಳು

ಯತೀಂದ್ರರ ಯಾತ್ರೆಗಳ ಸರಪಣಿಯಲ್ಲಿ ಎರಡು ಗಮನಾರ್ಹ ಪ್ರಯೋಜನಗಳನ್ನು ಹೇಳಲು ಸಂತೋಷವಾಗುವುದು - ೧) ಶ್ರೀಮದಭಿನವ ರಂಗನಾಥರು ಪೆರಿಯಸ್ವಾಮಿಗಳೆಂದೇಭಕ್ತರ ಅನಿಸಿಕೆ. ಇವರನ್ನು ಕಂಡರೆ, ಇವರ ವಿಷಯ ಕೇಳಿದರೆ ಭಕ್ತರಲ್ಲಿ ತ್ವರಾತಿಶಯವಾದ ಭಕ್ತಿಯುಂಟಾಗುವುದು. ೫೦-೬೦ ರ ದಶಕದಲ್ಲಿ ಒಂದೆರಡು ಬಾರಿ ಹೈದರಾಬಾದು ಯಾತ್ರೆಯನ್ನು ಕೈಗೊಂಡಿದ್ದಾರೆ. ೭೦ ರ ದಶಕದಲ್ಲಿ ಶ್ರೀಮದಭಿನವ ರಾಮಾನುಜರು ಇಲ್ಲಿ ಒಂದು ೧೦ ದಿನಗಳ ಕಾಲ ಮಾತ್ರ ಬಿಡಾರ ಮಾಡಿದರು. ನಂತರ ಅಭಿನವ ವಾಗೀಶರ 2003 ರ ಯಾತ್ರೆಯವರೆಗೆ ಭಾರೀ ಅಂತರವಿದ್ದು ಶಿಷ್ಯಾರ್ಜನೆ ಬೇರೆಡೆಗಳಲ್ಲಿ ಚದುರಿತು. ನೂತನ ವಾಗಧೀಶರ ಆರು ಬಾರಿ ಯಾತ್ರೆಯಲ್ಲಿ ಶಿಷ್ಯಾರ್ಜನೆಯ ನವೀಕರಣ ಚೆನ್ನಾಗಿಯೇಸಾಗಿದೆ.

ಶಾಖೆಗಳದ್ವಾರಾ ಈ ಮಹಾಸಂಸ್ಥಾನದ ವ್ಯಾಪ್ತಿಯ ಬಗ್ಗೆ, ಎಲ್ಲ ಯತಿಗಳು ತಂತಮ್ಮ ಅಭೀಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ. ಕಳೆದ ಎರಡು ದಶಕಗಳಿಂದ ಈ ಯೋಜನೆ ತೂಗುಯ್ಯಾಲೆಯಲ್ಲಿದ್ದು ಕೊನೆಗೂಬೆಳಕು ಕಂಡಿತು. ಅಭಿನವ ಯತೀನ್ದ್ರರ ನೇತೃತ್ವದಲ್ಲಿ ಮಠದ ಶಾಖೆಗಳು ಉದಯಿಸಿರುವುದು ದಿಗ್ವಿಜಯಯಾತ್ರೆಯ ಪತಾಕೆಯೇ ಸರಿ. ಟಿವೀಎಸ್ ನ ಖ್ಯಾತ ಕೈಗಾರಿಕೋದ್ಯಮಿ ವೇಣುಶ್ರೀನಿವಾಸನ್ ಚೆನ್ನೈ ಶಾಖೆಗೆ ಭೇಟಿ ಕೊಟ್ಟಾಗ The flagship of Parakala matham ಎಂದಿದ್ದರು.

ತಿರುಪತಿ (ತಿರುಮಲೆ) ಯಲ್ಲಿ 2000 ಕ್ಕೂ ಮುಂಚೆ ಹಲವಾರು ವರ್ಷಗಳ ಹಿಂದೆಯೇ ತಿ.ತಿ.ದೇ ವಿಸ್ತರಣೆಯ ಯೋಜನೆಯ ಕಟ್ಟುಪಾಡಿನಿಂದ ಆಲಯದ ಸುತ್ತಲೂ ಇರುವ ಮಠಾಶ್ರಮಗಳೂ, ವ್ಯಾಪಾರ ಸಂಕೀರ್ಣ ಹಾಗು ವಸತಿ ಗೃಹಗಳ ಸ್ಥಳಾಂತರಕ್ಕೆ ಪ್ರಾರ್ಥನಾ ರೂಪದ ಸೂಚನಾಪತ್ರಗಳನ್ನು ಕಾಲಾವಕಾಶವನ್ನೂ ನೀಡಲಾಗಿತ್ತು. ಇದರಿಂದಾಗಿ ಪುಷ್ಕರಿಣೀ ಪ್ರದೇಶದಲ್ಲಿದ್ದ ಪರಕಾಲಮಠ, ಆಂಡವನ್ ಆಶ್ರಮ, ಆಲಯದ ಬಲ ಭಾಗದಲ್ಲಿದ್ದ ಅಹೋಬಿಲಮಠ ಸ್ಥಳಾಂತರಗೊಂಡವು. 2001 ರಲ್ಲಿ ಹಯಗ್ರೀವಕಲ್ಯಾಣ ಮಂಟಪವು ಹಾಗು ಪುಷ್ಕರಿಣಿಯ ಮೂಲೆಯ ಮೇಲ್ಭಾಗದಲ್ಲಿ ಹಯಗ್ರೀವಸನ್ನಿಧಿಯು ಮೂಡಿಬಂದಿತು. ವಿದ್ವತ್ ಸಭೆ ಕಾರ್ಯಕ್ರಮವೇನೂತನಶಾಖೆಯ ಆರಂಭೋತ್ಸವವಾಯಿತು.
2008 ರಲ್ಲಿ ಶ್ರೀಮಠದ ಚೆನ್ನೈ ಶಾಖೆ ಮೈಲಾಪುರದ ರೈಲು ನಿಲ್ದಾಣದ ಬಳಿ ಪಲ್ಲಾತೋಪು ಸಾನಿಧ್ಯದಲ್ಲಿ ಎರಡಂತಸ್ಥಿನ ಹಯಗ್ರೀವ ಭವನ ಅಸ್ತಿತ್ವಕ್ಕೆ ಬಂದಿತು.

2002 ರಲ್ಲಿಯೇ ಉಪ್ಪಲ್ ಬಡಾವಣೆಯ ಮೇತಪಲ್ಲಿಯಲ್ಲಿ ಭಕ್ತರೊಬ್ಬರು ಖಾಲೀ ನಿವೇಶನವೊಂದನ್ನು ದಾನಮಾಡಿದರು. ಅಹೋಬಿಲಸ್ವಾಮಿಗಳ ಸಮ್ಮುಖದಲ್ಲಿ ಅಭಿನವ ವಾಗೀಶರು ಭೂಮಿ ಪೂಜೆಯನ್ನು ನೆರವೇರಿಸಿದರು. ಇನ್ನೂಕೆಲ ಭಕ್ತರು, ಯತಿದ್ವಯರ ಸಾನಿಧ್ಯದಲ್ಲಿಯೇ ಕಟ್ಟಡಗಳಲ್ಲಿ ಬರುವ ವಿವಿಧ ಹಂತಗಳ ನಿರ್ಮಾಣಗಳಿಗೆ ಅಂದರೆ ನೆಲ, ಗೋಡೆಗಳಿಗೆ ಸುಣ್ಣಾ-ಬಣ್ಣಾ, ಉಕ್ಕು-ಕಬ್ಬಿಣದ ಪೂರೈಕೆ, ನೀರು, ವಿದ್ಯುಚ್ಛಕ್ತಿ ಇತ್ಯಾದಿಗಳ ಬಗ್ಗೆ ತಂತಮ್ಮ ಕೊಡುಗೆಗಳನ್ನು ಅಂದೇ ಘೋಷಿಸಿದರು. ಸಮಿತಿಯ ವತಿಯಿಂದ ಮೂರ್ತಿಗಳು ಮೂಡಿಬಂದು 2010 ರಲ್ಲಿ ಅಧಿಕೃತವಾಗಿ ಶಾಖೆಯು ಆರಂಭಗೊಂಡಿತು. ಕಾರ್ಯಕಾರಿ ಸಮಿತಿಯನ್ನೂ, ದಾನಿಗಳನ್ನೂ ಶ್ರೀಗಳು ಅಭಿನಂದಿಸಿದರು. ಹೀಗೆ ದಾನಿಭಕ್ತರಿಂದ ಸಮರ್ಪಣೆಯಾಗಿರುವ ದೈವಿಕ ಪೂಜಾಸಿರಿಯಲ್ಲಿ ಲಕ್ಷ್ಮೀನೃಸಿಂಹಮೂರ್ತಿ, ಚಿಕ್ಕದಾದ ಸ್ವರ್ಣ ಲಕ್ಷ್ಮೀನೃಸಿಂಹಮೂರ್ತಿ, ಹಯಗ್ರೀವ ಮೂರ್ತಿ, ಸ್ವರ್ಣ ಯೋಗನೃಸಿಂಹಮೂರ್ತಿ, ಸ್ವರ್ಣ ಹಾಗು ರಜತ ಹಯಗ್ರೀವ ಯಂತ್ರ, ಬೆಳ್ಳಿ ಸಂಪುಟ, ಉಪಚಾರ, ಬೀಸಣಿಗೆ, ತೇಗದ ಪೆಟ್ಟಿಗೆಗಳು, ದಿವ್ಯಾಭರಣಗಳು, ವಿವಿಧ ಬಣ್ಣಗಳ ರೇಷ್ಮೆಯ ವಸ್ತ್ರಗಳು ಬಂದಿರುವುವು. ದೇಶಿಕರು ಪಾದುಕಾ ಸಹಸ್ರದಲ್ಲಿ ಭಕ್ತರ ಇಂತಹ ಕೊಡುಗೆಗಳನ್ನು ಭಗವಂತನಿಂದ ತ್ವರಾತಿಶಯವಾಗಿ ಬಂದ ಕೃಪೆ - ಆಕಸ್ಮಿಕ ಅನುಗ್ರಹ “ಆಕಸ್ಮಿಕೀಂ ರಂಗಪತೇಃ ಪ್ರಸಕ್ತಿಂ …” ಎಂದು ಅದ್ಭುತವಾಗಿ ಸ್ತುತಿಸಿದ್ದಾರೆ.

ಸತ್ಯಾಕಾಲದ ಪರಕಾಲಮಠ ಹಾಗು ಕೋಟೆ ವರದರಾಜಸ್ವಾಮಿ ದೇವಸ್ಥಾನ ಅಭ್ಯುದಯದೆಡೆಗೆ ಸಾಗಿತು. 2010-11 ರಲ್ಲಿ ಆಲಯದ ರಾಜಗೋಪುರ ನಿರ್ಮಾಣ, ದೊಡ್ಡ ಪಾಕಶಾಲೆ ಹಾಗು ಹಯಗ್ರೀವ ಮೂರ್ತಿಯು ಮಠದಲ್ಲಿ ಶಾಸ್ತ್ರೋಕ್ತವಾಗಿ ಪ್ರತಿಷ್ಠಾಪಿಸಲಾಯಿತು.

**ದೂರದ ವಿಜಯಯಾತ್ರೆಗಳು**

1999-2000 ಮುಂಬೈ ನ ಸಂಯುಕ್ತ ಯಾತ್ರೆ ಒಟ್ಟು ೪೫ ದಿನಗಳು. ದಾವಣಗೆರೆ, ಧಾರವಾಡ, ಬೆಳಗಾವಿ, ಪೂನಾ ದ್ವಾರ ದೊಂಬಿವಿಲಿಯ ಬಾಲಾಜೀಮಂದಿರದಲ್ಲಿ ೧೫ ದಿನಗಳೂ, ಚೆಂಬೂರಿನ ಅಹೋಬಿಲಮಠದಲ್ಲಿ ಇನ್ನೂ೧೫ ದಿನಗಳೂ, ನಂತರ ಸೂರತ್, ಬರೋಡಾ ಅಹಮದಾಬಾದ್ ನಗರಗಳಲ್ಲಿ ಎರಡೆರಡು ದಿನಗಳ ನಂತರ ದೊಂಬಿವಿಲ್ಲಿಗೆ ವಾಪಸ್. ಮಹಾರಾಷ್ಟ್ರರಾಜ್ಯದ ಕಾರ್ಯದರ್ಶಿಯ ಆಜ್ಞೆಯಮೇರೆಗೆ ಬಿಗಿಯಾದ ಪೋಲೀಸ್ ಭದ್ರತಾ ವ್ಯವಸ್ಥೆ ಸಾಧ್ಯವಾಯಿತು. ಪಟೇಲ್ ಮನೆತನದವರು ಈಮೂರೂ ಪಟ್ಟಣಗಳಲ್ಲಿ ಶ್ರೀಗಳವರನ್ನು ಚೆನ್ನಾಗಿ ಭಾವಿಸಿ ಗೌರವಿಸಿದರು. ಸೂರತ್ ನ ಅಖಂಡ ಸಹಸ್ರನಾಮ ಗೋಷ್ಠೀ ಶ್ರೀಗಳಿಗೆ ತುಂಬಾ ಹಿಡಿಸಿತು. ಬೆಂಗಳೂರಿಗೆ ಹಿಂತಿರುಗುವಾಗ ಕೊಲ್ಲಾಪುರದ ಸೇವೆಯೂ ಆಯಿತು. ಮುಂದಿನ ವರ್ಷಗಳಲ್ಲಿ ಶ್ರೀಗಳು ದ್ವಾರಕಾ, ನಾಥದ್ವಾರಾ ಕ್ಷೇತ್ರಗಳನ್ನು ಸಂದರ್ಶಿಸಿದ್ದಾರೆ.

ಎರಡು ಬಾರಿಯ ಸೇತು ಸೇವೆ (ತಿರುಪ್ಪುಲ್ಲಾಣೀ - ದರ್ಭಶಯನ) ಆಗಿ ಹಯಾಸ್ಯರಿಗೆ ಎರಡುಬಾರಿ ಅವಭೃತಸ್ನಾನವಾಗಿದೆ. ಇಂತಹ ಒಂದು ಯಾತ್ರೆಯಲ್ಲಿ ಅನಿವಾರ್ಯವಾಗಿ ಇಡೀ ರಾತ್ರಿ ಸುಮಾರು ೧೨ ಘಂಟೆಗಳಕಾಲ ಪ್ರಯಾಣ ಮಾಡಿ ಮೈಸೂರು ಸೇರಿದ್ದಾಯಿತು.

ಹೈದರಾಬಾದು ಯಾತ್ರೆಗೆ ಸುಮಾರು ೧೧ ಘಂಟೆಗಳ ಕಾಲ ಬೇಕಾಗುವುದು. ಪ್ರಥಮ ನಿಲುಗಡೆ ಅನಂತಪುರ. ಎರಡನೆಯದು ಮಾಧ್ವಭಕ್ತರೊಬ್ಬರು ನಡೆಸುತ್ತಿರುವ ಆಂಜನೇಯ ದೇವಸ್ಥಾನ. ಮೂರನೆಯದು ಮೆಹ್ಬೂಬ್ ನಗರ. ತುರ್ತು ಪರಿಸ್ಥಿತಿಯಿಂದಾಗಿ ಎರಡು ಬಾರಿ ರಾತ್ರಿಯ ಪ್ರಯಾಣ ಅನಿವಾರ್ಯವಾಯಿತು. ಇಂತಹ ದೀರ್ಘಾವದಿ ರಾತ್ರಿಯ ಸಂಚಾರ ಸ್ವಲ್ಪ ಅಪಾಯಕಾರಿಯಲ್ಲವೇ?ಎಂದು ಶ್ರೀಗಳಲ್ಲಿ ಬಿನ್ನಪಿಸಿಕೊಂಡಾಗ, "ಶಂಕಾಕಳಂಕ ನಿವೃತ್ತಿಗಾಗಿ ಹಯಗ್ರೀವನಿದ್ದಾನೆ. ಎಲ್ಲವನ್ನೂ ಅವನು ನೋಡಿಕೊಳ್ಳುವನು ನಡೆಯಿರಿ" ಎಂದು ವಿಶ್ವಾಸದಿಂದ ಹೇಳಿದರು. ದೇಶಿಕರ ಪಾದುಕಾಸಹಸ್ರದ ಸಂಚಾರ ಪದ್ಧತಿಯಲ್ಲಿ ಈ ರೀತಿಯ ಶಂಕಾ ನಿವಾರಣೆ ಉಕ್ತವಾಗಿದೆ. ಭಗವಂತನ ಸಂಚಾರವು ಸಮೀಚೀನಮಾರ್ಗದಲ್ಲಿ ಉಂಟಾಗುವುದರಿಂದ ದುರ್ಮಾರ್ಗ ಸಂಚಾರವಿರದು (ಸಂಚಾರ ಪದ್ಧತಿ) -

"ಸಂಪದ್ಯತೆ ಸಮುಚಿತಂ ಕ್ರಮಮಾಶ್ರಯಂತ್ಯಾ ಸದ್ವರ್ತ್ಮನಾ ಭಗವತೋಽಪಿ ಗತಿರ್ಭವತ್ಯಾ |
ಈಷ್ಟೇ ಪದಾವನಿ ಪುನಃ ಕ ಇವೇತರೇಷಾಂ ವ್ಯಾವರ್ತನಸ್ಯ ವಿಷಮಾತ್ ಅಪಥಪ್ರಚಾರಾತ್ ||"

ಇಂತಹ ವಿಶ್ವಾಸ, ಧೈರ್ಯ, ಮನಸ್ಥೈರ್ಯ, ಧೃಢ ಸಂಕಲ್ಪಗಳಿಂದಲೇನೂತನ ವಾಗಧೀಶರು ಇದುವರೆಗೆ ಕೈಗೊಂಡ ದಿಗ್ವಿಜಯ ಯಾತ್ರೆಗಳು ಶಿಷ್ಯಾರ್ಜನೆ, ಶಾಖೋತ್ಪತ್ತಿ, ಧರ್ಮ ಪ್ರಸರಣ ಇನ್ನೂ ತತ್ಸಂಬಂಧಿತ ಕಲಾಪಗಳು ನಿಜವಾದ ಸಂತೋಷವನ್ನು ನೀಡಿವೆ. ಕಷ್ಟಪಟ್ಟರೆ ಖಂಡಿತ ಫಲ ಉಂಟು ಎಂಬ ಉಕ್ತಿಗೆ ಇವು ಸಾಕ್ಷೀಭೂತವಾಗಿವೆ.

ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ
ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ

॥ ಶ್ರೀಃ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ॥

# ಆಚಾರ್ಯ ಸ್ತುತಿ

ಕೀಳ್ನೀರ್ ಕುಂದ್ರಂ ವೇಲೂರ್ ಈಯುಣ್ಣಿ ಶ್ರೀಮಾನ್ ಉ. ವೇ ವಿಜಯರಾಘವಾಚಾರ್ಯ

---

ಶ್ರೀ ಬ್ರಹ್ಮತನ್ತ್ರಂ ಯತಿವರ್ಯಮಾದ್ಯಂ ಸದಾ ಹೃದನ್ತೇ ವಿನಿವೇಶಯನ್ತಮ್ /
ಲಕ್ಷ್ಮೀಹಯಾಸ್ಯಸ್ಯ ವಿನೋದನೋತ್ಕಂ ನಮಾಮಿ ವಾಗೀಶಗುರುಂ ನವೀನಮ್ // ೧

ಚೈತ್ರಾಖ್ಯಮಾಸಿ ಹ್ಯವತೀರ್ಯ ಯೋ ನಃ ರೈವತ್ಯ ತಾರೇ ಪ್ರತಿಬೋಧಯನ್ ಪರಾಮ್ /
ವಿದ್ಯಾಮವಿದ್ಯಾತಮಸೋಽಪನೋದಕಂ ನಮಾಮಿ ವಾಗೀಶಗುರುಂ ನವೀನಮ್ // ೨

ಸ್ವಸುಸ್ಮಿತಾಹ್ಲಾದಮನೋಹರೈಃ ಶುಭೈಃ ದೃಗ್ಭಿಃ ದಯಾರ್ದ್ರೈಃ ಪ್ರಧಿನೋತಿ ನೋ ಯಃ /
ಸ್ವಶಿಷ್ಯನಿಃಶ್ರೇಯಸಿ ಬದ್ಧದೀಕ್ಷಂ ನಮಾಮಿ ವಾಗೀಶಗುರುಂ ನವೀನಮ್ // ೩

ತ್ರಿದಣ್ಡಕಾಷಾಯಪವಿತ್ರಸೂತ್ರೈಃ ತಥೋರ್ಧ್ವಪುಣ್ಡ್ರೈಃ ಸುಮನೋಹರಂ ಯತಿಮ್ /
ತಂ ಸ್ಮಾರಯನ್ತಂ ಯತಿರಾಜರಾಜಂ ನಮಾಮಿ ವಾಗೀಶಗುರುಂ ನವೀನಮ್ // ೪

ದಯಾಗ್ರಣೀಃ ಸರ್ವಗುರೂತ್ತಮಾಪ್ತ ಕೃಪಾಭಿರಾಪೂರಿತಸಾಗರೋಪಮಃ/
ಮನ್ತ್ರೋತ್ತಮೈರ್ಯನ್ತ್ರಿತಮಾನಸಸ್ತಂ ನಮಾಮಿ ವಾಗೀಶಗುರುಂ ನವೀನಮ್ // ೫

ಯದೀಯ ಪಾದಾಮ್ಬುಜ ಸಂಶ್ರಯೇಚ್ಛಾಽಪ್ಯಘೌಘವಿಧ್ವಂಸಪಟೀಯಸೀ ತಥಾ /
ಯಚ್ಛಾಯಯಾ ಸಂಸೃತಿತಾಪನಾಶನಂ ನಮಾಮಿ ವಾಗೀಶಗುರುಂ ನವೀನಮ್ // ೬

ಇತ್ಥಂ ಗುರುಂ ಚಿನ್ತಯತಾಮಮೀಭಿಃ ಸ್ತೋತ್ರೈಃ ಪ್ರಗಾಯನ್ ಪರಕಾಲಸೂರಿಣಮ್ /
ನವೀನವಾಗೀಶಗುರೂತ್ತಮಂ ಮುದಾ ಸಮಸ್ತಕಲ್ಯಾಣಗುಣಾಶ್ರಯನ್ತೇ // ೭

॥ ಶ್ರೀಃ ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ ॥

# ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳು

ಶ್ರೀಮಾನ್ ಉ. ವೇ ಸ್ವಚ್ಛಂದಂ ಎ. ಶ್ರೀನಿವಾಸರಂಗನ್

**ಬೆಂಗಳೂರು**

---

ಶ್ರೀ ಶ್ರೀ ಶ್ರೀನಿವಾಸ ಮಹಾದೇಶಿಕಾಯ ನಮಃ

ಶ್ರೀ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಪರಕಾಲ ಮಹಾದೇಶಿಕಾಯ ನಮಃ

ಶ್ರೀ ಶ್ರೀಮದಭಿನವ ವಾಗೀಶಬ್ರಹ್ಮತಂತ್ರ ಪರಕಾಲ ಸ್ವಾಮಿಯವರ ಆಗನೇ ಶುಭ ತಿರುನಕ್ಷತ್ರದಂದು ಆಚಾರ್ಯರಿಗೆ ಸಾಷ್ಟಾಂಗ ಪ್ರಣಾಮಗಳನು- ಅರ್ಪಿಸಿ, ಈ ಸುಸಂದರ್ಭದಲ್ಲಿ ನನ- ಕೆಲವು ಅನುಭವಗಳನು- ಪ್ರಕಟಿಸಲು ಅವಕಾಶ ಮಾಡಿಕೊಟ್ಟ ಎಲ್ಲರಿಗೂ ನನ- ವಂದನೆಗಳನು- ತಿಳಿಸಲು ಇಚ್ಛಿಸುತ್ತೇನೆ. ಆಚಾರ್ಯರು, ಪೂರ್ವಾಶ್ರಮದಲ್ಲಿ ಬಹಳ ಚಿಕ್ಕ ವಯಸ್ಸಿನಿಂದಲೂ ವೈರಾಗ್ಯ ಸಂಪನ್ನರಾಗಿದ್ದು, ಭಕ್ತಿ, ಶ್ರದ್ಧೆ, ನಿಷ್ಠೆಯಿಂದ ಕೂಡಿ ಎಲ್ಲರನು- ಆಕರ್ಷಿಸಿದವರು. ಇವರಲ್ಲಿ ಇದ್ದ ವಿಶೇಷ ಗುಣಗಳಿಂದ ಎಲ್ಲರೂ ಇವರನು- 'ಭವಿಷ್ಯತ್ ಆಚಾರ್ಯ'ರೆಂದೇ ಹೇಳುತ್ತಿದ್ದರು.

ಆಚಾರ್ಯರು ತಮ್ಮ ಕೆಲವು ವೇದಾಂತ ಕಾಲಕ್ಷೇಪಗಳನ್ನು ನಮ್ಮ ತಂದೆಯವರ ಸಾನಿಧ್ಯದಲ್ಲಿ ಮಾಡಿದ್ದಾರೆ. ಅವರು ನಮ್ಮ ವಿಜಯನಗರದ ಮನೆಗೆ ಸರಿಯಾಗಿ ಸಾಯಂಕಾಲ ೫.೩೦ ಘಂ. ಬರುತ್ತಿದ್ದರು. ತಮ್ಮ ಸಾಯಂಕಾಲದ ಆಹ್ನಿಕಗಳನು- ಮುಗಸಿ, ನಮ್ಮ ತಾಯಿಯವರಿಗೆ ತಪ್ಪದೇ ನಮಸ್ಕರಿಸಿ ಕಾಲಕ್ಷೇಪದಲ್ಲಿ ತೆರಳುತ್ತಿದ್ದರು. ಒಂದು ದಿನವೂ ತಡವಾಗಿ ಬಂದವರಲ್ಲ. ಅವರು ಅವರ ಸಮಯವನು- ಯಾವುದೇ ಲೌಕಿಕ ವಿಚಾರದಲ್ಲಿಯೂ ಕಳೆಯುತ್ತಿರಲಿಲ್ಲ. ಆಚಾರ್ಯರಿಗೆ ನಮ್ಮ ಎಲ್ಲಾ ಆಶ್ರಮ, ಮಠದ ಪೂರ್ವಾಚಾರ್ಯರ ಪರಿಚಯ ಚೆನಾಗಿ ಇದ್ದಿತು. ನಮಗೆ ಕೆಲವು ವೇಳೆ ಪೂರ್ವಾಚಾರ್ಯರುಗಳ ಸ್ವಾರಸ್ಯ ಘಟನೆಗಳನು- ಹೇಳುತಿದ್ದರು. ನಾವು ಕುತೂಹಲದಿಂದ ಕೇಳಿ ಆನಂದ ಪಡುತಿದ್ದೆವು. ಪೂರ್ವಾಚಾರ್ಯರ ತಿರುನಕ್ಷತ್ರಗಳನು- ಆಚಾರ್ಯರು ತಮ್ಮ ಸ್ವಗೃಹದಲ್ಲೇ ವಿಶೇಷವಾಗಿ ಕೊಂಡಾಡುತ್ತಿದ್ದರು. ಅವರು ನಿವೇದನೆ ಮಾಡಿದ ಭಗವತ್ ಪ್ರಸಾದವನು-ನಮಗೆಲ್ಲಾ ತಂದು ನೀಡುತ್ತಿದ್ದರು. ಅದನು-ಪಡೆದ ನಾವುಗಳೇ ಭಾಗ್ಯವಂತರು. ನಮ್ಮ ತಂದೆಗೆ ಆಚಾರ್ಯರ ವಿಚಾರದಲ್ಲಿ ವಿಶೇಷ ಆದರ, ಭಕ್ತಿ ಗೌರವಗಳು ಇದ್ದಿತು. ನಮ್ಮ ತಂದೆಯವರು ಬರೆದು ಪ್ರಕಟಿಸಿದ ಬಹಳಷ್ಟು ಗ್ರಂಥಗಳನು-ಆಚಾರ್ಯರು ಬಿಡುಗಡೆ ಮಾಡಿದ್ದಾರೆ. ನಮ್ಮ ತಂದೆಯವರ ಪ್ರತಿ

ತಿರುನಕ್ಷತ್ರಗಳಲ್ಲಿ ಪಾಲ್ಗೊಂಡು, ನಮ್ಮನೆಲ್ಲಾ ಅನುಗ್ರಹಿಸಿದ್ದಾರೆ. ಕೆಲವೊಮ್ಮೆ ವಿಶೇಷವಾಗಿ ನಮ್ಮ ತಂದೆಯವರ ತಿರುನಕ್ಷತ್ರದಲ್ಲಿ ಪಾಲ್ಗೊಳ್ಳಲು ಮೈಸೂರಿನಿಂದ ಆಗಮಿಸಿದ್ದಾರೆ.

ನಮ್ಮ ತಂದೆಯವರಿಗೆ ಶ್ರೀ ಗೋಪಾಲಮಹಾದೇಶಿಕನ್ ಸ್ವಾಮಗಳು ನಿತ್ಯ ಗ್ರಂಥವನು- ಕನಢದಲ್ಲಿ ಪ್ರಕಟಿಸಲು ಪ್ರೇರಣೆ ಮಾಡಿ ಅದರ ನಿರ್ವಹಣೆಯನು- ಸಂಪೂರ್ಣವಾಗಿ ಕ್ರಮ ವಹಿಸಿದರು. ನಮ್ಮ ತಂದೆಯವರ ಲಂನೇ ವರ್ಷವರ್ಧಂತಿಯ ಸಮಯದಲ್ಲಿ ಆಚಾರ್ಯರು ತಮಿಳುನಾಡಿನ ಪ್ರವಾಸದಲ್ಲಿದ್ದು ಅಂದು ಸಮಾರಂಭಕ್ಕೆ ಆಗಮಿಸಲೇಬೇಕೆಂದು ಇಡೀ ರಾತ್ರಿ ಪ್ರಯಾಣ ಮಾಡಿ ಬೆಂಗಳೂರು ಸೇರಿದರು. ಪ್ರಯಾಣವು ಬಹಳ ಆಯಾಸಕರವಾಗಿದ್ದಿತು. ನಮ್ಮ ತಂದಯವರ ಅಭಿಮಾನದಿಂದ ಆಚಾರ್ಯರು ದೇಹಾಲಸ್ಯವನು- ಪರಿಗಣಿಸಲಿಲ್ಲ. ಎಂತಹ ಉದಾರ ಮನೋಭಾವ! ಅವರ ಆಗಮನವು ನಮ್ಮ ತಂದೆ ಹಾಗು ತಾಯಿಯವರಿಗೆ ಬಹಳ ಸಂತೃಪ್ತಿ ಉಂಟು ಮಾಡಿತು. ಮಧ್ಯಾಹಢ ಕಲಾಪಗಳೆಲ್ಲಾ ಮುಗಿಯುವರೆಗೂ ಆಚಾರ್ಯರು ಆಸೀನರಾಗಿದ್ದರು. ಅದೇ ದಿನ ನಮಗೆ ನಂಬಲಾಗದ ಸಂತೋಷವನು- ಮತ್ತೊಂದು ಪ್ರಸಂಗ ನೀಡಿತು. ಆಚಾರ್ಯರು ನಮ್ಮ ತಂದೆಯವರ ತಿರುನಕ್ಷತ್ರದ ದಿನ, ಸಾಯಂಕಾಲ ನಮ್ಮ ಮನೆಗೆ ತಾವು ಶ್ರೀ ಲಕ್ಷ್ಮೀ ಹಯಗ್ರೀವ ಮೂರ್ತಿಯೊಡನೆ ಆಗಮಿಸುವುದಾಗಿ ತಾವೇ ಸ್ವತಃ ತಿಳಿಸಿದರು. ನಮ್ಮ ಕುಟುಂಬದವರಿಗೆಲ್ಲಾ ಇದು ಬಹಳ ಆಶ್ಚರ್ಯ ಹಾಗೂ ಬಹಳ ಸಂತೋಷವನು- ನೀಡಿತು. ಅಂದು ಸಾಯಂಕಾಲ ೬ ಘಂ ಆಗಮಿಸಿ, ಶ್ರೀ ಲಕ್ಷ್ಮೀ ಹಯಗ್ರೀವರನು- ಡೋಲಿನಲ್ಲಿ ಬಿಜಯ ಮಾಡಿಸಿ, ಸಹಸ್ರನಾಮಾದಿಗಳೊಡನೆ ಭಗವಂತನನು- ಆರಾಧಿಸಿ ನಮ್ಮನೆಲ್ಲಾ ವಿಶೇಷವಾಗಿ ಅನುಗ್ರಹಿಸಿದರು. ಆಚಾರ್ಯರ ಸರಳ ಸ್ವಭಾವಕ್ಕೆ ಇದುವೇ ಸಾಕ್ಷಿ!

ಮುಂದಿನ ದಿನಗಳಲ್ಲಿ, ನಮ್ಮ ತಂದೆಯವರ ಆರೋಗ್ಯವು ಅನುಕೂಲವಾಗಿಲ್ಲವೆಂದು ತಿಳಿದಾಗ, ಸ್ವತಃ ತಾವೇ ನಮ್ಮ ಮನೆಗೆ ಬಂದು, ನಮ್ಮ ತಂದೆಯವರ ಆರೋಗ್ಯವನು- ವಿಚಾರಿಸಿ, ಧೈರ್ಯ ಹೇಳಿದ್ದರು. ಅವರಿಗೆ 'ರಾಷ್ಟ್ರಪತಿ ಪ್ರಶಸ್ತಿ' ದೊರೆತಾಗ ಆಚಾರ್ಯರು ಬಹಳ ಸಂತೋಷದಿಂದ ಅನುಗ್ರಹಿಸಿದ್ದರು. ನಮ್ಮ ತಂದೆಯವರು ತಮ್ಮ ಅಂತಿಮ ಕಾಲದಲ್ಲಿ ಪ್ರಕಟಿಸಿದ 'ಪಂಚಸ್ತವಗಳು' (ಪುನರ್ಮುದ್ರಣ) ಆಚಾರ್ಯರು ನಮ್ಮ ಮನೆಗೆ ಆಗಮಿಸಿ ಬಿಡುಗಡೆ ಮಾಡಿದರು. ಇದೇ ಸಂದರ್ಭದಲ್ಲಿ ಶ್ರೀಲಕ್ಷ್ಮೀಹಯಗ್ರೀವರನು- ಬಿಜಯ ಮಾಡಿಸಿ ನಮ್ಮನೆಲ್ಲಾ ಅನುಗ್ರಹಿಸಿದರು. ವಿಜಯನಗರದ ಶ್ರೀರಾಮಮಂದಿರದಲ್ಲಿ ಆಚಾರ್ಯರು ನಡೆಸಿಕೊಟ್ಟ 'ತಿರುಪ್ಪಾವೈ' ಪ್ರವಚನವು ಬಹಳ ವಿಶೇಷವಾಗಿ ಮೂಡಿಬಂದಿತು. ಬಹಳಷ್ಟು ವಿಚಾರಗಳನು- ಹೇಳಿ ಸ್ವಾರಸ್ಯವಾಗಿ ಉಪನ್ಯಾಸ ಮಾಡಿದ್ದರು. ನಮ್ಮ ತಾಯಿಯವರು ಆಚಾರ್ಯರ ಪ್ರವಚನವನು- ಬಹಳ ಮೆಚ್ಚಿಕೊಂಡಿದ್ದರು. ಪರಮಾಚಾರ್ಯರಾದ ಶ್ರೀ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳ ಮಧುರ ಗುಣಗಳನು- ನೆನೆದು ನೆನೆದು 'ತುಷ್ಯಂತಿ ಚ ರಮಂತಿ ಚ' ಎಂಬಂತೆ, ಸಂತೋಷಪಡುವುದಕ್ಕಿಂತ ಭಾಗ್ಯ ನಮಗೆ ಬೇರೆ ಏನಿದೆ?

ದಾಸನ್ ಎ. ಶ್ರೀನಿವಾಸರಂಗನ್

(S/o Dr. ಎನ್. ಎಸ್. ಅನಂತರಂಗಾಚಾರ್)

॥ ಶ್ರೀಃ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ॥

# ರಾಮೋ ವಿಗ್ರಹವಾನ್ ಧರ್ಮ:

**(ಡಾ. ಎನ್. ಎಸ್. ಅನಂತರಂಗಾಚಾರ್ಯರ ಉಪನ್ಯಾಸದ ಸಂಗ್ರಹ)**

ಶ್ರೀಮಾನ್ ಉ. ವೇ ಸ್ವಚ್ಛಂದಂ ಎ.ನರಸಿಂಹನ್

ಬೆಂಗಳೂರು

---

## ಶ್ರೀಶ್ರೀ ಪರಮಹಂಸೇತ್ಯಾದಿ ಶ್ರೀಹಯಗ್ರೀವಪಾದುಕಾಸೇವಕ ಶ್ರೀಮದಭಿನವವಾಗೀಶ ಬ್ರಹ್ಮತಂತ್ರಸ್ವತಂತ್ರಪರಕಾಲ ಮಹಾದೇಶಿಕರ ವೈಭವ

ಪ್ರಕೃತ ಶ್ರೀಬ್ರಹ್ಮತಂತ್ರಸ್ವತಂತ್ರಪರಕಾಲಮಠಾಧೀಶರಾಗಿರುವ ಶ್ರೀಶ್ರೀ ಪರಮಹಂಸೇತ್ಯಾದಿ ಶ್ರೀಹಯಗ್ರೀವಪಾದುಕಾಸೇವಕ ಶ್ರೀಮದಭಿನವವಾಗೀಶ ಬ್ರಹ್ಮತಂತ್ರಸ್ವತಂತ್ರಪರಕಾಲ ಮಹಾದೇಶಿಕರ ಶುಭತಿರುನಕ್ಷತ್ರದ ಶುಭಸಂದರ್ಭದಲ್ಲಿ ಆಚಾರ್ಯರ ಪುಣ್ಯಸ್ಮರಣೆಯ ಭಾಗ್ಯವು ದಾಸನಿಗೆ ದೊರಕಿರುವುದು ಯಾವುದೋ ಪೂರ್ವಜನ್ಮದ ಮಹಾಸುಕೃತವಿಶೇಷದಿಂದಲೇ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲವು. ಭಗವದಂಶಸಂಭೂತರಾದ ಆಚಾರ್ಯರನ್ನು ಪೂಜೆಮಾಡಬೇಕು, ಉಪಾಸನೆಮಾಡಬೇಕು ಎಂಬುದಾಗಿ ಮುಂಡಕೋಪನಿಷತ್ತು 'ತಸ್ಮಾತ್ ಆತ್ಮಜ್ಞಂ ಹ್ಯರ್ಚಯೇತ್ ಭೂತಿಕಾಮ:', 'ಉಪಾಸತೇ ಪುರುಷಂ ಯೇ ಹ್ಯಕಾಮಾ: ತೇ ಶುಕ್ರಮೇತತ್ ಅತಿವರ್ತಂತಿ ಧೀರಾ:' ಮುಂತಾಗಿ ಉಪದೇಶಮಾಡುವುದು. ಪ್ರತ್ಯಕ್ಷವಾಗಿ ಕಾಣಬಹುದಾದ ಆಚಾರ್ಯರನ್ನು ಬಿಟ್ಟು ಶಾಸ್ತ್ರಗಮ್ಯನಾದ ಭಗವಂತನನ್ನು ಹುಡುಕಿಕೊಂಡುಹೋಗುವುದು ಕೈಯಲ್ಲಿನ ನೀರನ್ನು ಬಿಟ್ಟು ಮೇಘದಲ್ಲಿನ ನೀರನ್ನು ಆಸೆಪಡುವಂತೆ ಎಂಬುದು ಅಭಿಯುಕ್ತರ ವಚನವು. ಹೀಗೆ ಪೂಜ್ಯರಾದ ಆಚಾರ್ಯರು ಭಗವಂತನ ಗುಣಗಳನ್ನೆಲ್ಲ ಮೈಗೂಡಿಕೊಂಡು ಅವತರಿಸಿರುವವರು. ಅದರಲ್ಲೂ ಶ್ರೀಮದ್ರಾಮಾಯಣದಲ್ಲಿ ಅತ್ಯಂತ ಅಭಿರುಚಿಯುಳ್ಳ ಪ್ರಕೃತ ಪರಕಾಲಮಠಾಧೀಶರು ಶ್ರೀರಾಮನ ಅವತಾರವೇ ಎಂದು ಹೇಳಬಹುದು. ವಾಲ್ಮೀಕಿಗಳಿಗೆ ನಾರದರು ಶ್ರೀರಾಮನ ಯಾವ ಗುಣಗಳನ್ನು ಪ್ರಕಾಶಪಡಿಸಿದರೋ ಆ ಗುಣಗಳನ್ನೆಲ್ಲ ನಮ್ಮ ಆಚಾರ್ಯಸಾರ್ವಭೌಮರಲ್ಲಿ ಕಾಣಬಹುದು.

ನಾರದರು ಹೇಳಿದ ಅನೇಕ ಗುಣಗಳಲ್ಲಿ ಧರ್ಮಜ್ಞ:, ದ್ಯುತಿಮಾನ್, ಧೃತಿಮಾನ್, ನೀತಿಮಾನ್, ವಾಗ್ಮೀ, ಪ್ರಜಾನಾಂ ಹಿತೇ ರತ:, ಯಶಸ್ವೀ, ಜ್ಞಾನಸಂಪನ್ನ:, ಶುಚಿ:, ವಶ್ಯ:, ಸರ್ವಶಾಸ್ತ್ರಾರ್ಥತತ್ತ್ವಜ್ಞ:, ಸರ್ವಲೋಕಪ್ರಿಯ:, ಸರ್ವದಾಭಿಮತ: ಸದ್ಭಿ: ಮುಂತಾಗಿ ಸ್ತೋತ್ರಮಾಡಿರುವುದೆಲ್ಲವನ್ನೂ ಅಕ್ಷರಶ: ಪ್ರಕೃತ ಪರಕಾಲಸ್ವಾಮಿಗಳಲ್ಲಿ

**ಶಿಷ್ಯರೆಲ್ಲರೂ ಅನುಭವಿಸಿರುವರೆಂಬುದು ಲೋಕವಿದಿತ. ವಿಶೇಷವಾದ ಜಪಸಿದ್ಧಿಯಿಂದ ತೇಜಸ್ವಿಗಳಾಗಿ ಪ್ರತಿಯೊಂದು ತಿರುನಕ್ಷತ್ರಾದಿ ವಿಶೇಷಸಂದರ್ಭಗಳಲ್ಲಿಯೂ ಲೋಕಹಿತಕ್ಕಾಗಿಯೂ, ಲೋಕಸಂಗ್ರಹಕ್ಕಾಗಿಯೂ ಶ್ರೀಮಹಾಸುದರ್ಶನಹೋಮ, ಶ್ರೀಹಯಗ್ರೀವಹೋಮವೇ ಮೊದಲಾದ ವಿಶೇಷಹೋಮಾದಿಗಳನ್ನು ಏರ್ಪಡಿಸಿ ಎಲ್ಲರಿಗೂ ಪರಮಹಿತವನ್ನುಂಟುಮಾಡುತ್ತಿರುವರು. ವಿಖ್ಯಾತ ವಾಗ್ಮಿಗಳಾದ ಆಚಾರ್ಯರು ವಿಶೇಷಸಂದರ್ಭಗಳಲ್ಲಿ ರೋಚಕವಾಗಿಯೂ ಪ್ರಮಾಣಪೂರ್ವಕವಾಗಿಯೂ ತತ್ತ್ವೋಪದೇಶವನ್ನು ಮಾಡುತ್ತಿರುವರು. ಲೌಕಿಕ ವೈದಿಕ ಕ್ಷೇತ್ರಗಳೆರಡರಲ್ಲೂ ಚೆನ್ನಾಗಿ ನುರಿತವರು ಶ್ರೀಮದಾಚಾರ್ಯರು, 'ಯುಕ್ತಾ ಆಯುಕ್ತಾ: ಅಲೂಕ್ಷಾ ಧರ್ಮಕಾಮಾ: ಸ್ಯು:' ಎಂಬ ಶ್ರುತ್ಯುಕ್ತಿಯಂತೆ. ಇವೆಲ್ಲಕ್ಕೂ ಕಳಶವಿಟ್ಟಂತೆ ಅತ್ಯಂತ ಸುಲಭರು, ಸುಶೀಲರೂ ಸಹ. ಹೀಗೆ ಶ್ರೀರಾಮನ ಗುಣಗಳೆಲ್ಲವನ್ನೂ ಪ್ರಕಾಶಪಡಿಸುತ್ತಿರುವ ಆಚಾರ್ಯರ ತಿರುನಕ್ಷತ್ರದ ಶುಭಸಂದರ್ಭದಲ್ಲಿ 'ರಾಮೋ ವಿಗ್ರಹವಾನ್ ಧರ್ಮ:' ಎಂಬ ನಮ್ಮ ಪೂಜ್ಯಪಿತೃವರ್ಯರ ಉಪನ್ಯಾಸದ ಸಾರಾಂಶವನ್ನು ಅನುಭವಿಸೋಣ.**

ಕೂಜಂತಂ ರಾಮರಾಮೇತಿ ಮಧುರಂ ಮಧುರಾಕ್ಷರಂ | ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಂ ||
ಶ್ರೀಮನ್ನಿಗಮಾಂತಮಹಾದೇಶಿಕರು ಶ್ರೀರಾಮಚಂದ್ರನ ಗುಣಗಾನವನ್ನು ಮಾಡುತ್ತಾ ಶ್ರೀರಾಮಚಂದ್ರನಲ್ಲಿ ಮೂರು ಮುಖ್ಯವಾದ ಗುಣಗಳನ್ನು ಎತ್ತಿ ಸ್ತೋತ್ರಮಾಡಿದ್ದಾರೆ ತಮ್ಮ ದಶಾವತಾರ ಸ್ತೋತ್ರದಲ್ಲಿ. ಅದು ಹೀಗಿದೆ -

ಪಾರಾವಾರಪಯೋವಿಶೋಷಣಕಲಾ-ಪಾರೀಣಕಾಲಾನಲ-ಜ್ವಾಲಾಜಾಲವಿಹಾರಹಾರಿ-ವಿಶಿಖ-
ವ್ಯಾಪಾರಘೋರಕ್ರಮಃ
ಸರ್ವಾವಸ್ಥ-ಸಕೃತ್-ಪ್ರಪನ್ನ-ಜನತಾ-ಸಂರಕ್ಷಣೈಕವ್ರತೀ ಧರ್ಮೋ ವಿಗ್ರಹವಾನ್ ಅಧರ್ಮವಿರತಿಂ ಧನ್ವೀ ಸ ತನ್ವೀತ ನಃ || ಎಂಬುದಾಗಿ.

ಪಾರಾವಾರಪಯೋವಿಶೋಷಣಕಲಾ-ಪಾರೀಣಕಾಲಾನಲ-ಜ್ವಾಲಾಜಾಲವಿಹಾರಹಾರಿ-ವಿಶಿಖ-
ವ್ಯಾಪಾರಘೋರಕ್ರಮಃ - ಇದಿ ಶ್ರೀರಾಮಚಂದ್ರನಮೂರ್ತಿಯ ಮುಖ್ಯವಾದ ಗುಣ, ಅವನ ವೀರ್ಯ. ಅವನು ಮಹಾವೀರ. ಪಾರಾವಾರ ಎಂದರೆ ಸಮುದ್ರ. ಆ ಸಮುದ್ರದ ನೀರನ್ನೆಲ್ಲ ಬತ್ತಿಸತಕ್ಕ ಅಥವಾ ಶೋಷಿಸತಕ್ಕಂತಹ ಕಲೆಯಲ್ಲಿ ಪ್ರವೀಣತೆಯನ್ನು ಹೊಂದಿರತಕ್ಕಂತಹ 'ಕಾಲಾನಲಜ್ವಾಲಾಜಾಲ' ಪ್ರಳಯಕಾಲದ ಅಗ್ನಿಯ ಜ್ವಾಲೆಯ ಸಮೂಹಕ್ಕೆ ಸಮನಾದರೀತಿಯಲ್ಲಿ ಬಾಣಪ್ರಯೋಗವನ್ನು ಮಾಡತಕ್ಕಂತಹವನು ಎಂಬುದಾಗಿ ಶ್ರೀರಾಮಚಂದ್ರನನ್ನು ಸ್ತೋತ್ರಮಾಡುತ್ತಾರೆ. ಆ ಪ್ರಳಯಕಾಲದ ಬೆಂಕಿ, ಪ್ರಳಯಾಗ್ನಿ, ಅದರ ಆಟೋಪವನ್ನೂ ಕೂಡ ಮೀರಿಸತಕ್ಕಂತಹ ವ್ಯಾಪಾರವನ್ನು ಉಳ್ಳ ಶರವ್ಯಾಪಾರವನ್ನು ಮಾಡತಕ್ಕವನು. ಇದು ಅವನಲ್ಲಿ ಇರುವ ಒಂದು ಮುಖ್ಯವಾದ ಗುಣ. ಅವನ ಪರತ್ವವನ್ನು ತೋರಿಸತಕ್ಕಂತಹುದು ಇದು. ಹಾಗೆಯೇ ಅವನಲ್ಲಿ ಸೌಲಭ್ಯವೆಂಬುವ ಒಂದು ಮಹಾಗುಣವಿದೆ ಎಂಬುದನ್ನು ವರ್ಣನೆಮಾಡುತ್ತಾ ಸ್ತೋತ್ರಮಾಡುತ್ತಾರೆ, 'ಸರ್ವಾವಸ್ಥ-ಸಕೃತ್-ಪ್ರಪನ್ನ-ಜನತಾ-ಸಂರಕ್ಷಣೈಕವ್ರತೀ' ಎಂಬುದಾಗಿ. ಎಂದರೆ ಯಾವ ಅವಸ್ಥೆಯಲ್ಲಿರಲಿ, ಯಾರಾದರೂ ಆಗಲಿ, ಅವನಲ್ಲಿ ಒಂದು ಸಲ ಶರಣಾಗತಿಮಾಡಿದರೆ ಅವನನ್ನು ರಕ್ಷಿಸುವಂತಹ ದೃಢವಾದ ಒಂದು ವ್ರತವನ್ನು ಹೊಂದಿರುವವನು. ರಕ್ಷಣೈಕದೀಕ್ಷಿತನಾದವನು. ಪ್ರಪನ್ನಜನ ಸಂರಕ್ಷಕದೀಕ್ಷೆಯನ್ನು ಹೊಂದಿರುವವನು. ಇದು ಅವನ ಸೌಲಭ್ಯವನ್ನು ಹೇಳುತ್ತದೆ. ಅವನೇ ಹೇಳುತ್ತಾನೆ - ಯಾರಾದರೂ ಮಿತ್ರಭಾವದಿಂದ ನನ್ನಲ್ಲಿ ಬಂದರೂ

ಸಹ ನಾನು ಅವರನ್ನು ಬಿಡುವುದಿಲ್ಲ, ಅವರನ್ನು ಕಾಪಾಡುತ್ತೇನೆ ಎಂಬುದಾಗಿ. ಇನ್ನು ಮಿತ್ರನಾಗಿ ಹೋದರೆ ಅವನಲ್ಲಿ ಭಕ್ತಿಯಿಂದ ಶರಣಾಗತಿ ಮಾಡಿದರೆ ಅವನನ್ನು ಬಿಡುವ ಮಾತೇ ಇಲ್ಲ. ಇದು ಅವನ ವ್ರತ ಎಂದು ಹೇಳಿದ್ದರಿಂದ ಹಾಗೆ ಮಾಡದಿದ್ದರೆ ವ್ರತಭಂಗವಾದರೆ ಅದರಿಂದ ಅವನಿಗೆ ಅವದ್ಯವಾಗುತ್ತದೆ, ದೋಷವಾಗುತ್ತದೆ. ಆ ದೋಷವನ್ನು ಅವನು ಹೊಂದದಿರುವುದರಿಂದ ಆ ವ್ರತಕ್ಕೆ ಯಾವಾಗಲೂ ಭಂಗವನ್ನು ತಂದುಕೊಳ್ಳುವುದಿಲ್ಲ. ಮಾನವಕೋಟಿಗೆ ಅದೊಂದು ದೊಡ್ಡ ಆಶ್ವಾಸನೆ. 'ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ । ಅಭಯಂ ಸರ್ವಭೂತೇಭ್ಯೋ ದದಾಮ್ಯೇತತ್ ವ್ರತಂ ಮಮ ॥' ಎಂಬುದಾಗಿ ತನ್ನ ವ್ರತವನ್ನು ಸ್ವಾಮಿ ಹೇಳಿಕೊಂಡಿದ್ದಾನೆ. ಒಂದು ಸಾರಿ ಯಾರು ಬಂದು ನನ್ನಲ್ಲಿ ಶರಣಾಗತಿ ಮಾಡುತ್ತಾರೋ, ನಾನು ನಿನಗೆ ಸೇರಿದವನು ಎಂದು ಹೇಳುತ್ತಾರೋ, ಅವರು ಯಾವ ರೀತಿಯಲ್ಲೇ ಬಂದಿರಲಿ ಅವರ ಮನಸ್ಸಿನಲ್ಲ್ ಯಾವ ಭಾವವೇ ಇರಲಿ, ಅಂಥವರನ್ನು ನಾನು ಎಂದೂ ಬಿಡುವುದಿಲ್ಲ, ಇದು ನನ್ನ ವ್ರತ ಎಂಬುದಾಗಿ ಹೇಳಿದ್ದಾನೆ. ಇದು ಶ್ರೀರಾಮಚಂದ್ರನಲ್ಲಿರುವ ಎರಡನೇ ಮಹಾಗುಣ.

ಮತ್ತೊಂದು ಗುಣವನ್ನು ಅವರು ನಿರೂಪಣೆ ಮಾಡುತ್ತಾರೆ, 'ಧರ್ಮೋ ವಿಗ್ರಹವಾನ್' ಎಂದು. ಧರ್ಮವೇ ಒಂದು ರೂಪವನ್ನು ಹೊಂದಿ ಬಂದಂತಿದ್ದವನು. ಶ್ರೀರಾಮಚಂದ್ರನ ದಿವ್ಯಮೂರ್ತಿ ಧರ್ಮದ ಒಂದು ಸಾಕಾರವಾದ ರೂಪ. ವಿಗ್ರಹ ಎಂದು ಹೇಳಿದರೆ ಶರೀರ. ವಿಗ್ರಹವಾನ್ ಎಂದರೆ ಶರೀರವನ್ನು ಹೊಂದಿದವನು. ಧರ್ಮವನ್ನೇ ತನ್ನ ರೂಪವನ್ನಾಗಿ ಹೊಂದಿ ಬಂದ ಶ್ರೀರಾಮಚಂದ್ರ, ಪರಮಾತ್ಮ, ನಮ್ಮ ಅಧರ್ಮವನ್ನೆಲ್ಲ ಹೋಗಲಾಡಿಸಲಿ ಎಂಬುದಾಗಿ ಶ್ರೀಮನ್ನಿಗಮಾಂತ ಮಹಾದೇಶಿಕರವರು ಶ್ರೀರಾಮಚಂದ್ರನಲ್ಲಿ ಪ್ರಾರ್ಥನೆಯನ್ನು ಮಾಡಿದ್ದಾರೆ.

ಈ ಶ್ಲೋಕದ ತಾತ್ಪರ್ಯ - ಆ ಶ್ರೀರಾಮಚಂದ್ರನ ಮಹಾಗುಣಗಳಲ್ಲಿ ಒಂದು ಅವನ ಮಹಾವೀರ್ಯ, ತೇಜಸ್ಸು. ಎರಡನೆಯದು ಅವನು ಆಶ್ರಿತರ ಸಂರಕ್ಷಣೆಮಾಡತಕ್ಕಂತಹ ಅವನ ಆ ರಕ್ಷಕತ್ವ. ಮೂರನೆಯದಾಗಿ ಅವನ ಸ್ವರೂಪ ಎಂದು ಹೇಳಿದರೆ, ಧರ್ಮಸ್ವರೂಪ. ರಾಮ ಎಂದು ಹೇಳಿದರೆ ಧರ್ಮ, ಧರ್ಮ ಎಂದು ಹೇಳಿದರೆ ರಾಮ. 'ಕೃಷ್ಣಂ ಧರ್ಮಂ ಸನಾತನಂ', 'ರಾಮೋ ವಿಗ್ರಹವಾನ್ ಧರ್ಮ:' ಈ ಮಾತುಗಳಲ್ಲಿ ಆ ಪರಮಾತ್ಮನ ಧರ್ಮಸ್ವರೂಪವನ್ನು ಎತ್ತಿ ಹೇಳಿದ್ದಾರೆ. ಶ್ರೀರಾಮನನ್ನು 'ಧರ್ಮವೇ ಮೂರ್ತಿವೆತ್ತವನು' ಎಂದು ಎಲ್ಲರೂ ಸ್ತೋತ್ರಮಾಡಿದ್ದಾರೆ.

ಇನ್ನು ಆ ಶ್ರೀರಾಮಚಂದ್ರನ ಧರ್ಮಸ್ವರೂಪವನ್ನು ಕುರಿತು ನಾಲ್ಕಾರು ವಿಚಾರಗಳನ್ನು ಮಾಡೋಣ. ಧರ್ಮ ಎಂದು ಹೇಳಿದರೆ ಏನು, ಶ್ರೀರಾಮನು ಧರ್ಮಸ್ವರೂಪಿ ಎಂದರೆ ಏನರ್ಥ, ಧರ್ಮ ಎಂಬ ಶಬ್ದವನ್ನು ಹೇಗೆ ನಿರೂಪಣೆ ಮಾಡುವುದು, ಯಾವುದು ಧರ್ಮ ಮೂಂತಾಗಿ ವಿಚಾರಮಾಡಿದರೆ, ಧರ್ಮ ಎಂಬ ಶಬ್ದವನ್ನು ಅನೇಕ ಅರ್ಥಗಳಲ್ಲಿ ಬಳಸುವುದನ್ನು ನೋಡಬಹುದು.

ಈ ಧರ್ಮ ಎಂಬುದಕ್ಕೆ ಏನು ಮಹತ್ವವಿದೆ ಎನ್ನುವುದನ್ನು ಹೇಳುವಾಗ ಬೃಹದಾರಣ್ಯಕ ಉಪನಿಷತ್ತಿನ ಒಂದು ಸೂಕ್ತಿ ನಮ್ಮ ನೆನಪಿಗೆ ಬರುತ್ತದೆ. 'ಭಗವಂತನು ಈ ಲೋಕವನ್ನು ಸೃಷ್ಟಿಮಾಡಿದ. ಹಾಗೆ ಮಾಡುವಾಗ

ಧರ್ಮವನ್ನು ಸೃಷ್ಟಿಮಾಡುವವರೆಗೆ ಶ್ರೇಯಸ್ಸನ್ನು ಹೊಂದಲಿಲ್ಲವಂತೆ. ಧರ್ಮವನ್ನು ಸೃಷ್ಟಿಮಾಡಿದಮೇಲೆ ಅವನಿಗೆ ಶ್ರೀಯಸ್ಸುಂಟಾಯಿತು ಎಂಬುದಾಗಿ ಬೃಹದಾರಣ್ಯಕ ಶ್ರುತಿ ಹೇಳುತ್ತದೆ -

'ಸಃ ನೈವ ವ್ಯಭವತ್ ಶ್ರೇಯೋ ರೂಪಂ | ಅತ್ಯಸೃಜತ ಧರ್ಮಂ | ತದೇತತ್ ಕ್ಷತ್ರಸ್ಯ ಕ್ಷತ್ರಂ | ಯದ್ಧರ್ಮಃ | ತಸ್ಮಾತ್ ಧರ್ಮಾತ್ ಪರಂ ನಾಸ್ತಿ | ಅಥೋ ಅಬಲೀಯಾನ್ ಬಲೀಯಾಂಸಂ ಆಶಂಸತೇ ಧರ್ಮೇಣ | ಯಥಾ ರಾಜ್ಞೈವ ಏವಂ | ಯೋ ವೈ ಸ ಧರ್ಮಃ ಸತ್ಯಂ ವೈ ತತ್ | ತಸ್ಮಾತ್ ಸತ್ಯಂ ವದಂತಂ ಆಹುಃ ಧರ್ಮಃ ವದತೀತಿ | ಧರ್ಮಂ ವಾ ವದಂತಂ ಸತ್ಯಂ ವದತೀತಿ |'

ಎಂಬುದಾಗಿ. ಈ ಬೃಹದಾರಣ್ಯಕ ಶ್ರುತಿ ಭಗವಂತನ ಸ್ರಷ್ಟೃತ್ವವನ್ನು ಹೇಳುವಾಗ ಲೋಕವನ್ನೆಲ ಸೃಷ್ಟಿಸಿದ ಭಗವಂತ. ಆದರೆ ಅದರಲ್ಲಿ ಅವನಿಗೆ ಯಾವ ಶ್ರೇಯಸ್ಸೂ ಕಾಣಲಿಲ್ಲ. ಧರ್ಮವನ್ನು ಸೃಷ್ಟಿಮಾಡುವವರೆಗೆ ಯಾವ ಶ್ರೇಯಸ್ಸೂ ಉಂಟಾಗಲಿಲ್ಲ ಎಂದು ಹೇಳುತ್ತದೆ. ಅವನು ಅತ್ಯುತ್ತಮವಾದ ರೂಪದಲ್ಲಿ ಧರ್ಮವನ್ನು ಸೃಷ್ಟಿಮಾಡಿದ. ಆ ಧರ್ಮ ಎಂಬತಕ್ಕಂತಹದು 'ಕ್ಷತ್ರಸ್ಯ ಕ್ಷತ್ರಂ' - ಕ್ಷತ್ರಿಯನನ್ನೂ ಕೂಡ ತನ್ನ ವಶದಲ್ಲಿ ಇಡತಕ್ಕಂತಹುದು. ಆದ್ದರಿಂದ ಅದಕ್ಕಿಂತ ಹೆಚ್ಚಾದುದು ಯಾವುದೂ ಇಲ್ಲ. ಲೋಕದಲ್ಲಿ ಬಹಳ ಹೆಚ್ಚಾದದ್ದು ಎಂದರೆ ಕ್ಷತ್ರ - ಶಕ್ತಿ, ಪರಾಕ್ರಮ, ತೇಜಸ್ಸು, ಓಜಸ್ಸು ಎಲ್ಲ ಇರತಕ್ಕಂತಹದು. ಅವೆಲ್ಲವನ್ನೂ ಮೀರಿದುದು ಧರ್ಮ. ಅದರಿಂದಲೇನೇ ಧರ್ಮಕ್ಕಿಂತ ಹೆಚ್ಚಾದದ್ದು ಮತ್ತೇನಿಲ್ಲ. ಇಲ್ಲರುವ ಬಹಳ ಬಲವಿಲ್ಲದವನು, ದುರ್ಬಲನಾದವನು ಧರ್ಮದ ಬಲದಿಂದ ತಾನು ಬಹಳ ಬಲಿಷ್ಠ ಎಂದು ಹೇಳಿಕೊಳ್ಳುತ್ತಾನೆ ಎಂಬುದಾಗಿ ಶ್ರುತಿ ಹೇಳುತ್ತದೆ, 'ಅಥೋ ಅಬಲೀಯಾನ್ ಬಲೀಯಾಂಸಂ ಆಶಂಸತೇ ಧರ್ಮೇಣ' ಎಂದು. ದುರ್ಬಲ ಎಂದರೆ ದೇಹದಲ್ಲೇ ಆಗಲಿ, ಮಾನಸಿಕವಾಗಿಯೇ ಆಗಲಿ ಬೇರೆ ಯಾವ ವ್ಯವಹಾರದಲ್ಲಿಯೇ ಆಗಲಿ, ಧರ್ಮದ ಬಲವನ್ನು ಹೊಂದಿದ್ದರೆ ಅವನು ಬಹಳ ಬಲಿಷ್ಠನಾದವನು ಎಂಬುದಾಗಿ.

ಈ ಧರ್ಮ ಎಂದರೇನು ? ಒಂದು ಮಾತಿನಲ್ಲಿ ಧರ್ಮ ಎಂಬುವುದಕ್ಕೆ ವ್ಯಾಖ್ಯಾನಮಾಡಬೇಕಾದರೆ 'ಯೋ ವೈ ಸ ಧರ್ಮಃ ಸತ್ಯಂ ವೈ ತತ್'. ಧರ್ಮವೇ ಸತ್ಯವು, ಸತ್ಯವೆಂಬುದೇ ಧರ್ಮವು. ಧರ್ಮ ಎಂಬುದನ್ನು ಅನೇಕರು ಅನೇಕರೀತಿಯಲ್ಲಿ ಬಳಸುತ್ತಾರೆ. ಮನುಷ್ಯಧರ್ಮ ಎನ್ನುತ್ತೇವೆ, ಕ್ಷತ್ರಿಯ ಧರ್ಮ, ಬ್ರಾಹ್ಮಣಧರ್ಮ, ವೈದ್ಯನ ಧರ್ಮ, ಉಪಾಧ್ಯಾಯನ ಧರ್ಮ ಎಂದೆಲ್ಲ ಹೇಳುತ್ತೇವೆ. ಧರ್ಮ ಎನ್ನುವುದು ವಿಶೇಷಣ ಎಂದೂ ಹೇಳುತ್ತೇವೆ. ಇದಕ್ಕೆ ಏನು ವ್ಯಾಖ್ಯೆ ಎಂದರೆ ಶ್ರುತಿ ಹೇಳುತ್ತದೆ 'ಸತ್ಯಂ ವೈ ತತ್', ಅದು ಸತ್ಯವೇ ಎಂದು. ಆದ್ದರಿಂದ ಯಾರು ಸತ್ಯವನ್ನು ಹೇಳುತ್ತಾರೆಯೋ ಅವರನ್ನು ಏನು ಹೇಳುತ್ತಾರೆ ಎಂದರೆ, 'ಧರ್ಮಂ ವದತಿ', ಧರ್ಮವನ್ನು ಹೇಳುತ್ತಾನೆ ಎಂದು ಶ್ರುತಿ ಹೇಳುತ್ತದೆ. ಯಾರು ಧರ್ಮವನ್ನು ಹೇಳುತ್ತಾರೆಯೋ ಅವರು 'ಸತ್ಯಂ ವದತಿ', ಸತ್ಯವನ್ನು ಹೇಳುತ್ತಾರೆಂದು ಶ್ರುತಿ ಹೇಳುತ್ತದೆ. ಆದ್ದರಿಂದ ಸತ್ಯವೇ ಧರ್ಮ, ಧರ್ಮವೇ ಸತ್ಯವು. ಇಂತಹ ಒಂದು ಶ್ರೇಷ್ಠವಾದ ಧರ್ಮಸ್ವರೂಪವನ್ನ್ ಬೃಹದಾರಣ್ಯಕ ಶ್ರುತಿ ನಿರೂಪಣೆ ಮಾಡುತ್ತದೆ. ಈ ಒಂದು ಸತ್ಯಸ್ವರೂಪದ ನಿರೂಪಣೆಗಾಗಿಯೇ ಶ್ರೀರಾಮಾವತಾರವಾದದ್ದು.

> ಯಃ ಸತ್ಯೇ ಗುರುಮಾಸಯನ್ ಉಪನತಾಂ ತತ್ಯಾಜ ರಾಜ್ಯಶ್ರಿಯಂ
> ಯಃ ಸಂತೋಷಯಿತುಂ ಪ್ರಜಾಃ ಪರಿಜಹಾರಾಪನ್ನಸತ್ವಾಂ ಪ್ರಿಯಾಂ |
> ಯಸ್ಯೋಪಾಶ್ರಿತ ಕೀಚರಾಕ್ಷಸಪರಿತ್ರಾಣಪ್ರತಿಷ್ಠಾ ಗುರೋಃ
> ಧರ್ಮೇ ಸೂಕ್ಷ್ಮಗತೌ ಜಯತು ಅವನಿಜಾಜಾನೇಃ ಅಭೇದ್ಯಾಸ್ಥಿತಿಃ ||

ತಾನಗಿ ಅವನಿಗೆ ಬಂದು ಸೇರಿದಂಥ ಆ ರಾಜ್ಯವನ್ನು ಶ್ರೀರಾಮಚಂದ್ರನು ಬಿಟ್ಟುಬಿಟ್ಟನು. ಏಕೆಂದು ಹೇಳಿದರೆ ತನ್ನ ತಂದೆಯ ಸತ್ಯವಚನವನ್ನು ಸ್ಥಿರಪಡಿಸುವುದಕ್ಕಾಗಿ. ಆ ಸತ್ಯದಲ್ಲಿ ತನ್ನ ತಂದೆಯನ್ನು ನಿಲ್ಲಿಸಲು 'ಯಃ ಸತ್ಯೇ ಗುರುಂ ಆಸಯನ್', ಸತ್ಯಚ್ಯುತನಾಗದಿರಲಿ ತಂದೆ ಎಂಬ ಭಾವದಿಂದ ರಾಜ್ಯವನ್ನು ಬಿಟ್ಟುಬಿಟ್ಟನು. ಈ ಸತ್ಯಕ್ಕೆ, ಧರ್ಮ ಎನ್ನುವುದಕ್ಕೆ ಅಷ್ಟು ಮಹತ್ವವನ್ನು ಇಲ್ಲಿ ಕೊಟ್ಟಿದ್ದಾರೆ. ಶ್ರೀಮದ್ರಾಮಾಯಣದಲ್ಲಿ ಶ್ರೀರಾಮಚಂದ್ರನ ವೈಭವವನ್ನು ನಿರೂಪಣೆಮಾಡುವಾಗ ವಾಲ್ಮೀಕಿಮುನಿಗಳು ಹೆಜ್ಜೆಹೆಜ್ಜೆಗೂ ಶ್ರೀರಾಮನ ಧರ್ಮಸ್ವರೂಪವನ್ನು ಬಹಳ ಸ್ಫುಟವಾಗಿ ನಿಖರವಾಗಿ ನಮ್ಮ ಮನಸ್ಸಿಗೆ ಚೆನ್ನಾಗಿ ಮನದಟ್ಟುವಂತೆ ನಿರೂಪಣೆಮಾಡಿ ಹೇಳಿದ್ದಾರೆ. ಧರ್ಮ ಹೇಗಿದೆ ಏಂದರೆ ಅದನ್ನು ನಾವು ತೋರಿಸಲು ಆಗುವುದಿಲ್ಲ. ನಡತೆಯಿಂದ, ಒಬ್ಬರ ನಡೆಯಿಂದ ಧರ್ಮ ಎಂದರೆ ಏನು ಎನ್ನುವುದನ್ನು ಹೇಳಬಹುದು. ಧರ್ಮ ಎನ್ನುವುದಕ್ಕೆ ಯಾವ ರೀತಿಯಿರುವುದು ರೂಪ ಎಂಬುದಾಗಿ ಕೇಳಿದರೆ ಅದನ್ನು ನಾವು ಒಂದು ರೂಪವನ್ನು ಹೇಳಿ ವರ್ಣನೆ ಮಾಡಲಾಗುವುದಿಲ್ಲ. ಉದಾಹರಣೆಗೆ ಸಿಹಿ ಎಂಬುದು ಹೇಗಿರುತ್ತೆ ಎಂದು ಕೇಳಿದರೆ ಅದಕ್ಕೆ ಎಷ್ಟು ವ್ಯಾಖ್ಯಾನವನ್ನು ಬರೆದರೂ ಅರ್ಥವಾಗುವುದಿಲ್ಲ. ಆದರೆ ಒಂದು ಚಿಟಿಕೆ ಸಕ್ಕರೆ ಬಾಯಿಗೆ ಹಾಕಿಕೊಂಡರೆ ಹೇಗಿರುವುದೋ ಹಾಗೆ ಎಂದರೆ ಅದರ ಅನುಭವದಿಂದ ಅದನ್ನು ತಿಳಿಯಬೇಕು. ಆ ಧರ್ಮ ಎನ್ನುವುದಕ್ಕೂ ಹಾಗೆಯೇ ಎಂದು ಹಿರಿಯರು ಹೇಳುತ್ತಾರೆ -

'ಯಂ ಆರ್ಯಾಃ ಕ್ರಿಯಮಾಣಂ ಹಿ ಶಂಸಂತಿ ಆಗಮವೇದಿನಃ ಸಃ ಧರ್ಮಃ । ಯಂ ವಿಗರ್ಹತಿ ತಂ ಅಧರ್ಮಂ ಪ್ರಚಕ್ಷತೇ । '

ಸಜ್ಜನರಾದವರು, ಶಾಸ್ತ್ರಪರಿಜ್ಞಾನವನ್ನು ಹೊಂದಿರತಕ್ಕಂತಹವರು ಯಾವ ಒಂದು ಕೆಲಸವನ್ನು ಪ್ರಶಂಸೆಮಾಡುತ್ತಾರೆಯೋ ಅನುಮೋದನೆ ಮಾಡುತ್ತಾರೆಯೋ ಮೆಚ್ಚಿಕೊಳ್ಳುತ್ತಾರೆಯೋ ಅದು ಧರ್ಮ. ಇದನ್ನು ಹೀಗೆ ನಿರೂಪಣೆಮಾಡಿದ್ದಾರೆ. ಹತ್ತುಜನ ಸಜ್ಜನರಾದವರು, ಶಾಸ್ತ್ರಪರಿನಿಷ್ಠಿತರಾದವರು, ಧರ್ಮವನ್ನರಿತವರು ಧರ್ಮಜ್ಞರಾದವರು ಯಾವುದನ್ನು ಮೆಚ್ಚಿಕೊಳ್ಳುತ್ತಾರೆಯೋ ಅದೇ ಧರ್ಮ. ಅವರು ಯಾವುದನ್ನು ನಿಂದಿಸುತ್ತಾರೆಯೋ ಅದು ಅಧರ್ಮ. ಧರ್ಮ ಎಂಬುದಕ್ಕೆ ಹೀಗೂ ಒಂದು ವ್ಯಾಖ್ಯಾನವನ್ನು ಮಾಡಬಹುದು.

ಇನ್ನು, 'ಧರ್ಮಃ ಶ್ರೇಯಃ ಸಮುದ್ದಿಷ್ಟಃ । ಶ್ರೇಯಃ ಅಭ್ಯುದಯಸಾಧನಂ । ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ ।'. ಯಾವುದನ್ನು ಮಾಡುವುದರಿಂದ ಲೋಕಕ್ಕೆ ಒಳ್ಳೆಯದಾಗುವುದೋ ಅದು ಧರ್ಮ. 'ಅಭ್ಯುದಯಸಾಧನಂ ಧರ್ಮಃ'. ಅದು 'ಜಗತಃ ಪ್ರತಿಷ್ಠಾ' ಈ ಲೊಕಕ್ಕೆಲ್ಲಾ ಆಧಾರವಾಗಿರುವಂತಹದು. ಯಾವ ಒಳ್ಳೆಯ ಕೆಲಸ ಎಂದರೆ, ಯಜ್ಞ, ಅಧ್ಯಯನ, ದಾನ, ತಪಸ್ಸು, ಸತ್ಯ, ಧೃತಿ, ಕ್ಷಮಾ, ಲೋಭವಿಲ್ಲದಿರುವುದು ಇವುಗಳನ್ನು ಧರ್ಮದ ಎಂಟು ರೂಪ ಎಂಬುದಾಗಿ ಹೇಳುತ್ತಾರೆ. ಈ ಗುಣಗಳ ನಿರೂಪಣೆಯನ್ನು ಏಕೆ ಇಲ್ಲಿ ನೆನಪುಮಾಡಿಕೊಳ್ಳಬೇಕು ಎಂದರೆ ಶ್ರೀರಾಮಚಂದ್ರನ ಆ ದಿವ್ಯವಾದ ಚರಿತ್ರೆಯಲ್ಲಿ ಈ ಎಲ್ಲ ಗುಣಗಳ ಅನುಶೀಲನ, ಈ ಗುಣಗಳ ನಿರೂಪಣೆ ಎಷ್ಟು ಚೆನ್ನಾಗಿ ನಮಗೆ ಕಂಡುಬರುತ್ತದೆ ಎಂಬುವುದನ್ನು ನಾವು ಕಾಣಬಹುದು. ಅದರಿಂದ ಅವನು ಹೇಗೆ ಧರ್ಮದ ಮೂರ್ತಸ್ವರೂಪನಾಗಿದ್ದ ಎಂಬುವುದನ್ನು ಸಹ ತಿಳಿಯಲು ಸಾಧ್ಯವಾಗುತ್ತದೆ. ಒಂದು ಕಡೆ ಮನು ಧರ್ಮದ ಸ್ವರೂಪವನ್ನು ಹೇಳುವಾಗ ಧರ್ಮದ ಲಕ್ಷಣವೆಂದರೆ ಈ ಹತ್ತು ವಿಷಯಗಳು ಎಂದು ಹೇಳಿದರು -

ಧೃತಿಃ - ಧೈರ್ಯ, ಕಷ್ಟದಲ್ಲಿ ಕುಂದದೇ ಇರುವ ಸಾಮರ್ಥ್ಯಹ್ಂದಿರುವಿಕೆ. ಕಷ್ಟ ಎಂಬುದು ಮನುಷ್ಯನಿಗೆ ಬರುವುದೇ. ಹಾಗೆ ಬಂದಾಗ ಮನಸ್ಸುಕುಂದದೇ ಇರುವುದೇ ಧೃತಿಃ, ಮನೋಧೈರ್ಯ, ಮನೋಬಲ.

ಕ್ಷಮಾ - ಕ್ಷಮಿಸುವಂತಹದ್ದು. ಯಾರಾದರೂ ಒಂದು ಅಪರಾಧವನ್ನು ಮಾಡಿದ್ದರೆ ಅದನ್ನು ಉದಾರಮನಸ್ಸಿನಿಂದ ಕ್ಷಮಿಸುವುದು ದೊಡ್ಡಗುಣ.

ದಮಃ - ಅಂತರಿಂದ್ರಿಯನಿಗ್ರಹ

ಅಸ್ತೇಯಂ - ಮತ್ತೊಬ್ಬರ ಒಡವೆಗೆ ಆಸೆ ಪಡದಿರುವುದು, ಮತ್ತೊಬ್ಬರ ಒಡವೆಯನ್ನು ಅಪಹರಿಸದಿರುವುದು.

ಶೌಚಂ - ಪರಿಶುದ್ಧತೆ - ವಾಕ್ಕಿನಲ್ಲಿ, ಮನಸ್ಸಿನಲ್ಲಿ, ಕಾಯದಲ್ಲಿ. ಹಿರಿಯರು ಹೇಳುತ್ತಾರೆ 'ಅರ್ಥಶೌಚ', ಹಣದಲ್ಲಿ ಪರಿಶುದ್ಧತೆ ಅತ್ಯಂತ ಶ್ರೇಷ್ಠವಾದದ್ದು ಎಂದು. ಹಣವನ್ನು ತೆಗೆದುಕೊಳ್ಳುವಾಗ ಶುದ್ಧವಾದ ಪರಿಗ್ರಹಮಾಡತಕ್ಕಂತಹುದು ಅರ್ಥಶೌಚ.

ಇಂದ್ರಿಯನಿಗ್ರಹಃ - ಬಹಿರಿಂದ್ರಿಯನಿಗ್ರಹ. ಇಂದ್ರಿಯಗಳನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು.

ವಿದ್ಯಾ, ಧೀಃ - ಬುದ್ಧಿಯನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವುದು.

ಸತ್ಯಂ - ಸತ್ಯವಚನ

ಅಕ್ರೋಧಃ - ಕೋಪಗೊಳ್ಳದೇ ಇರುವುದು. ಕೋಪವು ಅನರ್ಥಕ್ಕೆ ಸಾಧನ ಎಂದು ಹೇಳುತ್ತಾರೆ. ಅದನ್ನು ನಿಯಮದಲ್ಲಿಡಬೇಕು.

ಇವುಗಳನ್ನು ಮನು 'ದಶಕಂ ಧರ್ಮಲಕ್ಷಣಂ' ಎಂದು ಹೇಳಿದರು. ಈ ಗುಣಗಳು ಏನು ಎಂದು ತಿಳಿಯಬೇಕಾದರೆ ಶ್ರೀರಾಮಚಂದ್ರನ ದಿವ್ಯಚರಿತೆಯ ಅನುಸಂಧಾನದಿಂದ ಸಾಧ್ಯ. ಶ್ರೀರಾಮನು ಈ ಎಲ್ಲ ಗುಣಗಳನ್ನು ತನ್ನ ನಡತೆಯಿಂದ ತೋರಿದ್ದಾನೆ. ಒಂದುಕಡೆ ಕೂರತ್ತಾಳ್ವಾನ್ ಅವರು ಹೇಳುತ್ತಾರೆ - ಈ ಲೋಕದ ಜನ 'ಅಚಿಕಿತ್ಸ್ಯಾನ್' ಎಂದು. ಚಿಕಿತ್ಸೆ ಮಾಡಲು ಆಗುವುದಿಲ್ಲ ಎಂದು. ಆದ್ದರಿಂದ ಹೇಗೆ ಇವರಿಗೆ ಒಳ್ಳೆಯದಾರಿ ತೋರುವುದು ಎಂದು ಆ ಭಗವಂತನೇ ಇಳಿದು ಬಂದನಂತೆ. ತಾನೇ ಇಲ್ಲಿ ಅವತಾರ ಮಾಡಿ, ತಾನು ಯಾವರೀತಿ ನಡೆಯಬೇಕೆಂದು ಹೇಳಿದನೋ ಆ ರೀತಿ ತಾನೇ ನಡೆದು ತೋರಿಸಿದ್ದಾನೆ. ನುಡಿದು ತೋರಿಸಿದರೆ ಸಾಲದೆಂದು ತಾನು ನಡೆದು ತೋರಿಸಿದ ಆ ಭಗವಂತ ಶ್ರೀರಾಮನಾಗಿ. ಮನುಷ್ಯನಾದವನು ಇವೆಲ್ಲವನ್ನೂ ಮಾಡಲು ಸಾಧ್ಯವೇ, ನಮ್ಮಿಂದ ಸಾಧ್ಯವಿಲ್ಲ, ಯಾರಾದರೂ ದೈವಾಂಶಸಂಭೂತರು ದೇವತೆಗಳು ಮಾತ್ರ ಮಾಡಬಹುವು ಎಂಬ ಭಾವನೆ ನಮ್ಮ ಮನಸ್ಸಿನಲ್ಲಿ ಬರಬಹುದು. ಆದ್ದರಿಂದ ಹಾಗಾಗದಿರಲಿ ಎಂದು ಶ್ರೀರಾಮ ತಾನೇ ಮನುಷ್ಯರೂಪದಲ್ಲಿ ಅವತಾರಮಾಡಿ 'ಆತ್ಮಾನಂ ಮಾನುಷಂ ಮನ್ಯೇ' ಎಂದು ಹೇಳಿಕೊಂಡು ಮನುಷ್ಯನಾದವನೂ ಸಹ ಈ ಸದ್ಗುಣಗಳನ್ನು ಹೊಂದಿ ಧರ್ಮವನ್ನು ಆಚರಣೆಮಾಡಿ ಲೋಕದಲ್ಲಿ ಕೀರ್ತಿಯನ್ನು ಹೊಂದಲು ಸಾಧ್ಯ ಎಂದು ಪ್ರಮಾಣಿಸಿಕೊಟ್ಟ. ಇದು ಶ್ರೀರಾಮಚಂದ್ರನ ಹಿರಿಯತನ. ಅದನ್ನೇ ಭಕ್ತರು ಸ್ತೋತ್ರಮಾಡುವಾಗ 'ರಾಮೋ ವಿಗ್ರಹವಾನ್ ಧರ್ಮ:', ಶ್ರೀರಾಮನು ಧರ್ಮದ ಸಾಕಾರರೂಪ ಎಂಬುದಾಗಿ ಅನುಭವಿಸಿದ್ದಾರೆ.

ಶ್ರೀರಾಮನು ಹೇಗೆ ಎಲ್ಲ ಧರ್ಮಗಳ ಸ್ವರೂಪವನ್ನು ಹೊಂದಿದ್ದ ಎಂಬುದನ್ನು ವಾಲ್ಮೀಕಿಗಳು ಎರಡು ಸಂದರ್ಭದಲ್ಲಿ ಬಹಳ ವ್ಯಾಪಕವಾಗಿ ಹಾಗೂ ನಿಷ್ಕೃಷ್ಟವಾಗಿ ನಿರೂಪಣೆ ಮಾಡಿದ್ದಾರೆ.

ಅದರಲ್ಲಿ ಮೊಟ್ಟಮೊದಲು ನಾರದರು ಶ್ರೀರಾಮನ ಸ್ವರೂಪವನ್ನು ವಾಲ್ಮೀಕಿಗಳಿಗೆ ಉಪದೇಶಿಸುವಾಗ ಅವರು ಹೇಳುವಂತಹ ಮಾತುಗಳು ಬಹಳ ಆಶ್ಚರ್ಯಕರವಾಗಿವೆ. ಶ್ರೀರಾಮನ ಆ ಧರ್ಮಸ್ವರೂಪವನ್ನು ಪ್ರಕಾಶಪಡಿಸುತ್ತವೆ. ಅವರು ಹೇಳುವ ಗುಣಗಳಲ್ಲಿ ಮೊದಲಗುಣ ಧರ್ಮವನ್ನು ಕುರಿತದ್ದು. 'ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್' ಎಂದು ವಾಲ್ಮೀಕಿಗಳು ಪ್ರಶ್ನೆಯನ್ನು ಮಾಡುತ್ತಾರೆ, ಅದಕ್ಕೆ ನಾರದರು ಉತ್ತರವನ್ನು ಕೊಡುವಾಗ ಇಂತಹ ಗುಣಗಳನ್ನು ಹೊಂದಿರುವುದು ಬಹಳ ವಿರಳ. ಆದರೂ 'ತೈರ್ಯುಕ್ತ: ಶ್ರೂಯತಾಂ ನರ:' - ಆ ಗುಣಗಳನ್ನು ಹೊಂದಿರುವ ಒಬ್ಬ ಮಹಾನುಭಾವನಿದ್ದಾನೆ. ಅವನ ವಿಷಯ ಹೇಳುತ್ತೇನೆ ಕೇಳು ಎಂದು, 'ಧರ್ಮಜ್ಞ:' - ಇದು ಮೊದಲನೆಯ ಗುಣ.

'ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ ಯಶಸ್ವೀ ಜ್ಞಾನಸಂಪನ್ನಃ ಶುಚಿಃ ವಶ್ಯಃ ಸಮಾಧಿಮಾನ್ |
ರಕ್ಷಿತಾ ಸ್ವಸ್ಯಧರ್ಮಸ್ಯ ಸ್ವಜನಸ್ಯಚ ರಕ್ಷಿತಾ | ಸರ್ವಶಾಸ್ತ್ರಾರ್ಥತತ್ತ್ವಜ್ಞಃ ಸ್ಮೃತಿಮಾನ್ ಪ್ರತಿಭಾನಮಾನ್ |
ಸರ್ವಲೋಕಪ್ರಿಯಃ ಸಾಧುಃ ಅದೀನಾತ್ಮಾ ವಿಚಕ್ಷಣಃ | ಸರ್ವದಾಭಿಜತಃ ಸದ್ಭಿಃ ಸಮುದ್ರ ಇವ ಸಿಂಧುಭಿಃ ||
ಆರ್ಯಃ ಸರ್ವಸಮಶ್ಚೈವ ಸದೈವ ಪ್ರಿಯದರ್ಶನಃ | ಸ ಚ ಸರ್ವಗುಣೋಪೇತಃ ಕೌಸಲ್ಯಾನಂದವರ್ಧನಃ ||'

ಇಲ್ಲಿ ನಾರದರು ಶ್ರೀರಾಮಚಂದ್ರಮೂರ್ತಿ ಎಂಥಾ ದಿವ್ಯಗುಣಗಳನ್ನು ಹೊಂದಿದ್ದನೆಂಬುದನ್ನು ನಿರೂಪಣೆಮಾಡುತ್ತಾ ಈ ಎಲ್ಲ ಗುಣಗಳ ಸ್ವರೂಪವನ್ನು ಹೊಂದಿರುವ ಸ್ವಾಮಿ ಧರ್ಮದ ರೂಪವೇ ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ನಾರದರು ಮಾತ್ರವಲ್ಲ, ಅಯೋಧ್ಯಾನಿವಾಸಿಗಳೆಲ್ಲರೂ ಈ ಗುಣಗಳನ್ನು ಕಂಡಿದ್ದರು. ದಶರಥಮಹಾರಾಜನು ಶ್ರೀರಾಮಚಂದ್ರನಿಗೆ ಪಟ್ಟಾಭಿಷೇಕಮಾಡಬೇಕೆಂದು ಯೋಚಿಸುತ್ತಿದ್ದಾಗ ಆ ಪಟ್ಟಣದ ಜನರು ಶ್ರೀರಾಮನನ್ನು ಯುವರಾಜ್ಯಪಟ್ಟದಲ್ಲಿ ನೀವು ನೆಲೆನಿಲ್ಲಿಸಬೇಕು ಎಂಬುದಾಗಿ ಹೇಳುತ್ತಾರೆ. ಆಗ ಶ್ರೀರಾಮನ ಗುಣಗಳನ್ನು ನಿರೂಪಿಸುತ್ತಾ ಅಯೋಧ್ಯಾನಿವಾಸಿಗಳು ಹೇಳುವ ಮಾತುಃ 'ರಾಮಃ ಸತ್ಪುರುಷಃ ಲೋಕೇ ಸತ್ಯಧರ್ಮಪರಾಯಣಃ |' ಲೋಕದಲ್ಲಿ ಶ್ರೀರಾಮನು ಸತ್ಪುರುಷನಾಗಿದ್ದಾನೆ. ಸತ್ಯ, ಧರ್ಮ ಇವುಗಳನ್ನೇ ಬಹಳ ಶ್ರೇಷ್ಠವಾದದ್ದೆಂದು ಎಣಿಸಿಕೊಂಡು ನಡೆಸುತ್ತಿದ್ದಾನೆ. 'ಸಾಕ್ಷಾತ್ ರಾಮಾತ್ ವಿನಿರ್ವೃತ್ತಃ ಧರ್ಮಶ್ಚಾಪಿ ಶ್ರಿಯಾಸಹ' - ಧರ್ಮ ಎಂಬುದು ಶ್ರೀರಾಮನಿಂದ ಬಂದದ್ದು. ಶ್ರೀರಾಮನ ಸ್ವರೂಪವನ್ನು ಇನ್ನೇನು ಹೇಳಬೇಕು. ಧರ್ಮವೂ ಶ್ರೀರಾಮನಿಂದಲೇ ಉತ್ಪನ್ನವಾದದ್ದು.

'ಧರ್ಮಜ್ಞಃ ಸತ್ಯಸಂಧಶ್ಚ ಶೀಲವಾನ್ ಅನಸೂಯಕಃ |' ಅಸೂಯೆ ಎಂಬುವುದು ಇಲ್ಲ, ಒಳ್ಳೆಯ ಶೀಲವನ್ನು ಹೊಂದಿರುವವನು.

'ಕ್ಷಾಂತಃ ಸಾಂತ್ವಯಿತಾ ಕೃತಜ್ಞಃ ಶ್ಲಕ್ಷ್ಣಃ ವಿಜಿತೇಂದ್ರಿಯಃ | ಮೃದುಶ್ಚ ಸ್ಥಿರಚಿತ್ತಶ್ಚ ಸದಾಭವ್ಯಃ ಅನಸೂಯಕಃ | ಪ್ರಿಯವಾದೀ ಚ ಭೂತಾನಾಂ ಸತ್ಯವಾದೀ ಚ ರಾಘವಃ' - ಕ್ಷಮೆ ಹೊಂದಿರುವವನು, ಎಲ್ಲರನ್ನೂ ಸಮಾಧಾನಮಾಡುವವನು, ಸತ್ಯವಾದಿಯಾದವನು. ಬೃಹದಾರಣ್ಯಕ ಶ್ರುತಿಯು ಹೇಳಿದ ಮಾತು ಇದೇ. ಧರ್ಮವೇ ಸತ್ಯ. ಸತ್ಯವೇ ಶ್ರೀರಾಮನ ಮೂರ್ತಿ. ಧರ್ಮವೇ ಶ್ರೀರಾಮನಮೂರ್ತಿ. ಆದ್ದರಿಂದಲೇ 'ರಾಮೋ ವಿಗ್ರಹವಾನ್ ಧರ್ಮಃ'.

ಶ್ರೀರಾಮ ಸತ್ಯದಿಂದ ಲೋಕಗಳನ್ನೆಲ್ಲ ಜಯಿಸಿದ. ದಾನದಿಂದ ದೀನರನ್ನೆಲ್ಲ ಜಯಿಸಿದ. ಶುಶ್ರೂಷೆಯಿಂದ ಗುರುಗಳನ್ನೆಲ್ಲ ಜಯಿಸಿದ. ಧನುಸ್ಸಿನಿಂದ ಶತ್ರುಗಳನ್ನೆಲ್ಲ ಜಯಿಸಿದ. ಆ ಸತ್ಯವಾಕ್ಯ ಎಂಬುವುದೇ ಎಂತಹ ಅಸಂಭವವಾದದ್ದನ್ನೂ ಕೂಡ ಸಾಧಿಸಬಲ್ಲುದು. ಯಾವ ರೀತಿಯಲ್ಲಿ ಜಟಾಯುವಿಗೆ ಆ ಸದ್ಗತಿಯನ್ನು ಶ್ರೀರಾಮನು ಕೊಡಲು ಸಾಧ್ಯವಾಯಿತು ಎಂದು ಕೇಳಿದರೆ ನಮ್ಮ ಪೂರ್ವಾಚಾರ್ಯರುಗಳು ನಿರೂಪಣೆಮಾಡುತ್ತಾರೆ - 'ಸತ್ಯೇನ ಲೋಕಾನ್ ಜಯತಿ,' ಸತ್ಯವಾಕ್ಯದಿಂದಲೇ ಆ ಲೋಕಗಳನ್ನೆಲ್ಲ ಅವನು ಜಯಿಸಿದ ಎಂಬುದಾಗಿ. ಅಂತಹ ದೃಢವ್ರತನಾಗಿದ್ದರಿಂದಲೇ ಅವನ ಮಾತೆಲ್ಲವೂ ಸಫಲವಾಯಿತು ಎಂದು. ಶ್ರೀಮದ್ರಾಮಾಯಣದಲ್ಲಿ ಶ್ರೀರಾಮನ ಆ ಧರ್ಮಸ್ವರೂಪವನ್ನು ಎಷ್ಟು ಆಶ್ಚರ್ಯವಾಗಿ ಅವನ ಭಕ್ತರಾದವರು ಅವನನ್ನು ಸೇವಿಸುತ್ತಿದ್ದವರು ಮಾತ್ರವಲ್ಲದೇ ಅವನ ಶತ್ರುಗಳಾದವರೂ ಕೂಡ ಹೇಳಿದ್ದನ್ನು ನೋಡಬಹುದು. ಈ 'ರಾಮೋ ವಿಗ್ರಹವಾನ್ ಧರ್ಮಃ' ಎಂಬ ವಾಕ್ಯವನ್ನು ಮೊದಲು ಹೇಳಿದವನು ಯಾರೆಂದರೆ ಮಾರೀಚ. ರಾವಣನು ಸೀತಾಪಹರಣ ಮಾಡಬೇಕೆಂಬ ಯೋಚನೆಯಿಂದ ಮಾರೀಚನನ್ನು ಮಾಯಾಮೃಗವಾಗಬೇಕೆಂದು ತನ್ನ ಹಂಚಿಕೆಯನ್ನು ಅವನಲ್ಲಿ ಹೇಳಿದಾಗ ಮಾರೀಚ ಹೇಳುತ್ತಾನೆ - 'ಆ ರಾಮನನ್ನು ನೀನು ಯಾರೆಂದು ತಿಳಿದಿದ್ದೀಯೆ. ಅವನು ಧರ್ಮವೇ

ರೂಪಗೊಂಡವನು, 'ರಾಮೋ ವಿಗ್ರಹವಾನ್ ಧರ್ಮಃ ಸಾಧುಃ ಸತ್ಯಪರಾಕ್ರಮಃ । ರಾಜಾ ಸರ್ವಸ್ಯ ಲೋಕಸ್ಯ ದೇವಾನಾಂ ಮಘವಾನಿವ॥' ಎಂಬುದಾಗಿ. ದೇವತೆಗಳಿಗೆ ಹೇಗೆ ಇಂದ್ರನು ರಾಜನೋ ಹಾಗೆ ಸರ್ವಲೋಕಗಳಿಗೂ ಶ್ರೀರಾಮನು ಪ್ರಭುವು. ಅವನು ಸಾಧುವು, ಸತ್ಯಪರಾಕ್ರಮನೂ ಸಹ ಎಂದು. ಅವನ ಪರಾಕ್ರಮ ಹುಸಿಯಾದದ್ದಲ್ಲ, ಸತ್ಯವಾದದ್ದು ಎಂದು ಸತ್ಯ-ಪರಾಕ್ರಮ ಎಂಬುದರ ಒಂದರ್ಥವು. ಸತಿ-ಅಪರಾಕ್ರಮಃ - ಸಜ್ಜನರ ವಿಷಯದಲ್ಲಿ ಅವನ ಪರಾಕ್ರಮ ನಡೆಯುವುದಿಲ್ಲ ಎಂಬುದು ಇನ್ನೊಂದರ್ಥವು. ಹಾಗೆಯೆ ಸತ್ಯಪರ-ಅಕ್ರಮಃ ಎಂದೂ ಅರ್ಥ ಮಾಡುತ್ತಾರೆ. ಸತ್ಯಪರರ ವಿಷಯದಲ್ಲಿ ತಾನು ಕ್ರಮತಪ್ಪಿ ಬೇಕಾದರೂ ನಡೆಯುತ್ತಾನೆ. ಹೇಗೆಂದರೆ, ಭೀಷ್ಮನ ಪ್ರತಿಜ್ಞೆ ಸಫಲವಾಗಲು ಶ್ರೀಕೃಷ್ಣನು ತನ್ನ ಪ್ರತಿಜ್ಞೆಯನ್ನು ಭಂಗಮಾಡಿಕೊಂಡನು. ಕೃಷ್ಣನು ತನ್ನ ಚಕ್ರಾಯುಧವನ್ನು ಎತ್ತಿ ತನ್ನ ಭಕ್ತನ ಪ್ರತಿಜ್ಞೆಯನ್ನೇ ನೆರವೇರಿಸಿದಾಗ ಭೀಷ್ಮನು 'ಅದನ್ನು ಪ್ರಯೋಗಿಸು ನನ್ನ ಜನ್ಮ ಸಾರ್ಥಕಗೊಳಿಸು' ಎಂದು 'ಪ್ರತ್ಯಸ್ತ್ರಂ ಅಂಜಲಿರಸೌ ತವ ನಿಗ್ರಹಾಸ್ತ್ರೇ' ಎಂಬಂತೆ ತನ್ನ ಅಯುಧವನ್ನು ಬಿಟ್ಟುಬಿಟ್ಟು ಕೈಮುಗಿದು ನಿಂತನು.

ಮತ್ತೆ ಮಾರೀಚನು ಹೇಳುತ್ತಾನೆ ಶ್ರೀರಾಮನು ಹೇಗೆ ಧರ್ಮವನ್ನು ಪಾಲಿಸುತ್ತಿದ್ದಾನೆಂದರೆ, 'ನ ಚ ಧರ್ಮಗುಣೈರ್ಹೀನಃ ಕೌಸಲ್ಯಾನಂದವರ್ಧನಃ ।' ಯಾವ ಗುಣಗಳಿಂದಲೂ ಅವನು ಬಿಡಲ್ಪಟ್ಟಿಲ್ಲ. ಧರ್ಮಗುಣಗಳು ಅವನಲ್ಲಿ ಪೂರ್ಣವಾಗಿವೆ ಎಂದು. 'ನ ತೀಕ್ಷ್ಣಃ ನ ಚ ಭೂತಾನಾಂ ಸರ್ವೆಷಾಮಹ್ಹಿತೇರತಃ' - ಅವನು ಯಾರಿಗೂ ಯಾವ ಅಹಿತವನ್ನೂ ಮಾಡುವವನಲ್ಲ. ತನ್ನ ತಂದೆಯಾದ ದಶರಥನನ್ನು ಚಿಕ್ಕಮ್ಮ ಮೋಸಗೊಳಿಸಿದಾಗಲೂ ಸಹ ಅವನ ಮನ ನೊಂದು ಯಾವ ಪ್ರತಿಕ್ರಿಯೆಯನ್ನೂ ತೋರಲಿಲ್ಲ,

'ವಂಚಿತಂ ಪಿತರಂ ದೃಷ್ಟ್ವಾ ಕೈಕೆಯ್ಯಾಸತ್ಯವಾದಿನಂ ಕರಿಷ್ಯಾಮೀತಿ ಧರ್ಮಾತ್ಮಾ ತಾತ ಪ್ರವ್ರಜಿತೋ ವನಂ' ಎಂದು ಮಾರೀಚ ರಾವಣನಿಗೆ ಹೇಳುತ್ತಾನೆ ಶ್ರೀರಾಮನ ಧರ್ಮಸ್ವರೂಪದ ಬಗೆಗೆ. ಮಾರೀಚನು ಹೇಳಿದ 'ಧರ್ಮಾತ್ಮಾ' ಎಂದು. ಈ ಧರ್ಮಸ್ವರೂಪವನ್ನು ಎಲ್ಲರೂ ಅನುಭವಿಸಿರುವರು ಶ್ರೀಮದ್ರಾಮಾಯಣದಲ್ಲಿ. ಮಾರೀಚನೇ ಧರ್ಮಸ್ವರೂಪವನ್ನು ಅರಿತನೆಂದರೆ ಇನ್ನು ಧರ್ಮಜ್ಞರಾದ ಶ್ರೇಷ್ಠರಾದ ಋಷಿಗಳು ಅವನ ಸ್ವರೂಪ ಅರಿಯದೇ ಇಲ್ಲ. ವಿಶ್ವಾಮಿತ್ರರು ಯಾಗ ಸಂರಕ್ಷಣೆಗೆಂದು ಶ್ರೀರಾಮನನ್ನು ಕರೆದುಕೊಂಡು ಹೋಗಲು ಬಂದಾಗ ದಶರಥನು ಶ್ರೀರಾಮನನ್ನು ಕಳುಹಿಸಲು ಹೊಂಜರಿಯುತ್ತಾನೆ. ಆಗ ವಿಶ್ವಾಮಿತ್ರರು ಹೇಳುವ ಮಾತುಃ

'ಅಹಂ ವೇದ್ಮಿ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಂ । ವಸಿಷ್ಠೋಽಪಿ ಮಹಾತೇಜಾಃ ಯೆ ಚಾನ್ಯೇ ತಪಸಿ ಸ್ಥಿತಾಃ ।

ದಶರಥ ಹೇಳುವಂತೆ 'ಊನಷೋಡಶವರ್ಷೋ ಮೇ ರಾಮೋ ರಾಜೀವಲೋಚನಃ ।'. ಅವನು ಇನ್ನೂ ಯಾವ ಯುದ್ಧವನ್ನೂ ಮಾಡಿ ಯಶಸ್ಸನ್ನ್ ಗಳಿಸಿದವನೂ ಅಲ್ಲ. ಈ ಯಾಗಸಂರಕ್ಷಣೆ ಮಾಡುವ ಮೊದಲೇ ಶ್ರೀರಾಮನು ಸತ್ಯಪರಾಕ್ರಮನೆಂದು ಬಲ್ಲೆ ಎಂದರು ವಿಶ್ವಾಮಿತ್ರರು. ಇವನು ಧರ್ಮಸ್ವರೂಪನೆಂಬುದನ್ನು ಬಲ್ಲೆ, ಇವನ ವೀರ್ಯಾತಿಶಯವನ್ನೂ ಬಲ್ಲೆ ಎಂದರು. ನಾನಷ್ಟೇ ಅಲ್ಲದೆ ಮಹಾತೇಜಸ್ವಿಗಳಾದ ವಸಿಷ್ಠರೂ ಬಲ್ಲರು, ಮತ್ತೆ ಯಾರು ತಪಸ್ಸಿನಲ್ಲಿ ನಿರತರಾಗಿರುವರೋ ಅವರೆಲ್ಲರೂ ಬಲ್ಲರು ಎಂದರು. ಅಂತಹ ಶ್ರೀರಾಮನ ಧರ್ಮಸ್ವರೂಪವನ್ನು ನಾನು ಬಲ್ಲೆನು ಎಂದರು. ಶ್ರೀರಾಮನ ಧರ್ಮಸ್ವರೂಪವು ಹಾಗೆ ಆಶ್ಚರ್ಯಕರವಾದುದು.

ಶ್ರೀರಾಮನು ವನವಾಸಕ್ಕೆ ಹೋದಾಗ ಒಂದು ಆಶ್ರಮದಿಂದ ಇನ್ನೊಂದು ಆಶ್ರಮಕ್ಕೆ ಸಂಚಾರಮಾಡಿದಾಗ, ಆ 'ದಂಡಕಾವನ ಜಂಗಮ ಪಾರಿಜಾತ'ನಾದಾಗ  ಒಬ್ಬೊಬ್ಬರು ಋಷಿಗಳನ್ನೂ ಸಂದರ್ಶಿಸಿ ಅವರಿಗೆ ತನ್ನ 'ರಹಃಸಂಶ್ಲೇಷ'ವನ್ನಿತ್ತಾಗ ಅವತಾರದ ಒ>ದು ಮುಖ್ಯ ಕೃತ್ಯವನ್ನು ಪೂರ್ಣಮಾಡಿದ. ಅವನು ದುಷ್ಟನಿಗ್ರಹವನ್ನು

ತನ್ನ ಒಂದು ಸಂಕಲ್ಪದಿಂದಲೇ ಮಾಡಬಹುದಾಗಿತ್ತು. ಅದಕ್ಕೆ ಅವತಾರ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ರಾವಣನು ನಾಶವಾಗಲಿ ಎಂದು ಸಂಕಲ್ಪಿಸಿದ್ದರೆ ಆ ರಾವಣ ನಾಶವಾಗುತ್ತಿದ್ದ. ಮತ್ತೇಕೆ ಅವತಾರ ಮಾಡಿದನೆಂದರೆ ಸಾಧುಪರಿತ್ರಾಣಕ್ಕೆ ಎನ್ನುತ್ತಾರೆ. 'ಪರಿತ್ರಾಣ' ಎಂಬಲ್ಲಿ 'ಪರಿ' ಎಂಬ ಉಪಸರ್ಗಕ್ಕೆ 'ರಹಃಸಂಶ್ಲೇಷದಾನಾರ್ಥಂ' ಎಂಬರ್ಥ. ಅನೇಕ ಭಕ್ತರು ಶ್ರೀರಾಮನ ಸಂಶ್ಲೇಷವಿಲ್ಲದೆ ಬದುಕಲಾರೆವೆಂದು ಕಷ್ಟಪಡುತ್ತಿದ್ದಾಗ ಅಂಥ ಭಕ್ತೋತ್ತಮರನ್ನು ತಾನೇ ಹುಡುಕಿಕೊಂಡು ಹೋಗಿ ಅವರಿಗೆ ತನ್ನ ದರ್ಶನ ಕೊಟ್ಟು ಸಂತೋಷಪಡಿಸಿದ ಅವರನ್ನು, ಬದುಕಿಸಿದ ಅವರನ್ನು. ಆ ಮಹತ್ಕಾರ್ಯ ಅವತಾರ ಮಾಡದಿದ್ದರೆ ಆಗುತ್ತಿರಲಿಲ್ಲ. ಆದ್ದರಿಂದ ಅವತಾರಕ್ಕೆ ಮುಖ್ಯ ಪ್ರಯೋಜನ ರಹಃಸಂಶ್ಲೇಷ ಪ್ರದಾನ. ಸಜ್ಜನರಿಗೆ, ಅವರಿಗೆ ಮಾತ್ರ ತಿಳಿಯುವಂತೆ, ತಾನು ತನ್ನ ಸಂದರ್ಶನವನ್ನು ಸಂಶ್ಲೇಷವನ್ನು ಉಂಟುಮಾಡಿ ಅವರಿಗೆ ಆನಂದವನ್ನು ಉಂಟುಮಾಡಿದ. ಹಾಗೆ ಶರಭಂಗರ ಆಶ್ರಮಕ್ಕೆ ಶ್ರೀರಾಮನು ಹೋದಾಗ ಅವರು ಹೇಳಿದರು - 'ಧಾರ್ಮಿಕನಾದ ನೀನು ಬರುತ್ತಿದ್ದೀಯೆ ಎಂದು ತಿಳಿದಾಗ ನಿನ್ನನ್ನು ನೋಡದೆ ಆ ಇಂದ್ರನೊಡನೆ ಹೋಗಲು ಮನಸ್ಸಾಗಲಿಲ್ಲ' ಎಂದು. ಶರಭಂಗರು ಅವನಿಗೆ ಹೇಳುವ ವಿಶೇಷಣ 'ಧಾರ್ಮಿಕೇಣ'.

'ತ್ವಯಾಹಂ ಪುರುಷವ್ಯಾಘ್ರ ಧಾರ್ಮಿಕೇಣ ಮಹಾತ್ಮನಾ । ಸಮಾಗಮ್ಯ ಗಮಿಷ್ಯಾಮಿ ತ್ರಿದಿವಂ ದೇವಸೇವಿತಂ । ಧಾರ್ಮಿಕನಾದ ಮಹಾತ್ಮನಾದ ನಿನ್ನನ್ನು ಸಂದರ್ಶಿಸಿ, ಸೇವಿಸಿ ನಂತರ ಸ್ವರ್ಗಕ್ಕೆ ಹೋಗುತ್ತೇನೆ ಎಂದರು. ಧರ್ಮಸ್ವರೂಪವನ್ನು ಹೇಗೆ ಎಂದು ನಿರೂಪಣೆಮಾಡುವಾಗ ಹೇಗೆ ಯಾರೆಲ್ಲ ಆ ಧರ್ಮಸ್ವರೂಪವನ್ನು ಗುರುತಿಸಿದ್ದಾರೆ ಎನ್ನುವುದನ್ನು ಕಾಣಬಹುದು.

ಶ್ರೀರಾಮನು ಅಗಸ್ತ್ಯರ ಆಶ್ರಮಕ್ಕೆ ಹೋದಾಗ ಅವರ ಶಿಷ್ಯರು ಶ್ರೀರಾಮನು ಬಂದಿರುವನೆಂದು ಅಗಸ್ತ್ಯರಿಗೆ ತಿಳಿಸುತ್ತಾರೆ. ಅವರು 'ವಾನಪ್ರಸ್ಥೇನ ಧರ್ಮೇಣ ಸ ತೇಷಾಂ ಭೋಜನಂ ದದೌ । ' ವಾನಪ್ರಸ್ಥರಿಗೆ ಋಷಿಗಳಿಗೆ ಯಾವರೀತಿಯಲ್ಲಿ ಸತ್ಕಾರಮಾಡಬೇಕೋ ಆ ರೀತಿಯಲ್ಲಿ ಶ್ರೀರಾಮ, ಸೀತೆ ಮತ್ತು ಲಕ್ಷ್ಮಣರಿಗೆ ಭೋಜನಾದಿ ಸತ್ಕಾರವನ್ನು ಮಾಡುತ್ತಾರೆ. ಅಗಸ್ತ್ಯರು ಧರ್ಮವನ್ನು ತಿಳಿದವರು, ಧರ್ಮಜ್ಞರು ಎಂದು ವಾಲ್ಮೀಕಿಗಳು ಹೇಳುತ್ತಾರೆ. ಅವರು ಧರ್ಮಜ್ಞರಾದರೆ ಶ್ರೀರಾಮನನ್ನು 'ಧರ್ಮಕೋವಿದ' ಎನ್ನುತ್ತಾರೆ. ಶ್ರೀರಾಮನು ಧರ್ಮದಲ್ಲಿ ಪಂಡಿತನಾದವನು -

'ಪ್ರಥಮಂ ಚ ಉಪವಿಶ್ಯಾಥ ಧರ್ಮಜ್ಞಃ ಮುನಿಪುಂಗವಃ । ಉವಾಚ ರಾಮಂ ಆಸೀನಂ ಪ್ರಾಂಜಲಿಂ ಧರ್ಮಕೋವಿದಂ ॥'

ಧರ್ಮಜ್ಞ ಎನ್ನುವುದಕ್ಕೂ ಧರ್ಮಕೋವಿದ ಎನ್ನುವುದಕ್ಕೂ ಬಹಳ ವ್ಯತ್ಯಾಸವಿದೆ. ಆದ್ದರಿಂದಲೇ ಅವನಿಗೆ 'ರಾಮೋ ವಿಗ್ರಹವಾನ್ ಧರ್ಮಃ' ಎಂದು ಶ್ರೀರಾಮನನ್ನು ಕೊಂಡಾಡಿದ್ದಾರೆ.

ಈ ಧರ್ಮಸ್ವರೂಪವನ್ನು ಯಾವ ರೀತಿಯಲ್ಲಿ ಶ್ರೀರಾಮನು ನಡೆಸಿಕೊಂಡುಬಂದ ಎಂಬುದನ್ನು ಹೇಳುವಾಗ ಸೀತಾದೇವಿ ಒಂದು ಸಂದರ್ಭದಲ್ಲಿ ಶ್ರೀರಾಮನಿಗೆ ನೆನಪುಮಾಡಿಕೊಡುತ್ತಾಳೆ ಹೇಗೆ ಧರ್ಮಕ್ಕೆ ಮಿಕ್ಕ ಎಲ್ಲ ವಿಚಾರಗಳಿಗಿಂತಲೂ ಶ್ರೇಷ್ಠವಾದ ಸ್ಥಾನವಿದೆ ಎಂದು. ಆ ಧರ್ಮದಿಂದಲೇ ಮಿಕ್ಕದ್ದೆಲ್ಲ ಎನ್ನುವುದು ಹೇಗೆ ಎಂದು ಹೇಳುವಾಗ,

ಧರ್ಮಾತ್ ಅರ್ಥಃ ಪ್ರಭವತೇ ಧರ್ಮಾತ್ ಪ್ರಭವತೇ ಸುಖಂ । ಧರ್ಮೇಣ ಲಭತೇ ಸರ್ವಂ ಧರ್ಮಸಾರಮಿದಂ ಜಗತ್ ॥

ಧರ್ಮದಿಂದಲೇ 'ಅರ್ಥ:' ಎಂದರೆ ಎಲ್ಲ ಐಹಿಕ, ಆಮುಷ್ಮಿಕ ಅಭಿವೃದ್ಧಿಗಳೂ ಉಂಟಾಗುವುವು. ಸುಖವುಂಟಾಗುವುದೂ ಧರ್ಮದಿಂದಲೇ. ಎಲ್ಲವನ್ನೂ ಧರ್ಮದಿಂದಲೇ ಪಡೆಯುವುದು ಆದ್ದರಿಂದ ಈ ಲೋಕವು 'ಧರ್ಮಸಾರ' ಎಂದೇ ಹೇಳಬೇಕು. ಈ ಲೋಕ ಧರ್ಮದ ಒಂದು ಸಾರತಮವಾದ ಅಂಶವನ್ನು ಹೊಂದಿದೆ. ಧರ್ಮವೇ ಸಾರವು ಈ ಲೋಕದಲ್ಲಿ. ಇದನ್ನು ಅನುಸರಿಸಿದರೆ ಎಲ್ಲವೂ ಸಿಕ್ಕುತ್ತದೆ. ಧರ್ಮವನ್ನು ಬಿಟ್ಟರೆ ಯಾವುದೂ ದೊರಕದು.

ಆತ್ಮಾನಂ ನಿಯಮೈ: ತೈಸ್ತೈ: ಕರ್ಷಯಿತ್ವಾ ಪ್ರಯತ್ನತ: । ಪ್ರಾಪ್ಯತೇ ನಿಪುಣೈ: ಧರ್ಮ: ನಸುಖಾಲ್ಲಭ್ಯತೇ ಸುಖಂ ॥

ಲೋಕದ ಜನರಿಗೆ ಕಣ್ಣು ತೆರೆಯಿಸಿ ತತ್ತ್ವತಿಳಿಸುವ ಸಂದರ್ಭದಲ್ಲಿ ವಾಲ್ಮೀಕಿಮಹರ್ಷಿಗಳು ಸೀತಾದೇವಿಯಿಂದ ಈ ಮಾತನ್ನು ಹೇಳಿಸಿದ್ದಾರೆ. ಪ್ರತಿಯೊಬ್ಬನೂ ನಿಯಮಗಳಿಗನುಸಾರ ಆಯಾ ನಿಯಮಗಳ ಕಟ್ಟುಪಾಡಿಗೆ ಪ್ರಯತ್ನದಿಂದ ಒಳಗಾಗಿ ಆ ನಿಯಮಗಳಿಂದಾಗುವ ಕ್ಲೇಶವನ್ನು ಅನುಭವಿಸುವವರಾಗಿ ನಿಪುಣರಾದವರು ಧರ್ಮವನ್ನಾಚರಿಸಿ ಅದರಿಂದ ಸುಖವನ್ನು ಹೊಂದುತ್ತಾರೆ. ಆದರೆ ಸ್ವಲ್ಪವೂ ಕಷ್ಟಪಡುವುದಿಲ್ಲ, ಯಾವ ಕಷ್ಟಗಳಿಗೂ ಸಿದ್ಧರಾಗಿಲ್ಲ ಎಂಬುವವರು, ಧರ್ಮವನ್ನು ಬಿಟ್ಟು ಧರ್ಮಕ್ಕೆ ವಿರುದ್ಧವಾಗಿ ನಡೆಯುವವರಾಗಿ ಸುಖವನ್ನು ಬಯಸುವವರಿಗೆ 'ಸುಖದಿಂದ ಸುಖ' ಎಂಬುದು ಲಭಿಸುವುದಿಲ್ಲ. ಧರ್ಮವನ್ನು ಅನುಷ್ಠಾನಮಾಡುವುದು ಸುಖಕರವಲ್ಲ. ಈ ಕಾಯಕ್ಲೇಶವನ್ನು ಅನುಭವಿಸಿ ಯಾರು ಧರ್ಮವನ್ನು ಅನುಸರಿಸುತ್ತಾರೆಯೋ ಅವರು ಎಲ್ಲ ಶ್ರೇಯಸ್ಸನ್ನೂ ಹೊಂದುತ್ತಾರೆ. ಈ ಧರ್ಮವನ್ನು ಅನುಸರಿಸದೇ ತಾತ್ಕಾಲಿಕವಾಗಿ ಕಾಣುವ ಸುಖವನ್ನು ಯಾರು ಸುಖವೆಂದು ನಂಬುವರೋ ಅಂತಹವರಿಗೆ ಪರಮಸುಖ ಎಂಬುವುದು ದೊರಕುವುದಿಲ್ಲ ಎಂದು ತಿಳಿಸುತ್ತಾರೆ. ಸೀತಾದೇವಿ ರಾಮನಿಗೆ ಹೇಳುವಾಗ 'ಧರ್ಮೇ ಸ್ಥಿತ:' ಎಂಬುದಾಗಿ ಧರ್ಮದಲ್ಲಿ ನೀನು ನೆಲೆನಿಂತವನು ಎನ್ನುತ್ತಾಳೆ. ಈ ಧರ್ಮವೆಂಬುದನ್ನು ಹೇಗೆ ತೋರಿಸುವುದೆಂಬ ಸಂದರ್ಭದಲ್ಲಿ ವಾಲ್ಮೀಕಿಗಳು ನಿರೂಪಿಸುತ್ತಾರೆ - ಈ ಧರ್ಮ ಎಂಬುವುದು ಪರಮಸೂಕ್ಷ್ಮವಾದುದು. ತಿಳಿಯಲು ಬಹಳ ಕಷ್ಟಕರವಾದುದು. ಈ ಧರ್ಮದ ಸರ್ವೋತ್ಕೃಷ್ಟವಾದ ರೂಪ ಎಂದು ಹೇಳುವುದಾದರೆ, 'ಯಾರು ಅಸಹಾಯರಾಗಿ ಒಬ್ಬರಲ್ಲಿ ಬಂದು ರಕ್ಷಣೆಯನ್ನು ಬೇಡುತ್ತಾರೆಯೋ ಅಂತಹವರಿಗೆ ಆ ರಕ್ಷಣೆಯನ್ನು ಕೊಟ್ಟೇಕೊಡಬೇಕಾದದ್ದು ಈ ಧರ್ಮ'. ಹಾಗೆ ರಕ್ಷಣೆಯನ್ನು ಬೇಡುವವರಿಗೆ ರಕ್ಷಣೆ ಕೊಡದಿರುವುದು ಧರ್ಮವಲ್ಲ. ಶ್ರೀರಾಮ ಈ ವಿಧವಾದ 'ಶರಣಾಗತರಕ್ಷಣ' ಎಂಬ ಪರಮಧರ್ಮವನ್ನು ಅನುಷ್ಠಾನಮಾಡಿ ತೋರಿಸಿಕೊಟ್ಟ ಲೋಕಕ್ಕೆ. ಆದ್ದರಿಂದ ಈ ಕಾಕಾಸುರ ಶರಣಾದಾಗ, 'ವಧಾರ್ಹಮಪಿ ಕಾಕುತ್ಸ್ಥ: ಕೃಪಯಾ ಪರ್ಯಪಾಲಯತ್' ಎಂದಂತೆ ಆ ವಧಾರ್ಹನಾದ ಕಾಕನನ್ನು ಶ್ರೀರಾಮನು ಬಹಳ ಕೃಪೆಯಿಂದ ಕಾಪಾಡಿದನಂತೆ. ಕೃಪೆಯೆಂಬುದು ಅವನನ್ನು ಬಲಾತ್ಕಾರಮಾಡಿ ರಕ್ಷಿಸುವಂತೆ ಮಾಡಿತು. ಆಚಾರ್ಯರುಗಳು ಶ್ರೀರಾಮನ ಕರುಣೆ ಶ್ರೀರಾಮನಿಗಿಂತ ಹೆಚ್ಚೆಂಬುದಾಗಿ ಅನುಭವಿಸಿದ್ದಾರೆ. ಅವನ ಕೃಪೆ ಅವನಿಗಿಷ್ಟವಿಲ್ಲದಿದ್ದರೂ ಬಲಾತ್ಕಾರವಾಗಿ ಅವನಿಂದ ಆ ಕೆಲಸವನ್ನು ಮಾಡಿಸಿತಂತೆ. ಹೇಗೆಂದರೆ ಕರ್ಮ ಎಂಬುದು ಹೇಗೆ ನಮ್ಮ ಹತ್ತಿರ ಬಲಾತ್ಕಾರವಾಗಿ ಕೆಲಸ ಮಾಡಿಸುತ್ತದೋ ಹಾಗೆ ಕೃಪೆ ಅವನಲ್ಲಿ.

ಹೀಗೆ ಶ್ರೀರಾಮಚಂದ್ರ ತನ್ನ ಆಚರಣೆಯಿಂದ ಹೇಗೆ ಈ ಧರ್ಮವನ್ನು ಸದ್ಗುಣಗಳನ್ನು ಅನುಷ್ಠಿಸಿ ಲೋಕಕ್ಕೆ ತೋರಿದನೆಂಬುದನ್ನು ಅನೇಕ ಸಂದರ್ಭಗಳಲ್ಲಿ ನಾವು ನೋಡಬಹುದು.

ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ

॥ ಶ್ರೀಃ ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ ॥

# ಶ್ರೀ ಪರಕಾಲಸ್ವಾಮಿಗಳ ಬಳಿಯ ನನ□ಹೆನಪುಗಳು

ಉ. ವೇ. ಶ್ರೀಮಾನ್ ಡಾ. ಶಲ್ವಪ್ಪಿಳ್ಳೈ ಐಯಂಗಾರ್, ತಿರುನಾರಾಯಣಪುರಂ

---

ದಾಸನಾದ ನಾನು ಮೇಲುಕೋಟೆಯ ಯತಿರಾಜದಾಸರಾದ ಶ್ರೀ ಸ್ಥಾನೀಕಂ ನಾಗರಾಜ ಐಯಂಗಾರ್ ಅವರ ಮಗನಾಗಿದ್ದರಿಂದ ಈ ಕುಟುಂಬದ ಬಗ್ಗೆ ಮೊದಲೇ ಪರಿಚಯವಿದ್ದ ಹಾಗೂ ನನ- ತಾತನವರಾದ ಸ್ಥಾನೀಕಂ ಶ್ರೀನಿವಾಸನರಸಿಂಹಾಚಾರ್ಯರನು- ಹತ್ತಿರದಿಂದ ಬಲ್ಲ ಶ್ರೀಮದಭಿನವವಾಗೀಶಪರಕಾಲಸ್ವಾಮಿಗಳು ತಮ್ಮ ಪೂರ್ಣಾನುಗ್ರಹದಿಂದ ನನನು-ಶ್ರೀಮಠದಲ್ಲಿ ಇರಲು ಅನುಮತಿ ನೀಡಿ ಕ್ರಿ.ಶ. ೧೯೯೫ ರಿಂದ ೨೦೦೭ರವರೆಗೆ ೧೨ ವರ್ಷಗಳ ಕಾಲ ತಮ್ಮ ಜೊತೆಯಲ್ಲಿಯೇ ಕಾರ್ಯಕ್ರಮಗಳಿಗೆ ಭಾಗವಹಿಸಲು ಅನುಮತಿ ನೀಡಿದ್ದರು. ಆದ್ದರಿಂದ ಅವರ ದಿವ್ಯಸಾನಿಧ್ಯ ನನ- ಮೇಲೆ ಅಪಾರವಾದ ಪರಿಣಾಮ ಬೀರಿದೆ. ಇಂದಿಗೂ ಸಹ ಶ್ರೀಮಠದ ಎಲ್ಲಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾ ಬಂದಿದ್ದೇನೆ. ಶ್ರೀಮಠದಲ್ಲಿದ್ದಾಗ ನಡೆದ ಕೇವಲ ಕೆಲವು ಘಟನೆಗಳನು- ಮಾತ್ರ ನಾನು ಇಲ್ಲಿ ಬಹಳ ಸಂಕ್ಷಿಪ್ತವಾಗಿ ನೆನಪಿಸಿಕೊಂಡಿದ್ದೇನೆ.

### ಶ್ರೀಶ್ರೀಶ್ರೀಮದಭಿನವವಾಗೀಶಬ್ರಹ್ಮತಂತ್ರಸ್ವಾಮಿಗಳು

ಈಗಿರುವ ಈ ಮಹಾಸ್ವಾಮಿಗಳು ಮಹಾತಪಸ್ವಿಗಳು ಹಾಗೂ ಮಹಾಮಂತ್ರಸಿದ್ಧರು. ಈಗಿರುವ ದಕ್ಷಿಣಭಾರತದ ಮಹಾಮಂತ್ರಸಿದ್ಧರಲ್ಲಿ ಅತ್ಯಂತ ಶಕ್ತಿಶಾಲಿಯಾದವರು ಇವರು ಎಂದರೆ ಅತಿಶಯೋಕ್ತಿಯಲ್ಲ. ಶ್ರೀಸ್ವಾಮೀಜಿಯವರು ಕೇವಲ ಭಗವಂತನ ಆರಾಧನೆಯಲ್ಲಿ ನಿರತರಾಗಿರುವುದರಿಂದ ಅವರ ಮಂತ್ರಶಕ್ತಿಯು ಪೂರ್ಣವಾಗಿ ಬೆಳಕಿಗೆ ಬರದೇ ಹೋದರು ಅನೇಕರು ಇವರ ದಯೆಯಿಂದ ಅನೇಕ ಪ್ರಯೋಜನಗಳನು- ಪಡೆದಿದ್ದಾರೆ. ಇವರ ಸಂಕ್ಷಿಪ್ತ ಪರಿಚಯವನು-ಮಾಡಿಸುವುದೇ ಈ ಲೇಖನದ ಉದ್ದೇಶ.

ಶ್ರೀಸ್ವಾಮೀಜಿಯವರ ಪೂರ್ವಾಶ್ರಮದ ನಿಜನಾಮಧೇಯ ಶ್ರೀನಿವಾಸನ್ ಎಂಬುದಾಗಿ ಅವರು ಕೌಶಿಕಗೋತ್ರದ ಶ್ರೀವೆಂಕಟನರಸಿಂಹಾಚಾರ್ ಮತ್ತು ಶ್ರೀಮತಿ ರಂಗನಾಯಕಮ್ಮ ಎಂಬುವರ ಸುಪುತ್ರರು. ಇವರು ೧೯೩೪ರಲ್ಲಿ ಜನಿಸಿದರು. ಇವರು ಮೈಸೂರು ಜಿಲ್ಲೆಯ ಹಿಟ್ಟುವಳಿ ಎಂಬ ಹಳ್ಳಿಯವರು. ಇವರ ತಂದೆಯವರು ಪೂರ್ವ ಮತ್ತು ಅಪರಗಳೆಂಬ ಹಿಂದೂ ಧರ್ಮದ ಕರ್ಮಗಳನು- ಮಾಡಿಸುವುದರಲ್ಲಿ

ನಿಷ್ಣಾತರಾಗಿದ್ದರು. ಶ್ರೀಸ್ವಾಮೀಜಿಯವರ ತಾತನವರು ವಿದ್ವಾನ್ ಶ್ರೀನಿವಾಸೈಂಗಾರ್ ಎಂಬುವರು, ಅವರು ಕೃಷ್ಣಯಜುರ್ವೇದದಲ್ಲಿ ಕ್ರಮಪಾಠಿಗಳಾಗಿದ್ದು, ಪರಕಾಲಮಠದ ಶ್ರೀಕೃಷ್ಣಬ್ರಹ್ಮತಂತ್ರಸ್ವಾಮಿಗಳ ಅನ್ವಯವನು-ಹೊಂದಿದ್ದರು. ಇವರ ಮನೆತನಕ್ಕೆ ಸ್ವಚ್ಛಂದಂ ಎಂದು ಹೆಸರಿತ್ತು. ಪ್ರಸ್ತುತ ಸ್ವಾಮೀಜಿಯವರು ಕ್ರಿ.ಶ. ೧೯೫೭ರಲ್ಲಿ ಮಹಾರಾಜಸಂಸ್ಕೃತಕಾಲೇಜಿನಲ್ಲಿ ಆಗಮಪ್ರವೀಣವನು-ಮುಗಿಸಿದರು.

ಇವರು ಚಿಕ್ಕವಯಸಿನಿಂದಲೇ ಅತ್ಯಂತ ಪಂಡಿತರಾಗಿದ್ದರು ಹಾಗೂ ತೀಕ್ಷ್ಣಮತಿಗಳಾಗಿದ್ದರು. ಇವರ ಪಾಂಡಿತ್ಯ ಕೇವಲ ಪ್ರಾಚೀನಪಂಡಿತರ ಶುಷ್ಕಪಾಂಡಿತ್ಯದಂತೆ ಅಲ್ಲದೇ ಅತ್ಯಂತ ನವೀನರಿಗೂ, ಆಧುನಿಕ ವಿಜ್ಞಾನದ ಸಂದೇಹಗಳಿಗೂ ಸರಿಯಾದ ಸಮಾಧಾನನೀಡುವಂತಿರುತ್ತದೆ. ಬೀಸಣಿಗೆಯವರು ಎಂಬ ಹೆಸರನು-ಪಡೆದಿದ್ದವರಿಂದ ಹಾಗೂ ಶ್ರೀಸ್ವಾಮಿಗಳಿಂದ ನಾಲಾಯಿರ ಆಳ್ವಾರ್ ದಿವ್ಯಪ್ರಬಂಧಗಳನು- ಅಧ್ಯಯಯನ ಮಾಡಿದರು. ಇಂದಿಗೂ ಸಹ ಅವರು ನಾಲಾಯಿರ ಪ್ರಬಂಧಗಳನು- ಪಾರಾಯಣಮಾಡುವುದನು- ನೋಡಿದರೇ ಅತ್ಯಂತ ಚಿಕ್ಕವಯಸಿನವರಿಗೇ ಆಶ್ಚರ್ಯವಾಗುತ್ತದೆ. ಅಂತಹ ನೆನಪಿನ ಶಕ್ತಿ ಅವರದು. ನಂತರ ವೇಳೂರು ಕೃಷ್ಣಮಾಚಾರ್ಯಸ್ವಾಮಿ ಎಂಬ ಮಹಾತ್ಮರಿಂದ ಮಂತ್ರಶಾಸ್ತ್ರವನು- ಅನೇಕ ರಹಸ್ಯಮಂತ್ರಗಳನೂ- ಸಹ ಅಭ್ಯಾಸಮಾಡಿದರು. ಇದಲ್ಲದೇ ಅಹೋಬಿಲ ಮಠದ ತಿಲ್ಲಸ್ಥಾನಂ ಸ್ವಾಮಿ ಎಂಬುವರಿಂದ ಆಗಮಶಾಸ್ತ್ರ, ಮಂತ್ರಶಾಸ್ತ್ರಗಳಲ್ಲಿ ನಿಪುಣರಾದರು.

ಆ ಕಾಲಕ್ಕೆ ಶ್ರೀಮದಭಿನವರಂಗನಾಥಪರಕಾಲಮಹಾಸ್ವಾಮಿಗಳು ಎಂದರೆ ಇಡೀ ಭಾರತದ ವಿದ್ವತ್ ಲೋಕವು ಕಂಡ ಅಪರಮಿತ ಅದ್ಭುತಶಕ್ತಿ. ಅವರಬಳಿಯಲ್ಲಿ ಈ ಸ್ವಾಮೀಜಿಯವರು ಕಾಲಕ್ಷೇಪವನು-ಮಾಡಿದ್ದಾರೆ ಎಂದರೆ ಇವರ ವಿದ್ವತ್ತನು- ಭಕ್ತರೇ ಊಹಿಸಬಹುದು. ನಂತರದಲ್ಲಿ ತೆನ್ಬರೈ ಆಂಡವನ್ ಸ್ವಾಮಿಗಳಲ್ಲಿ ಪಾದುಕಾಸಹಸ್ರ ಹಾಗೂ ತಿರುವಾಯಮೊಳಿ ಕಾಲಕ್ಷೇಪನು-ಮಾಡಿದರು.

ಪರಕಾಲ ಸ್ವಾಮಿಗಳು ಪಟ್ಟಕ್ಕೆ ಬಂದಾಗ ಈ ಮಠದ ಆಡಳಿತ ನಡೆಸುವುದೇ ಕಷ್ಟವಾದ ಕೆಲಸವಾಗಿತ್ತು. ಆದರೆ ಮಠದಲ್ಲಿ ಇದ್ದ ವಿದ್ಯಾರ್ಥಿಗಳ ಸಂಖ್ಯೆ ೧೦೦ ಕ್ಕೂ ಹೆಚ್ಚು ಮತ್ತು ಕೈಂಕರ್ಯಪರರ ಸಂಖ್ಯೆ ಹಾಗೂ ಆ ಕೈಂಕರ್ಯಪರರ ಅವಲಂಬಿತರ ಸಂಖ್ಯೆ ಎಲ್ಲಾ ಸೇರಿ ೨೦೦ ಮಂದಿಗೆ ದಿನನಿತ್ಯವೂ ಊಟ ವಸತಿ ಮುಂತಾದ ಅನಿವಾರ್ಯತೆಗಳು ಇದ್ದವು. ಇದೆಲ್ಲವನೂ-ನಿಭಾಯಿಸುವುದು ಮತ್ತು ಹಯಗ್ರೀವ ಪೂಜೆ, ಕೈಂಕರ್ಯ, ಮಠದ ಪರಂಪರೆಗೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು ಸುಲಭದ ಮಾತಾಗಿರಲಿಲ್ಲ. ಇದರಲ್ಲಿ ಸ್ವಲ್ಪವಾದರೂ ವೆತ್ಯಾಸವಾಗಿದ್ದರೂ ಸಹ ಇಂದು ಮಠದ ಪರಿಸ್ಥಿತಿ ಊಹಿಸಿಕೊಳ್ಳಲು ಆಗದಷ್ಟು ಅಧಃಪತನಕ್ಕೆ ಇಳಿಯುತ್ತಿತ್ತು ಎಂಬುದರಲ್ಲಿ ಯಾವುದೇ ಸಂದೇಹವಿರಲಿಲ್ಲ.

ಇಂತಹ ಆಪತ್ಕಾಲದಲ್ಲಿ ಶ್ರೀ ಸ್ವಾಮಿಗಳು ಕಠಿನವಾದ ನಿರ್ಧಾರಗಳನು- ತೆಗೆದುಕೊಂಡದಲ್ಲದೇ, ತಾವು ಪೂರ್ವಾಶ್ರಮದಲ್ಲಿ ಇದ್ದಾಗ ಉಳಿಸಿದ್ದ ಹಣವೆಲ್ಲವನೂ- ಮಠಕ್ಕೆ ನೀಡಿ ಮಠದ ಆರ್ಥಿಕ ಸ್ಥಿತಿಯನು-

ಉತ್ತಮಗೊಳಿಸಿದ್ದಲ್ಲದೇ, ಮಠದ ನಿತ್ಯ ಪಾರಮಾರ್ಥಿಕ ಕೈಂಕರ್ಯಗಳು ಸುಗಮವಾಗಿ ಸಾಗುವಂತೆ ಮಾಡಿದರು. ಇಂದು ಮಠದ ಸ್ಥಿತಿ ಎಷ್ಟು ಉತ್ತಮವಾದ ಸ್ಥಿತಿಯಲ್ಲಿದೇ ಎಂದರೆ ಯಾರೂ ಸಹ ೧೯೯೨ ರಲ್ಲಿ ಮಠದ ಪರಿಸ್ಥಿತಿ ಹೀಗೆ ಇತ್ತು ಎಂದು ನಂಬಲಾರದ ಸ್ಥಿತಿಗೆ ಬಂದು ಮುಟ್ಟಿದೆ.

ಆದರೆ ಆರ್ಥಿಕಸ್ಥಿತಿ ಉತ್ತಮಗೊಳ್ಳಲು ಮಠದ ಕೈಂಕರ್ಯಗಳು ನೇರವೇರಲು ಸ್ವಾಮಿಗಳು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಹಾಗೂ ನಾನೇ ಸ್ವತಃ ೧೯೯೫ ರಿಂದ ೨೦೦೭ರ ವರೆಗೆ ಅವರ ಆಪ್ತ, ಅತ್ಯಂತ ಏಕಾಂತದಲ್ಲಿ ನೋಡಿದ್ದೇನೆ ಎಷ್ಟೋ ರಾತ್ರಿಗಳು ಅವರು ನಿದ್ದೆಯನು- ಮಾಡದೇ ಶ್ರೀಹಯಗ್ರೀವನ ಧ್ಯಾನದಲ್ಲಿ ಮಗ್ನರಾಗಿ ಕುಳಿತಿರುತ್ತಿದ್ದರು. ಅಂತಹ ಪರಮಪೂಜ್ಯರ ದಶೆಯಿಂದ ಇಂದು ಮಠದಲ್ಲಿ ನಿರಂತರವೂ ಕೈಂಕರ್ಯಗಳು ವಿಜೃಂಭಣೆಯಿಂದ ನಡೆಯುತ್ತಿವೆ.

**ನನ ಕುಟುಂಬ ಮತ್ತು ಶ್ರೀಪರಕಾಲಮಠದ ಸಂಬಂಧ**

ನಾನು ಈಗಾಗಲೇ ಹೇಳಿದಂತೆ ನನ- ಕುಟುಂಬವು ಮೇಲುಕೋಟೆಯ ಶ್ರೀಚಲುವನಾರಾಯಣಸ್ವಾಮಿ ದೇವಾಲಯದ ಯತಿರಾಜದಾಸರ್ ಹಾಗೂ ವಂಶಪಾರಂಪರಿಕ ಸ್ಥಾನೀಕರದ್ದಾಗಿದೆ. ನಮಗೆ ಯತಿರಾಜ ದಾಸರ್ ಕುಟುಂಬ ಎಂದು ಹೆಸರು ಬರಲು ಕಾರಣ ನಮ್ಮ ಕುಟುಂಬದ ಪೂರ್ವಜರು ಸಾಕ್ಷಾತ್ತಾಗಿ ಶ್ರೀರಾಮಾನುಜರು ಮೇಲುಕೋಟೆಗೆ ಬಂದಾಗ ಅವರ ಜೊತೆಯಲ್ಲಿ ಇದ್ದು, ಕಡಾಂಬಿ ಆಚ್ಚಾನ್ ಅವರ ಅನುಪಸ್ಥಿತಿಯಲ್ಲಿ ಅವರಿಗೆ ಭಿಕ್ಷಾಕೈಂಕರ್ಯವನು- ನೇರವೇರಿಸುತ್ತಿತ್ತು. ಇಂದಿಗೂ ಈ ಕೈಂಕರ್ಯ ಮೇಲುಕೋಟೆಯಲ್ಲಿ ಸಾಂಕೇತಿಕವಾಗಿ ಮುಂದುವರೆಯುತ್ತಾ ಬಂದಿದೆ. ಆದ್ದರಿಂದ ಶ್ರೀರಾಮಾನುಜರೇ ನಮಗೆ ಯತಿರಾಜದಾಸರ್ ಎಂಬ ನಾಮವನು- ಅನುಗ್ರಹಿಸಿದ್ದು ಇಂದಿಗೂ ದೇವಾಲಯದಲ್ಲಿ ಯತಿರಾಜದಾಸರ ಹೆಸರಿನಲ್ಲಿ ನಮಗೆ ಅರುಳಪ್ಪಾಡು, ಹಾಗೂ ಮಾಲೆ ಪರಿವಟ್ಟಾದಿ ಮರ್ಯಾದೆಗಳು ನಡೆಯುತ್ತವೆ.

ಹಿಂದೆ ಮೈಸೂರಿನ ಮಹಾರಾಜರ ಅರಮನೆಯಲ್ಲಿ ವೈರಮುಡಿ, ರಾಜಮುಡಿ, ಕೃಷ್ಣರಾಜಮುಡಿ ಕೀರಿಟಗಳಿದ್ದು, ಅಲ್ಲಿಂದಲೇ ಮುಡಿಗಳನು-ಮೇಲುಕೋಟೆಯ ಸ್ಥಾನೀಕರು ರಾಜನ ಸೈನಿಕರ ಜೊತೆಯಲ್ಲಿ ಮೇಲುಕೋಟೆಗೆ ತೆಗೆದು ಕೊಂಡು ಬರುತ್ತಿದ್ದರು. ಆಗ ಮೊದಲು ಪರಕಾಲ ಮಠದಲ್ಲಿ ಬಂದು ಸ್ಥಾನೀಕರು ತಂಗುತ್ತಿದ್ದರು. ಹಾಗಾಗಿ ಶ್ರೀಸ್ವಾಮಿಗಳಿಗೆ ನನ- ತಾತನವರ ಪರಿಚಯ ಚನಾಗಿಯೇ ಇತ್ತು. (ನಾನೇ ನನ- ತಾತನವರನು- ನೋಡಿದ ನೆನಪಿಲ್ಲ. ಆದರೆ ಶ್ರೀಸ್ವಾಮಿಗಳು ಅವರ ಬಗ್ಗೆ ನನಗೆ ಹೆಚ್ಚು ಹೇಳಿದ್ದಾರೆ.)

ಮತ್ತೊಂದು ವಿಶೇಷವೆಂದರೆ ನನ- ತಂದೆ ಮತ್ತು ತಾತನವರು ತಪ್ಪದೇ ಶ್ರೀಮಠಕ್ಕೆ ಶ್ರೀಚಲುವನಾರಾಯಣಸ್ವಾಮಿಯವರ ಮಾಲೆ, ಮರ್ಯಾದೆಗಳನು- ತರುತ್ತಿದ್ದಾರೆ. ಅಂದರೆ ಶ್ರೀಸ್ವಾಮಿಗಳು ಚಾತುರ್ಮಾಸ್ಯವನು- ಸಂಕಲ್ಪಿಸಿದಾಗ ಅವರಿಗೆ ಮುಖ್ಯವಾಗಿ ಎಲ್ಲಾ ದೇವಾಲಯಗಳ ದೇವರುಗಳ ಧರಿಸಿರುವ ಮಾಲೆಗಳನು-ತಂದು ಸಮರ್ಪಿಸಲಾಗುತ್ತದೆ. ಇದು ಸಾಮಾನ್ಯವಾಗಿ ಎಲ್ಲಾ ದಿವ್ಯದೇಶಗಳಿಂದ ಹಾಗೂ ಮೈಸೂರು

ರಾಜ್ಯದ ಪ್ರಮುಖ ದೇವಾಲಯಗಳಿಂದ ಬರುತ್ತಿತ್ತು. ಮೇಲುಕೋಟೆಯಿಂದ ಶ್ರೀತಿರುನಾರಾಯಣಸ್ವಾಮಿ ಪ್ರಸಾದವನು-ನನ-ತಂದೆಯವರು ಸುಮಾರು ೬೦ ವರ್ಷಗಳಿಂದ ತಪ್ಪದೇ ತರುತ್ತಿದ್ದಾರೆ ಮತ್ತು ಅದನು-ಹಿಂದಿನ ಮತ್ತು ಈಗಿನ ಶ್ರೀಸ್ವಾಮಿಗಳಿಗೆ ಸಮರ್ಪಿಸುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಬೇರೆ ಎಲ್ಲಾ ದಿವ್ಯದೇಶಗಳಿಂದ ಮಾಲೆ ಮರಿಯಾದೆ ನಡೆಯುತ್ತಿದ್ದರೂ ಮೇಲುಕೋಟೆಯ ಮಾಲೆಗಳನೇ ಪ್ರಪ್ರಥಮವಾಗಿ ಸಮರ್ಪಿಸಬೇಕೆಂಬ ನಿಯಮವಿದ್ದು ಇದು ರಾಜಾಜ್ಞೆ ಆಗಿತ್ತು. ಇಂದಿಗೂ ಸಹ ಇದು ನಡೆದು ಬರುತ್ತಿದ್ದು ನನ-ಮನೆತನ ಮತ್ತು ಪರಕಾಲ ಮಠಕ್ಕೆ ಒಂದು ರೀತಿಯ ಗೌರವಾನ್ವಿತ ಸಂಬಂಧವಿದೆ. ಈ ಸಂಬಂಧದ ದಾಖಲೆಗಳನು- ಇಂದಿಗೂ ಶ್ರೀಮಠದ ಹಾಗೂ ಶ್ರೀಚಲುವನಾರಾಯಣಸ್ವಾಮಿಯವರ ದೇವಾಲಯದ ಬೊಕ್ಕಸದ ದಾಖಲೆಗಳಲ್ಲಿ ನಾವು ನೋಡಬಹುದಾಗಿದೆ.

**ಪರಮಪೂಜ್ಯರು ಮತ್ತು ಮಠದಲ್ಲಿ ನಡೆಯುವ ಸುದರ್ಶನ ಹೋಮಗಳು**

ಶ್ರೀಪರಕಾಲ ಮಠದ ಸ್ವಾಮಿಗಳು ಬಂದ ನಂತರದ ಪ್ರಮುಖವಾದ ಅಂಶವೆಂದರೆ ಮಠದಲ್ಲಿ ನಡೆಯುವ ಶ್ರೀಸುದರ್ಶನಹೋಮಗಳು. ಶ್ರೀಸ್ವಾಮಿಗಳು ೧೯೬೨ ನಂತರ ಮಠದ ಉನತಿಗಾಗಿ ಮತ್ತು ಶ್ರೀಹಯಗ್ರೀವ ಹಾಗೂ ಪೂರ್ವಾಚಾರ್ಯರ ಕೈಂಕರ್ಯಗಳು ಉತ್ತಮ ವಾಗಿ ನಡೆಯಲಿ ಎಂಬ ಹಾರೈಕೆಯೊಂದಿಗೆ ಸಾಕ್ಷಾತ್ ಶ್ರೀಹಯಗ್ರೀವನಾದ ಶ್ರೀಸುದರ್ಶನನು- ತೃಪ್ತಿಪಡಿಸಲು ಮಠದಲ್ಲಿ ತಮ್ಮ ತಿರುನಕ್ಷತ್ರ ಹಾಗೂ ಶ್ರೀರಾಮಾನುಜಾಚಾರ್ಯರ ತಿರುನಕ್ಷತ್ರಗಳ ಸಂದರ್ಭದಲ್ಲಿ ವಿಶೇಷವಾದ ಶ್ರೀಸುದರ್ಶನನಾರಸಿಂಹ ಹೋಮಗಳನು- ನಡೆಸಲು ಆರಂಭಿಸಿದರು. ಇದನು- ನಡೆಸಲು ಸ್ವಾಮಿಗಳಿಗೆ ಪ್ರೇರಕನಾದವನು ಶ್ರೀಸುದರ್ಶನನಾರಸಿಂಹನೇ. ಹಾಗೂ ಇವರು ಸಾಕ್ಷಾತ್ ಮಂತ್ರಶಾಸ್ತ್ರವನು-ಚೆನಾಗಿ ಬಲ್ಲವರೂ ಮತ್ತು ಅದನು-ಅನುಷ್ಠಾನಮಾಡುವವರೂ ಆದ್ದರಿಂದ ಈ ಹೋಮಗಳನು- ಮಾಡಲು ಆರಂಭಿಸಿದರು. ಮೊದಲಿಗೆ ಈ ಹೋಮಗಳನು- ಪರಕಾಲಮಠದಲ್ಲಿ ಮಾಡುತ್ತಿದ್ದವರು ಯಾರೆಂದರೇ ನನ- ಮಾಮಾತಾತನವರಾದ, ಮಂತ್ರ ಹಾಗೂ ಆಗಮ ಶಾಸ್ತ್ರಗಳಲ್ಲಿ ಅತ್ಯಂತ ಪ್ರಭಾವಿಯಾಗಿದ್ದ, ಶಾಸ್ತ್ರನಿಷ್ಠರಾದ, ಸಹಸ್ರಾರು ಹೋಮಗಳನು-ಮಾಡಿದ್ದ, ಬಿಂಡಿಗನವಿಲೆ ಶತಾಯುಷಿ ಶ್ರೀ ವೇಂಕಟಾಚಾರ್ಯ ಸ್ವಾಮಿಗಳು. ಇವರು ಅನೇಕ ದೇವತಾ ಪ್ರತಿಷ್ಠೆಗಳನು- ಮಾಡಿದ್ದರಲ್ಲದೇ, ಶ್ರೀಸ್ವಾಮಿಗಳ ಅತ್ಯಂತ ಪ್ರೀತಿಪಾತ್ರರಲ್ಲಿ ಒಬ್ಬರಾಗಿದ್ದರು. ಇವರು ಮಠಕ್ಕೆ ಬರುತ್ತಿದ್ದಾಗಲೇ ೧೦೦ ವರ್ಷ ಕಳೆದಿದ್ದರೂ, ಯಾವುದೇ ಯುವಕರಂತೆ ಮಂತ್ರಗಳನು- ಲೀಲಾಜಾಲವಾಗಿ ಹೇಳುತ್ತಾ ಸುದರ್ಶನಹೋಮಮಾಡುತ್ತಿದ್ದರು. ಇವರು ಬದುಕಿರುವವರೆಗೆ ಇವರೇ ಮಠದಲ್ಲಿ ಶ್ರೀಸುದರ್ಶನಹೋಮಗಳನು-ನಡೆಸುತ್ತಿದ್ದರು. ಈಗ ಇವರು ಪರಮಪದಿಸಿದ ನಂತರ ವೇದಶಾಸ್ತ್ರದ ಸಾಧಕರಾದ ಶ್ರೀಯುತ ಅನಂತರಂಗನ್‌ರವರು ಶ್ರೀ ಸ್ವಾಮಿಗಳಿಗೆ ಅತ್ಯಂತ ಪ್ರಿಯರಾದವರು ಶ್ರೀಸುದರ್ಶನ ಹೋಮವನು-ಮಾಡುತ್ತಿದ್ದಾರೆ.

ಈ ಸುದರ್ಶನ ಹೋಮದ ಮತ್ತೊಂದು ಪ್ರಮುಖವಾದ ಅಂಶವೆಂದರೆ ಮನಸ್ಸಿನ ವಿರೋಧ ಭಾವನೆಗಳಿದ್ದರೂ ಅವರನು-ಬೆಸೆಯುವ ಕೊಂಡಿ. ಈ ಹೋಮದಲ್ಲಿ ಶ್ರೀಆಂಡವನ್ ಸ್ವಾಮಿಗಳು, ಶ್ರೀ ಅಳಶಿಂಗರ್ ಸ್ವಾಮಿಗಳು, ಶ್ರೀ ರಂಗಪ್ರಿಯಸ್ವಾಮಿಗಳು, ಶ್ರೀಪರಕಾಲಸ್ವಾಮಿಗಳು, ಶ್ರೀಮನ್ಮಹಾರಾಜ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಎಲ್ಲರೂ ಒಟ್ಟಾಗಿ ಒಂದೇ ಸಾಲಿನಲ್ಲಿ ನಿಂತಿದ್ದರು. ಅಂದು ನೋಡಿದ ಆ ದೃಶ್ಯ ಇಂದಿಗೂ ಸಹ ಕಣ್ಣಿಗೆ ಕಟ್ಟಿದಂತಿದೆ. ಇಂದಿಗೂ ಸಹ ಅದೇ ವೈಭವದೊಂದಿಗೆ ಮಠದಲ್ಲಿ ಹೋಮಗಳು ನಡೆದು ಬರುತ್ತಿದೆ. ಮತ್ತು ಶ್ರೀಸ್ವಾಮಿಗಳ ಅಭಿಪ್ರಾಯದಂತೆ ಮಠವೂ ಸಹ ಅಭಿವೃದ್ಧಿಯನು-ಹೊಂದುತ್ತಿದೆ.

## ಶ್ರೀಸ್ವಾಮಿಗಳು ಮತ್ತು ಮಹಾರಾಜ ಶ್ರೀಕಂಠದತ್ತನರಸಿಂಹರಾಜ ಒಡೆಯರ್ ಬಹುದ್ದೂರ್ ಮತ್ತು ಮಹಾರಾಣಿ ಶ್ರೀಪ್ರಮೋದಾದೇವೀ ಒಡೆಯರ್

ಶ್ರೀಮಠವು ಮೈಸೂರು ಮಹಾರಾಜರ ಗುರುಮಠವಾಗಿದೆ. ಮೈಸೂರಿನ ಮಹಾರಾಜರು ಇಂದಿಗೂ ಸಹ ಪಾದಪೂಜೆಗಳನು- ತಮ್ಮ ಗುರುಗಳಾದ ಪರಕಾಲಸ್ವಾಮಿಗಳಿಗೆ ಮಾಡುತ್ತಾ ಬಂದಿದ್ದಾರೆ. ನಾನು ೧೯೯೫ರಲ್ಲಿ ಶ್ರೀಮಠಕ್ಕೆ ಬಂದ ನಂತರ ಶ್ರೀಸ್ವಾಮಿಗಳ ಜೊತೆಯಲ್ಲಿ ಹಲವಾರು ಬಾರಿ ಅರಮನೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದೇನೆ. ಆ ಪಾದಪೂಜೆಯ ಭವ್ಯತೆಯನು-ಕಣ್ತುಂಬಿಕೊಂಡಿದ್ದೇನೆ ಅಷ್ಟೇ ಅಲ್ಲದೇ ಪ್ರಥಮ ಬಾರಿಗೆ ಛಾಯಾಚಿತ್ರಗಳನು-ತೆಗೆದು ಯದುಗಿರಿ ಮಾಸಪತ್ರಿಕೆಯಲ್ಲಿ ದಾಖಲಿಸಿದ್ದೇನೆ. ಶ್ರೀಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ಹಿಂದಿನ ಪರಂಪರೆಗಳನು- ಉಳಿಸುತ್ತಾ ಬಂದಿದ್ದ ಮಹಾನುಭಾವರು. ಅವರ ಜೀವನದಲ್ಲಿ ಸರ್ಕಾರದ ನೀತಿಗಳಿಂದ ಅನೇಕ ಬಾರಿ ಬಹಳಷ್ಟು ಕಷ್ಟಪಡುತ್ತಾ ಬಂದಿದ್ದರಾದರೂ ಹಿಂದಿನ ಪರಂಪರೆಗಳನು-ಕ್ರಮಗಳನು; ಆಚರಣೆಗಳನು-ಎಂದೂ ಬಿಟ್ಟಿರಲಿಲ್ಲ.

ಶ್ರೀಮಠದ ಸ್ವಾಮಿಗಳ ಆಯ್ಕೆಯ ವಿಷಯದಲ್ಲಿ ಶ್ರೀಮನ್ಮಹಾರಾಜ ಶ್ರೀಕಂಠದತ್ತನರಸಿಂಹರಾಜ ಒಡೆಯರ್ ಅವರು ಶ್ರೀಸ್ವಾಮಿಗಳನೇ ಬೆಂಬಲಿಸಿ ಅವರೇ ಶ್ರೀಮಠಕ್ಕೆ ಉತ್ತರಾಧಿಕಾರಿಗಳಬೇಕೆಂದು ಸೂಚಿಸಿದರು. ಅರಮನೆಯ ಅಂದಿನ ಪರಿಸ್ಥಿತಿ ಅರಿತಿದ್ದ ಅವರು ಶ್ರೀಮಠಕ್ಕೆ ಸ್ವಾಮಿಗಳನಾಗಿ ಈಗ ಪೀಠದಲ್ಲಿರುವ ಅಭಿನವವಾಗೀಶಸ್ವಾಮಿಗಳನೇ ಆಯ್ಕೆಮಾಡಲು ಸೂಚಿಸಿದರು. ಅದನು- ಮಹಾರಾಣಿಯವರೂ ಸಹ ಬೆಂಬಲಿಸಿದರು.

ಶ್ರೀಮಠಕ್ಕೂ ಮತ್ತು ಅರಮನೆಗೂ ನಿತ್ಯ ಸಂಬಂಧವಿದೆ. ಅರಮನೆಯಲ್ಲಿ ನಡೆಯುವ ಎಲ್ಲಾ ಜಯಂತಿಗಳಲ್ಲೂ ಅಂದರೆ ರಾಜ ಮತ್ತು ರಾಣಿಯರು ಹುಟ್ಟಿದ ದಿನಗಳಂದು ಹಾಗೂ ಅರಮನೆಯಲ್ಲಿ ನಡೆಯುವ ಎಲ್ಲಾ ಎಡೆಕಟ್ಟೆ ಅಂದರೆ ಹಿಂದಿನ ರಾಜರಾಣಿಯರ ಶ್ರಾದ್ಧದಿನಗಳಂದು ಶ್ರೀಸ್ವಾಮಿಗಳು ಬಿಜಯಮಾಡಿಸಿ ಅವರಿಗೆ ಪಾದಪೂಜೆಯನು- ಸಲ್ಲಿಸಲೇ ಬೇಕೆಂಬ ನಿಯಮಿದೆ. ಇದನು- ಶ್ರೀಸ್ವಾಮಿಗಳು ಮತ್ತು ಶ್ರೀಮನ್ಮಹಾರಾಜರು ನಡೆಸುತ್ತಾ ಬಂದಿದ್ದಾರೆ. ವರ್ಷದಲ್ಲಿ ಸಾಮಾನ್ಯವಾಗಿ ಆರು ಬಾರಿ ಶ್ರೀಸ್ವಾಮಿಗಳು ಅರಮನೆಗೆ ದಯಮಾಡಿಸಿ ಅಲ್ಲಿ ಶ್ರೀಮನ್ಮಹಾರಾಜ ಹಾಗೂ ಮಹಾರಾಣಿಯವರು ಅರಮನೆಯ ವಿದ್ವಾಂಸರ ಜೊತೆಯಲ್ಲಿ

ಪಾದಪೂಜೆಯನು- ಸಲ್ಲಿಸುತ್ತಾರೆ. ಹಾಗೂ ಪೂಜೆಯ ನಂತರ ಶ್ರೀಪಾದತೀರ್ಥವನು- ಸೇವಿಸುತ್ತಾರೆ. ನನಗೆ ತಿಳಿದಂತೆ ಶ್ರೀಪರಕಾಲಸ್ವಾಮಿಗಳ ಶ್ರೀಪಾದತೀರ್ಥವನು- ನೇರವಾಗಿ ಸ್ವೀಕರಿಸುವವರು ರಾಜಮನೆತನದವರು ಮಾತ್ರ. ಅದು ಅವರಿಗೆ ಸಿಕ್ಕ ಭಾಗ್ಯ ಎಂದು ನಾನು ಭಾವಿಸುತ್ತೇನೆ. ಅನೇಕ ಬಾರಿ ನಾನು ಪಾದಪೂಜೆಗಳಲ್ಲಿ ಭಾಗವಹಿಸಿದ್ದೇನೆ.

ಒಂದು ವೇಳೆ ಮೈಸೂರಿನ ಅರಮನೆಯಲ್ಲಿ ಪಾದಪೂಜೆ ನಡೆಯದೇ ಇದ್ದರೆ ಅಂದರೆ ಶ್ರೀಮನ್ಮಹಾರಾಜರು ಬೆಂಗಳೂರಿನಲ್ಲಿ ಇದ್ದರೆ ಶ್ರೀಸ್ವಾಮಿಗಳೂ ಸಹ ಬೆಂಗಳೂರಿಗೆ ದಯಮಾಡಿಸಿ ಅಲ್ಲಿ ಪಾದಪೂಜೆಯನು- ನೆರವೇರಿಸಿಕೊಳ್ಳುತ್ತಾರೆ. ಇನು- ಎಡೆಕಟ್ಟೆ ದಿನಗಳಂದು ಶ್ರೀಹಯಗ್ರೀವದೇವರ ತೀರ್ಥಪ್ರಸಾದಗಂಧಮಾಲೆ ಇತ್ಯಾದಿಗಳನು- ಶ್ರೀಮಠದಿಂದ ಕಳುಹಿಸಿಕೊಡಲಾಗುತ್ತದೆ. ಅಲ್ಲಿ ಸ್ವಾಮಿಗಳಿಗೆ ಪಾದಪೂಜೆಯಾದ ನಂತರ ಶಾಲುಗಳು, ಹಣ್ಣು, ಹೂವು, ಸಂಭಾವನೆಗಳನು-ನೀಡಲಾಗುತ್ತದೆ.

ಹಾಗೆಯೇ ಶ್ರೀಮಠಕ್ಕೆ ಶ್ರೀಸ್ವಾಮಿಗಳ ಜಯಂತಿ ಉತ್ಸವಗಳಂದು ಶ್ರೀಮನ್ಮಹಾರಾಜ ಮತ್ತು ಮಹಾರಾಣಿಯವರು ಬಿಜಯಂಗೈಯುತ್ತಾರೆ. ಇಲ್ಲಿ ಕೂಡ ಶ್ರೀಸ್ವಾಮಿಗಳು ರಾಜ ಮತ್ತು ರಾಣಿಯರಿಗೆ ಆಶೀರ್ವಾದಗಳನು-ಮಾಡುತ್ತಾರೆ.

ನನಗೆ ತಿಳಿದಂತೆ ಶ್ರೀಮನ್ಮಹಾರಾಜರು ಪರಕಾಲಸ್ವಾಮಿಗಳ ಮೇಲೆ ಅಪಾರವಾದ ಅಭಿಮಾನವನು- ಇಟ್ಟುಕೊಂಡಿದ್ದರು ಕರೆದಾಗಲೆಲ್ಲಾ ಶ್ರೀಮಠಕ್ಕೆ ಬಂದು ಹೋಗುತ್ತಿದ್ದರು. ಶ್ರೀಮನ್ಮಹಾರಾಣಿಯವರಂತೂ ಶ್ರೀಸ್ವಾಮಿಗಳ ಪರಮಭಕ್ತರಾಗಿದ್ದು ಅರಮನೆಯ ಯಾವುದೇ ಕಷ್ಟಪರಸ್ಥಿತಿಯಲ್ಲೂ ಹಾಗೂ ಒಳ್ಳೆಯ ವಿಚಾರದಲ್ಲೂ ಶ್ರೀಸ್ವಾಮಿಗಳ ಸಲಹೆಯನು-ಪಡೆಯುತ್ತಾ ಬಂದಿದ್ದಾರೆ. (ಇದನು-ವಿವರಿಸಲು ದಿನಗಳು ಬೇಕು). ನನ- ನೆನಪಿನ ಅತ್ಯಂತ ದುಃಖದ ಸಂಗತಿ ಎಂದರೆ ಶ್ರೀಮನ್ಮಹಾರಾಜರು ಡಿಸೆಂಬರ್ ೨೦೧೩ರಲ್ಲಿ ತೀರಿಕೊಂಡಾಗ ಶ್ರೀಮಠದ ವತಿಯಿಂದ ನಾನೇ ಶ್ರೀಚೂರ್ಣಪರಿಪಾಲನೆಯನು- ಮಾಡಿದ್ದು. ನಂತರ ೧೪ನೇ ದಿನ ಶ್ರೀಸ್ವಾಮಿಗಳ ಪಾದಪೂಜೆಯ ನಂತರ ವೇದದಿವ್ಯಪ್ರಬಂಧಗಳ ಶಾತ್ತುಮೊರೆ ನಡೆಯಿತು. ದಿನಾಂಕ ೨೩.೩.೨೦೧೪ರಂದು ಅರಮನೆಯಲ್ಲಿ ಶ್ರೀಕಂಠದತ್ತನರಸಿಂಹರಾಜ ಒಡೆಯರ್ ಅವರ ಕರ್ಪೂರಂಕೊಡಂ ಮಹಾಶಾತ್ತುಮೊರೈ ನಡೆಯಿತು. ಅಂದು ಶ್ರೀಸ್ವಾಮಿಗಳ ಪಾದಪೂಜೆಯನು- ಈಗಿನ ಶ್ರೀಕಾಂತೇರಾಜಒಡೆಯರ್ ದಂಪತಿಗಳು ನಡೆಸಿದರು. ಶ್ರೀಮನ್ಮಹಾರಾಣಿಯವರು ಉಪಸ್ಥಿತರಿದ್ದರು. ಆ ಕ್ಷಣ ನಾನು ಭಾವುಕನಾಗಿದ್ದೆ. ಏಕೆಂದರೆ ಯಾವ ಮಹಾರಾಜರು ಶ್ರೀಸ್ವಾಮಿಗಳನು- ಶ್ರೀಮಠಕ್ಕೆ ಪಟ್ಟಾಭಿಷೇಕ ಮಾಡಿದ್ದರೋ ಆ ಮಹಾರಾಜರು ಶ್ರೀವೈಕುಂಠದಲ್ಲಿ ನಿತ್ಯವಾಸ ಮಾಡುವ ಸಂದರ್ಭದಲ್ಲಿ ಶ್ರೀಸ್ವಾಮಿಗಳು ಪ್ರಾರ್ಥನೆಯನು- ಮಾಡಿದ್ದು ನನಗೆ ವಿಧಿಯ ಆಟ ಎನಿಸಿತು. ಶ್ರೀರಾಮಾನುಜರ ಕೃಪೆಯೇ ಎಲ್ಲದಕ್ಕೂ ಕಾರಣ ಎನಿಸಿತು.

## ಶ್ರೀಸ್ವಾಮಿಗಳು ಮತ್ತು ಅರಮನೆ ಶ್ರೀಶ್ವೇತವರಾಹಸ್ವಾಮಿ ಹಾಗೂ ಶ್ರೀಕೃಷ್ಣ

ಶ್ರೀಮಠದ ಒಂದು ಅದ್ಭುತ ಪರಂಪರೆಯೊಂದಿದೆ. ಇದು ಬಹಳ ಜನಕ್ಕೆ ತಿಳಿದಿಲ್ಲ ಎಂದೆ ನಾನು ಭಾವಿಸಿದ್ದೇನೆ. ಶ್ರೀತಿರುಮಲ ತಿರುಪತಿ, ಶ್ರೀ ಮೇಲುಕೋಟೆ ಮುಂತಾದ ದಿವ್ಯದೇಶಗಳಲ್ಲಿ ಆಯಾಯ ದೇವರ ತಿರ್ಥೋತ್ಸವದಂದು ಅಂದರೆ ಜಯಂತಿಯಂದು ಶ್ರೀವೇಂಕಟೇಶ್ವರ ಸ್ವಾಮಿ, ಶ್ರೀ ಚಲುವನಾರಾಯಣಸ್ವಾಮಿ ತೀರ್ಥೋತ್ಸವ ಆದನಂತರ ದೇವರು ಇಂದಿಗೂ ಆಯಾಯ ಜಾಗದಲ್ಲಿರುವ ಶ್ರೀಮಠಕ್ಕೆ ಬಿಜಯಮಾಡಿಸುತ್ತಾರೆ. ಅಂದು ಸಾಮಾನ್ಯವಾಗಿ ಶ್ರೀಸ್ವಾಮಿಗಳು ಅಲ್ಲಿನ ಶಾಖಾಮಠಕ್ಕೆ ದಯಮಾಡಿಸಿ ದೇವರ ಶ್ರೀಪಟ್ಟಾಭಿಷೇಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾಲೆ ಮರ್ಯಾದೆ, ಪರಿವಟ್ಟ, ತೀರ್ಥ,ಪ್ರಸಾದಗಳನು- ಸ್ವೀಕರಿಸುತ್ತಾರೆ. ಆದರೆ ಅದೇ ರೀತಿ ಮೈಸೂರು ನಗರದಲ್ಲಿರುವ ಪ್ರಧಾನ ಮಠಕ್ಕೆ ಅರಮನೆಯಲ್ಲಿರುವ ಶ್ರೀಶ್ವೇತವರಾಹಸ್ವಾಮಿ ಹಾಗೂ ಶ್ರೀಕೃಷ್ಣದೇವರು ಬಿಜಯಮಾಡಿಸುತ್ತಿದ್ದರು. ಅಂದರೆ ಶ್ರೀಕೃಷ್ಣಜನ್ಮೋತ್ಸವದಂದು ರೋಹಿಣಿನಕ್ಷತ್ರದ ದಿನ ಶ್ರೀಕೃಷ್ಣದೇವರ ಗೋವಿಂದಪಟ್ಟಾಭಿಷೇಕ ಹಾಗೂ ಶ್ರೀವರಾಹ ದೇವರು ರೇವತಿನಕ್ಷತ್ರದ ದಿನ ಪರಕಾಲಮಠಕ್ಕೆ ಬಂದು ಪಟ್ಟಾಭಿಷೇಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಇದು ಪರಂಪರೆಯಿಂದ ನಡೆದು ಬರುತ್ತಿದ್ದ ಸಂಗತಿ.

ಆದರೆ ಹಿಂದಿನ ಸ್ವಾಮಿಗಳ ಕಾಲದಲ್ಲಿ (ನನಗೆ ಗೊತ್ತಿಲ್ಲ ಯಾವಾಗ ನಿಂತು ಹೋಯಿತು) ಈ ದೇವರ ಉತ್ಸವಗಳು ವೈಭವದಿಂದ ನಡೆಯುತ್ತಿದ್ದರೂ ಸಹ ಶ್ರೀಮಠಕ್ಕೆ ಆಗಮಿಸುವುದನು- ನಿಲ್ಲಿಸಲಾಗಿತ್ತು. ಅಂದರೆ ಒಂದು ದೊಡ್ಡ ಪರಂಪರೆಯನೇ ನಿಲ್ಲಿಸಲಾಗಿತ್ತು. ಇದುಶ್ರೀಸ್ವಾಮಿಯವರಿಗೆ ಅತ್ಯಂತ ನೋವಿನ ಸಂಗತಿಯಾಗಿತ್ತು. ಶ್ರೀ ಸ್ವಾಮಿಗಳು ಹೇಳುತ್ತಾರೆ ''ನನಗೆ ಯಾವ ಗೌರವವೂ ಬೇಡ ಆದರೆ ಶ್ರೀಮಠದ ಗೌರವಗಳು ನಿಲ್ಲಬಾರದು''. ನನಗೆ ಹೇಳಿದರು 'ನೋಡು ಚಲ್ಲಿ, (ನನ- ಕರೆಯುವ ಹೆಸರು) ಈ ಪರಂಪರೆ ಮೇಲುಕೋಟೆ, ರಾಮನಾಥಪುರ, ತಿರುಪತಿ, ಕಾಂಚಿ ಮುಂತಾದ ದಿವ್ಯದೇಶಗಳಲ್ಲಿ ನಡೆಯುತ್ತಿದೆ. ಆದರೆ ಈ ಮೂಲ ಮಠದಲ್ಲೇ ನಿಂತು ಹೋಗಿದೆ ಹೇಗಾದರೂ ಮತ್ತೆ ಆ ಪರಂಪರೆಯನು- ಮುಂದುವರೆಸಬೇಕು'. ನಾನು ಸ್ವಾಮಿಗಳ ಅಪ್ಪಣೆ ಪಡೆದು ಸರ್ಕಾರದ ಅಧಿಕಾರಿಯಾಗಿದ್ದ, ಮುಜರಾಯಿ ತಹಶೀಲ್ದಾರ್ ಆಗಿರುವ (ಆಗ ಅರಮನೆ ಮ್ಯಾನೇಜರ್) ಶ್ರೀಯುತ ಯತಿರಾಜ ಸಂಪತ್ಕುಮಾರನ್, ದೇವಾಲಯದ ಅರ್ಚಕರು ಮತ್ತು ಶ್ರೀಯುತ ವೈಯಾಕರಣಿ ಶಲ್ಲಪ್ಪ ಅವರ ಸಹಕಾರದೊಂದಿಗೆ ಈ ಉತ್ಸವವನು- ಪುನರಾರಂಭಿಸಿದೆವು. ಅತ್ಯಂತ ಕಷ್ಟಪರಿಸ್ಥಿತಿ ಇದ್ದರೂ ಪರಂಪರೆಗಳನು-ಉಳಿಸುವುದರಲ್ಲಿ ಶ್ರೀಸ್ವಾಮಿಗಳಿಗೆ ಇದ್ದ ಒಂದು ಸಂಕಲ್ಪ ಇಂದು ಮಠಕ್ಕೆ ಶ್ರೀಕೃಷ್ಣದೇವರು ಮತ್ತು ಶ್ರೀಸ್ವಾಮಿಯವರ ತಿರುನಕ್ಷತ್ರದ ದಿನವೇ ಶ್ರೀವರಾಹಸ್ವಾಮಿಯವರ ಜಯಂತಿ ಇರುವುದರಿಂದ ಅಂದೇ ವರಾಹದೇವರು ಬಿಜಯಮಾಡಿಸುತ್ತಾರೆ. ಶ್ರೀಸ್ವಾಮಿಗಳು ತಾವೇ ಅತ್ಯಂತ ಪ್ರೀತಿಯಿಂದ, ಭಕ್ತಿಯಿಂದ ಶ್ರೀವರಾಹದೇವರಿಗೆ ಪಟ್ಟಾಭಿಷೇಕವನು- ವಿಜೃಂಭಣೆಯಿಂದ ನಡೆಸುತ್ತಿದ್ದಾರೆ. ಆ ಮೂಲಕ ಸ್ವಾಮಿಗಳು ಮೂಲಪರಂಪರೆಯನು- ಮುಂದುವರೆಸುವ ಕೈಂಕರ್ಯದಲ್ಲಿ ಮಗ್ನರಾಗಿದ್ದಾರೆ. ಈ ಉತ್ಸವಗಳನು-ಇಂದಿಗೂ ಸಹ ಸಹಸ್ರಾರು ಭಕ್ತರು ವೀಕ್ಷಿಸುತ್ತಿದ್ದಾರೆ.

## ಶ್ರೀಮಠದ ಮಡಪಳ್ಳಿ ಹಾಗೂ ಶ್ರೀಸ್ವಾಮಿಗಳು

ಶ್ರೀಮಠಕ್ಕೆ ಸ್ವಾಮಿಗಳು ಪಟ್ಟಾಭಿಷೇಕವಾದ ನಂತರ ಅನೇಕರು ಶ್ರೀಮಠದಿಂದ ಅವರಾಗಿಯೇ ನಿವೃತ್ತಿಹೊಂದಿದರು ಮತ್ತು ಕೆಲವರಿಗಂತೂ ವಯಸ್ಸಾಗಿದ್ದರಿಂದ ಅವರು ಕೆಲಸ ಮಾಡಲು ಅಶಕ್ತರಾಗಿದ್ದರು. ಅಂತಹ ಸಂದರ್ಭದಲ್ಲಿ ಮಠದ ಮುಖ್ಯಭಾಗವಾದ ಶ್ರೀಮಡಪಳ್ಳಿಯಲ್ಲಿ ಹೆಚ್ಚು ಕೆಲಸವಿರುತ್ತಿತ್ತು ಮತ್ತು ಅತ್ಯಂತ ಶ್ರದ್ಧೆಯಿಂದ ಮತ್ತು ರುಚಿಕರವಾಗಿ ಶಾಸ್ತ್ರಬದ್ಧವಾಗಿ, ಮಡಿಯಿಂದ ಕೆಲಸ ಮಾಡುವವರ ಅಗತ್ಯತೆ ಇತ್ತು. ಅದೂ ಅಲ್ಲದೇ ಶ್ರೀಮಠದಲ್ಲಿ ಇಂದಿಗೂ ಸೌದೆ ಒಲೆಯಲ್ಲಿಯೇ ಅಡುಗೆ ಮಾಡುವುದು ಮತ್ತು ಬಾವಿಯಿಂದಲೇ ನೀರನು- ಸೇದಿ ಅಡುಗೆ ಮಾಡಬೇಕು. ಈಗಾಗಲೇ ನಾನು ಹೇಳಿದಂತೆ ಮಠದಲ್ಲಿ ೧೦೦ ವಿದ್ಯಾರ್ಥಿಗಳು ಸೇರಿದಂತೆ ಪ್ರತಿದಿನ ಸುಮಾರು ೨೦೦ ಮಂದಿ ಊಟಮಾಡುತ್ತಿದ್ದರು. ಅಂತಹ ಸಂದರ್ಭದಲ್ಲಿ ಆಗ ತಾನೇ ಸ್ವಗ್ರಾಮದಿಂದ ಆಗಮಿಸಿದ್ದ ಶ್ರೀಕೃಷ್ಣಮೂರ್ತಿಯವರು ಮತ್ತು ಶ್ರೀರಾಮನಾಥರು ಅಡುಗೆ ಕೈಂಕರ್ಯವನು- ಮಾಡುತ್ತಿದ್ದರು. ಹೆಚ್ಚುತ್ತಿದ್ದ ಭಕ್ತಾದಿಗಳು, ಮಠದಲ್ಲಿ ನಡೆಯುವ ತಿರುನಕ್ಷತ್ರ ಹಾಗೂ ಆರಾಧನೆಗಳಂದು ಯಾವ ಯಾವ ಭಕ್ಷ್ಯ, ಭೋಜ್ಯಗಳನು- ಯಾವ ರೀತಿ ಮಾಡಬೇಕೆಂಬ ಗೊಂದಲ ಇವರಿಗೆ ಕಾಡುತ್ತಿತ್ತು. ಆಗೆಲ್ಲ ಶ್ರೀಸ್ವಾಮಿಗಳೇ ಶ್ರೀಮಡಪಳ್ಳಿಗೆ ತೆರಳಿ ಅವರಿಗೆ ಹೇಗೆ ರುಚಿಕಟ್ಟಾಗಿ ಅಡುಗೆ ಮಾಡಬೇಕು? ಯಾವ ಯಾವ ಪದಾರ್ಥಗಳನು- ಎಷ್ಟು ಎಷ್ಟು ಪ್ರಮಾಣದಲ್ಲಿ ಅಡುಗೆಯಲ್ಲಿ ಬಳಸಿದರೆ ಎಷ್ಟು ಜನರಿಗೆ ಅಡುಗೆ ಮಾಡಬಹುದು? ಯಾವ ಯಾವ ಪದಾರ್ಥಗಳನು- ಯಾವ ರೀತಿ ತಯಾರಿಸಬೇಕು? ಶ್ರೀಮಠದ ಸಂಪ್ರದಾಯದಂತೆ ಯಾವ ತರಕಾರೀ, ಯಾವ ಪದಾರ್ಥಗಳನು- ಅಡುಗೆಯಲ್ಲಿ ಉಪಯೋಗಿಸಬಾರದು ಎಂದು ತಾವೇ ತಿಳಿಸಿಕೊಡುತ್ತಿದ್ದರು. ಹೀಗೆ ಶ್ರೀಸ್ವಾಮಿಗಳಿಂದಲೇ ತರಬೇತಿ ಪಡೆದಿದ್ದರಿಂದ ಈ ಇಬ್ಬರೂ ಇಂದು ಸಾವಿರಾರು ಜನರಿಗೆ ಅಡುಗೆ ತಯಾರಿಸುವಂತೆ ಆಯಿತು.

ನನಗೆ ಸ್ವಾಮಿಗಳು ಹೇಳುತ್ತಿದ್ದರು 'ಹಿಂದೆ ಇದ್ದ ಪರಕಾಲಸ್ವಾಮಿಗಳು ದೇವರನೇ ಕೇಳುತ್ತಿದ್ದರಂತೆ, ಯಾವ ಪ್ರಸಾದ ಮಾಡಲಿ ಎಂದು? ದೇವರು ಏನನು- ಬಯಸುತ್ತಾರೋ ಅದನು- ಮಾಡುಲು ಆದೇಶಿಸುತ್ತಿದ್ದರಂತೆ'. ಆದರೆ ನನಗೆ ತಿಳಿದಿದ್ದು ಏನೆಂದರೆ ಶ್ರೀಸ್ವಾಮಿಗಳು ಇಂದೂ ಸಹ ಅದೇ ಪರಂಪರೆಯನು- ಮುಂದುವರೆಸುತ್ತಿದ್ದಾರೆ ಎಂದು. ಏಕೆಂದರೆ ಬಹುತೇಕ ಸಂದರ್ಭಗಳಲ್ಲಿ ಶ್ರೀಸ್ವಾಮಿಯವರೇ ಅನೇಕ ಪ್ರಸಾದಗಳನು- ಅಡುಗೆಮಾಡಲು ತರಬೇತಿ ಮಾಡಿದ್ದಾರೆ. ಯಾರಿಗೂ ಬಹಳ ಸುಲಭವಾಗಿ ಅರ್ಥವಾಗದ, ನೋಡಿರದ ಅಂಶವೆಂದರೆ ಶ್ರೀಮದಭಿನವ ವಾಗೀಶ ಮಹಾಸ್ವಾಮಿಗಳು ವೇದಾಂತಶಾಸ್ತ್ರದಲ್ಲಿ ಮಾತ್ರವಲ್ಲದೇ ಪಾಕಶಾಸ್ತ್ರದಲ್ಲಿಯೂ ಸಹ ಪ್ರವೀಣರು ಎಂಬುದು. ಪೂರ್ವಾಶ್ರಮದಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಅವರು ಅಡುಗೆಯನು- ಸಹ ಮಾಡಿದ್ದಾರೆ ಎಂಬುದು. ನಮ್ಮ ಸಂಪ್ರದಾಯಕ್ಕೆ ಮಹಾನಸೀ ಸಂಪ್ರದಾಯ ಎಂದೇ ಹೆಸರಲ್ಲವೇ? ಅದು ಈ ಘಟನೆಯನು- ಸಮರ್ಥಿಸುತ್ತದೆ. ನಮ್ಮ ಶ್ರೀರಾಮಾನುಜ ಸಂಪ್ರದಾಯದಲ್ಲಿ ಅನೇಕ ಸನ್ಯಾಸಿಗಳು ಪೂರ್ವಾಶ್ರಮದಲ್ಲಿ ಅದ್ಭುತ ಪಾಕಶಾಸ್ತ್ರ ಪ್ರವೀಣರಾಗಿದ್ದರು.

## ಶ್ರೀಸ್ವಾಮಿಗಳು ಮತ್ತು ಶ್ರೀಲಕ್ಷ್ಮೀಹಯಗ್ರೀವ ಕಾಲೇಜು

ಶ್ರೀಸ್ವಾಮಿಗಳು ಪಟ್ಟಕ್ಕೆ ಬಂದಾಗ ಅವರಿಗೆ ಎದುರಾದ ಹಲವಾರು ಸಮಸ್ಯೆಗಳಲ್ಲಿ ಕಲ್ಯಾಣಮಂಟಪದ ಸಮಸ್ಯೆಯೂ ಒಂದು. ಮೈಸೂರಿನ ದಿವಾನ್ಸ್ ರಸ್ತೆಯಲ್ಲಿ ಶ್ರೀಮಠದ ಕೈಂಕರ್ಯಪರರಿಗಾಗಿ ಒಂದು ವಸತಿಸಮುಚ್ಛಯ ಇತ್ತು. ಅಲ್ಲಿ ಹಲವಾರು ಕೈಂಕರ್ಯಪರರು ವಾಸಮಾಡುತ್ತಿದ್ದರು. ಹಿಂದಿನ ಸ್ವಾಮಿಗಳ ಕಾಲದಲ್ಲಿ ಅಲ್ಲಿ ಒಂದು ಸಮುದಾಯಭವನ ಅಥವಾ ಕಲ್ಯಾಣ ಮಂಟಪ ಕಟ್ಟಬೇಕೆಂದು ಅಪೇಕ್ಷಿಸಿದ್ದರು. ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರಸ್ವಾಮಿಗಳ ಕಾಲದಲ್ಲಿ ಆ ಕಟ್ಟಡ ಕಟ್ಟಲು ಆರಂಭಿಸಿದರು ಆದರೆ ಕಾರಣಾಂತರದಿಂದ ಅದು ಅರ್ಧಕ್ಕೆ ನಿಂತು ಹೋಯಿತು. ಕಾರಣಗಳಂತು ಹಲವಾರು ಇದ್ದವು. ಆ ಕಾರಣಗಳಿಗೆ ಏನಾದರೂ ಸಹಕಾರ ನೀಡಿದ್ದರೆ ಇಂದು ಆ ಜಾಗ ಮತ್ತು ಪರಕಾಲ ಮಠದ ಬೆಂಗಳೂರಿನ ಮೆಜೆಸ್ಟಿಕ್ ನಲ್ಲಿರುವ ಎರಡೂ ಜಾಗಗಗಳೂ ಇಂದು ಶ್ರೀಮಠದಿಂದ ದೂರವಾಗಿ ಬಿಡುತ್ತಿದ್ದವು. ಆದಾಗದಂತೆ ಶ್ರೀಸ್ವಾಮಿಗಳು ಎಚ್ಚರಿಕೆಯನು- ವಹಿಸಿ ಬಹಳ ಕಷ್ಟದಿಂದ ಈ ಕಟ್ಟಡವನು- ಪೂರ್ಣಗೊಳಿಸಲು ಯೋಚಿಸಿದರು. ಮೊದಲಿಗೆ ಈ ಕಟ್ಟಡದ ಎಲ್ಲಾ ಪತ್ರಗಳನು- ಸೂಕ್ಷ್ಮವಾಗಿ ಅವಲೋಕಿಸಿ ಅದರಲ್ಲಿದ್ದ ಯಾಜಮಾನ್ಯದ ತೊಂದರೆಗಳನು- ನಿವಾರಿಸಲಾಯಿತು. ನಂತರ ಸಿವಿಲ್ ವಾಸ್ತುತಂತ್ರಜ್ಞರಾದ (ಇಂಜಿನಿಯರ್) ಶ್ರೀಧರ್ ಅವರನು- ಕರೆಸಿ ಈ ಕಟ್ಟಡ ಸುಮಾರು ೧೫ ವರ್ಷಗಳಿಂದ ಅಪೂರ್ಣವಾಗಿ ನಿಂತಿದೆ ಆದ್ದರಿಂದ ಕಟ್ಟಡ ಮುಗಿಸಲು ಸಾಧ್ಯವೇ? ಅಥವಾ ಹೊಸದಾಗಿ ಆರಂಭಿಸಬೇಕೆ? ಅಥವಾ ಕಟ್ಟಡಕ್ಕೆ ಮತ್ತೆ ಏನಾದರೂ ತಂತ್ರಜ್ಞಾನ ಅಳವಡಿಸಿ ಕಡಿಮೆ ಖರ್ಚಿನಲ್ಲಿ ಮುಗಿಸಬಹುದೇ ಎಂದು ವಿಚಾರಿಸಿದರು. ನಿಮಗೆಲ್ಲ ಆಶ್ಚರ್ಯವಾಗಬಹುದು. ಆ ಕಟ್ಟಡವನು- ಪುನರ್ನಿಮಿಸಲು ಬೇಕಾದ ಸಿದ್ಧತೆಗಾಗಿ ಮತ್ತು ಒಟ್ಟು ಕಟ್ಟಡದ ವೆಚ್ಚು ಸುಮಾರು ೫೦ ಲಕ್ಷಕ್ಕಿಂತಲೂ ಹೆಚ್ಚಾಗುತ್ತಿತ್ತು. ಬೇರೆಯವರಾದರೇ ಸಾಕು ಆ ಕಟ್ಟಡದ ಸಹವಾಸ ಎನುತ್ತಿದ್ದರೆನೋ?

ಆದರೆ ಶ್ರೀಸ್ವಾಮಿಗಳು ದೃಢವಾಗಿ ಹೇಳಿದರು 'ಇದು ನನ- ಹಿಂದಿನ ಸ್ವಾಮಿಗಳ ಉದ್ದೇಶವಾಗಿತ್ತು. ಆದ್ದರಿಂದ ಅವರ ಆಶಯವನು- ಪೂರ್ಣಗೊಳಿಸುವುದೇ ನನ- ಧ್ಯೇಯ'. ಹೇಗಾದರೂ ಸರಿ ಶಿಷ್ಯ ಸಮೂಹದ ಸಹಾಯದಿಂದ ಈ ಕೆಲಸವನು- ಮಾಡಿ ಮುಗಿಸಲೇ ಬೇಕೆಂಬ ತೀರ್ಮಾನವನು- ಮಾಡಿದರು. ಸರಿ ಶ್ರೀಧರ್ ರವರನು- ಇಂಜಿನಿಯರ್ ನನಾಗಿ ನೇಮಿಸಲಾಯಿತು. ಮೊದಲು ಕಟ್ಟಡದ ಸ್ಟ್ರೆಂತ್ ಹೆಚ್ಚಿಸಲು ಹಲವಾರು ರೀತಿಯ ತಂತ್ರಜ್ಞಾನ ಅಳವಡಿಸಲಾಯಿತು ಮತ್ತು ಅದಕ್ಕಾಗಿ ಹೆಚ್ಚಿನ ಹಣವನು- ವ್ಯಯಿಸಲಾಯಿತು.

ಶ್ರೀಸ್ವಾಮಿಗಳು ನನಗೆ ಹೇಳುತ್ತಿದ್ದರು 'ನಮ್ಮ ಕೆಲಸಗಳ ಯಶಸ್ಸೇ ನಮ್ಮನು- ಟೀಕಿಸುವವರಿಗೆ ಉತ್ತರನೀಡುತ್ತದೆ'. ಈ ಕಟ್ಟಡ ಕಟ್ಟಿ ಮುಗಿಸುವಲ್ಲಿ ಸ್ವಾಮಿಗಳಿಗೆ ಆದ ತೊಂದರೆ ಅಷ್ಟಿಷ್ಟಲ್ಲ. ಆದರೂ ಸಹ ತಮ್ಮ ಹಿಂದಿನ ಸ್ವಾಮಿಗಳ ಸಂಕಲ್ಪವನು- ಪೂರ್ಣಗೊಳಿಸುವುದೇ ಶ್ರೀಸ್ವಾಮಿಗಳ ಪ್ರಮುಖ ಉದ್ದೇಶವಾಗಿತ್ತು.

ನನನು- ಕರೆದು 'ಆಂಧ್ರಪ್ರದೇಶದ ಬೇತಂ ಚರ್ಲಾ ಗೆ ಹೋಗಿ ಅಲ್ಲಿಂದ ಆ ಕಟ್ಟಡಕ್ಕೆ ಬೇಕಾದ ನೆಲಹಾಸುಕಲ್ಲುಗಳನು- (ಟೈಲ್ಸ್) ತರಲು ಹೇಳಿದರು. ನಾನು ಸ್ವಾಮಿಗಳೇ ನನಗೆ ಏನೂ ಗೊತ್ತಿಲ್ಲ ಎಂದೆ. ಅದಕ್ಕೆ ಅವರು ಏನೂ ಗೊತ್ತಾಗುವುದು ಬೇಕಿಲ್ಲ ಪ್ರಾಮಾಣಿಕತೆ ಇದ್ದರೆ ಸಾಕು ಎಲ್ಲಾ ಕೆಲಸಗಳು ಆಗುತ್ತವೆ ಎಂದು

ಹೇಳಿದ್ದಲ್ಲದೇ, ಸಾಕಷ್ಟು ಹಣವನು- ಸಹ ನನ- ಬಳಿ ನೀಡಿ ಮಠದ ಕೆಲಸವನು- ಮಾಡಲು ತಿಳಿಸಿದರು. ಇದನು- ನಾನು ಶ್ರೀಸ್ವಾಮಿಜೀಯವರ ಆಶೀರ್ವಾದ ಎಂದು ತಿಳಿದು ಕಾರ್ಯದರ್ಶಿಗಳಾದ ಶ್ರೀನಿವಾಸನ್, ಇಂಜಿನಿಯರ್ ಶ್ರೀಧರ್ ರವರ ಜೊತೆಯಲ್ಲಿ ಬೇತಂ ಚರ್ಲಾಗೆ ತೆರಳಿ ಅಲ್ಲಿಂದ ಕಲ್ಲುಗಳನು- ಖರೀದಿಸಿ ಬಂದೆ. ಇದಾದ ನಂತರ ಶ್ರೀಮಠದ ಭಕ್ತಾದಿಗಳ ಸಹಾಯದಿಂದ ಕಟ್ಟಡವು ಪೂರ್ಣಗೊಂಡಿತು. ಈ ಕಟ್ಟಡವು ಪೂರ್ಣಗೊಂಡ ಸಮಯದಲ್ಲಿ ಒಂದು ಸ್ಮರಣಸಂಚಿಕೆಯನು- ಸಹ ನಾವು ಬಿಡುಗಡೆ ಮಾಡಿದೆವು. ಅದಕ್ಕೂ ಸಹ ನನನೇ ಸಂಪಾದಕನನಾಗಿ ಆಯ್ಕೆಮಾಡಿದಾಗ ನಾನು ಹೇಳಿದೆ. ಸ್ವಾಮಿಗಳೇ ನಾನು ಅತ್ಯಂತ ಕಿರಿಯ ಎಲ್ಲರಿಗೂ ಬಹಳ ಬೇಸರವಾಗಬಹುದು ಎಂದೆ. ಅದಕ್ಕೆ ಸ್ವಾಮಿಗಳು ಹೇಳಿದರು ನೋಡು ಯಾರು ಕೆಲಸ ಮಾಡುತ್ತಾರೋ ಅವರ ಹೆಸರಿರಬೇಕೆ ಹೊರತು ಕೆಲಸಮಾಡದವರ ಹೆಸರಲ್ಲ ಎಂದು. ಈ ಸ್ಮರಣ ಸಂಚಿಕೆ ಅತ್ಯಂತ ಸುಂದರವಾಗಿ ಬಂತು ಶ್ರೀಯುತ ಡಾ. ವೆಂಕಟನಾಥನ್ ಸ್ವಾಮಿಗಳು, ಶ್ರೀ ಶ್ರೀಧರ್ ಮತ್ತು ಶ್ರೀ ರಾಮನ್ ಇವರು ಈ ಸಂದರ್ಭದಲ್ಲಿ ನಮಗೆ ಅತ್ಯಂತ ಹೆಚ್ಚು ಸಹಕಾರ ನೀಡಿದರು.

ಇದಾದ ನಂತರ ಈ ಕಟ್ಟಡವನು- ಶ್ರೀಲಕ್ಷ್ಮೀಹಯಗ್ರೀವ ಕಲ್ಯಾಣ ಮಂಟಪ ಎಂದು ಮಾಡಿ, ಮಂಗಳ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿತ್ತು. ಆದರೆ ಅನೇಕ ಕಾರಣಗಳಿಂದ ಈ ಕಲ್ಯಾಣಮಂಟಪ ಚೆನಾಗಿ ನಡೆಯಲಿಲ್ಲ. ಹಾಗಾಗಿ ಮುಂದೆ ಒಂದು ಶ್ರೀಬ್ರಹ್ಮತಂತ್ರಸ್ವಾಮಿಎಜುಕೇಷನಲ್ ಟ್ರಸ್ಟ್ ಮಾಡಿದ ಮೇಲೆ ಅದನು- ಶ್ರೀಯುತ ಪಿ.ಎಸ್. ರಮೇಶ್ ಮತ್ತು ವಕೀಲರಾದ ಶ್ರೀ ಶ್ರೀನಿವಾಸನ್ ಅವರ ಸಹಕಾರಗಳಿಂದ ಶ್ರೀಲಕ್ಷ್ಮೀಹಯಗ್ರೀವ ವಿದ್ಯಾಸಂಸ್ಥೆಯನಾಗಿ ಬದಲಾವಣೆ ಮಾಡಲಾಯಿತು. ಇಂದು ಈ ಸಂಸ್ಥೆ ಮೈಸೂರಿನ ಶ್ರೇಷ್ಠ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿದೆ. ಒಟ್ಟಿನಲ್ಲಿ ಈ ಕೆಲಸ ದೈವಪ್ರೇರಣೆಯಿಂದಲೇ ಮುಗಿಯಿತೇ ಹೊರತು ಇನಾಂಿದಲೂ ಅಲ್ಲ. ಶ್ರೀಸ್ವಾಮಿಗಳು ದೈವದ ಪ್ರತಿನಿಧಿಯಾಗಿರುವುದರಿಂದ ಅಷ್ಟು ತೊಂದರೆಗಳು ಉಂಟಾದರೂ ಈ ಕಾರ್ಯವನು- ಯಶಸ್ವಿಯಾಗಿ ಮುಗಿಸಿದರು. ಇಂದು ಇದು ಶ್ರೀಮಠದ ಹೆಸರಿಗೆ ಶ್ರೇಯಸ್ಸನು-ತರುವ ಒಂದು ಪ್ರಮುಖ ಸಂಸ್ಥೆಯಾಗಿ ಬೆಳೆದು ನಿಂತಿದೆ.

### ಶ್ರೀಸ್ವಾಮಿಗಳು ಮತ್ತು ಕೃಷ್ಣಾಪುರ

ಶ್ರೀಸ್ವಾಮಿಗಳಿಗೂ ಕೃಷ್ಣಾಪುರಕ್ಕೂ ಅತ್ಯಂತ ಅವಿನಾಭಾವ ಸಂಬಂಧ. ಶ್ರೀಸ್ವಾಮಿಗಳು ಎಂದೂ ಮರೆಯಲಾಗದ ಒಂದು ಪುಣ್ಯಕ್ಷೇತ್ರ ಕೃಷ್ಣಾಪುರ. ಅದು ದಿವ್ಯದೇಶವೂ ಅಲ್ಲ ಅಥವಾ ಪೌರಾಣಿಕ ಕ್ಷೇತ್ರವೂ ಸಹ ಅಲ್ಲದಿದ್ದರೂ ಪರಕಾಲಮಠದ ಪರಂಪರೆಯ ಸ್ವಾಮಿಗಳಿಗೆ ಹಾಗೂ ಪರಕಾಲಮಠದ ಶಿಷ್ಯಪರಂಪರೆಗೆ ಅದು ಪ್ರಮುಖವಾದ ಕ್ಷೇತ್ರ. ಇದು ತಿರುಮಲಕೂಡಲು ನರಸೀಪುರದಿಂದ ಸುಮಾರು ಹತ್ತು ಕಿಲೋಮೀಟರ್ ದೂರದಲ್ಲಿ ಕಾವೇರಿ ನದಿಯ ದಂಡೆಯಲ್ಲಿರುವ ಅತ್ಯಂತ ಪ್ರಶಾಂತವಾದ ಕ್ಷೇತ್ರ. ಇಲ್ಲಿನ ಪ್ರಮುಖವಾದ ದೈವ ಸಂತಾನಗೋಪಾಲಕೃಷ್ಣ. ಸುಂದರವಾದ ನಗುಮೊಗದ ಸಂತಾನಗೋಪಾಲಕೃಷ್ಣಸ್ವಾಮಿಯು ಇಲ್ಲಿ ಅತ್ಯಂತ ಸುಂದರವಾದ ಆದರೆ ಅಷ್ಟೇ ಭವ್ಯವಾದ ದೇವಾಲಯದಲ್ಲಿ ಸ್ಥಾಪಿತನಾಗಿದ್ದಾನೆ. ಇಲ್ಲಿ ಪರಕಾಲ ಮಠದ ಪರಂಪರೆಯ ಶ್ರೀರಾಮಾನುಜಬ್ರಹ್ಮತಂತ್ರಸ್ವಾಮಿಗಳು ಇಲ್ಲಿಯೇ ಶ್ರೀಪರಕಾಲಮಠವನು- ಸ್ಥಾಪಿಸಿಕೊಂಡು ಇಲ್ಲಿಯೇ ಬಹಳ

ದೀರ್ಘಕಾಲ ತಪಸ್ಸನು- ಮಾಡಿಕೊಂಡು ಮಠದ ಶಿಷ್ಯರನು- ಮುನೆಡೆಸುತ್ತಿದ್ದರು. ಅವರ ಬೃಂದಾವನವೂ ಸಹ ಇಲ್ಲಿಯೇ ಸ್ಥಾಪಿಸಲ್ಪಟ್ಟಿದ್ದು ಕಾವೇರಿ ನದಿಗೆ ಅಣೆಕಟ್ಟನು- ಕೆ.ಆರ್. ಎಸ್. ನಲ್ಲಿ ಕಟ್ಟುವ ಸಂದರ್ಭದಲ್ಲಿ ಹಳೆಯ ಊರು ಸಂಪೂರ್ಣವಾಗಿ ಜಲಾವೃತವಾಯಿತು. ಆದ್ದರಿಂದ ಹಳೆಯ ದೇವಾಲಯ ಮತ್ತು ಮಠಗಳು ಊರ ಹೊರಭಾಗದಲ್ಲಿ ಉಳಿದು ಬಿಟ್ಟಿದೆ. ಇಂದು ಹೊಸಕೃಷ್ಣಾಪುರವು ಹೊಸದಾದ ದೇವಾಲಯವನು- ಆದರೆ ಪ್ರಾಚೀನವಾದ ದೇವರ ಹಾಗೂ ಭಕ್ತವಿಗ್ರಹಗಳನು-ಒಳಗೊಂಡಿವೆ.

ಶ್ರೀಸ್ವಾಮಿಗಳ ಎರಡು ವಿಚಾರಗಳನು-ಇಲ್ಲಿ ನಾನು ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಒಂದು ಕೃಷ್ಣಾಪುರವನು-ಕಂಡರೆ ಸ್ವಾಮಿಗಳಿಗೆ ಅತ್ಯಂತ ಪ್ರೀತಿ. ಕಾರಣ ಏನೆಂದರೆ ಶ್ರೀಸ್ವಾಮಿಗಳು ಪೂರ್ವಾಶ್ರಮದಲ್ಲಿ ವೇಳೂರು ತಾತರಲ್ಲಿ ಮಂತ್ರಶಾಸ್ತ್ರವನು- ಅಭ್ಯಾಸಮಾಡಿದರು. ಆಗ ವೇಳೂರು ತಾತರವರು ಶ್ರೀಸ್ವಾಮಿಗಳಿಗೆ ಗರುಡಮಂತ್ರವನು- ಉಪದೇಶಮಾಡಿ ಅದನು- ಸಿದ್ಧಿಮಾಡಿಕೊಳ್ಳಲು ಹೇಳಿದರು. ಈ ಮಂತ್ರದ ಸಿದ್ಧಿಯನು- ಮಾಡಿಕೊಳ್ಳಲು ಶ್ರೀಸ್ವಾಮಿಗಳು ಆರಿಸಿಕೊಂಡ ಪ್ರದೇಶ ಎಂದರೆ ಅದು ಪ್ರಶಾಂತವಾದ ಪರಿಸರದಲ್ಲಿರುವ ಕೃಷ್ಣಾಪುರದ ಶ್ರೀರಾಮಾನುಜ ಬ್ರಹ್ಮತಂತ್ರಪರಕಾಲಸ್ವಾಮಿಗಳ ಬೃಂದಾವನದ ಪ್ರದೇಶ. ಅವರು ಈ ಜಾಗದಲ್ಲಿ ಬಹಳ ದೀರ್ಘಕಾಲ ಮಂತ್ರವನು-ಪುನರುಚ್ಚರಣೆ ಮಾಡಿ ಮಂತ್ರದ ಸಿದ್ಧಿಯನು-ಪಡೆಯುತ್ತಿರುವಾಗ ನಾಗರಹಾವೊಂದು ಸ್ವಾಮಿಜಿಯವರನು- ಕಚ್ಚಿಬಿಟ್ಟಿತು. ಸ್ವಾಮಿಗಳಿಗೆ ಮೈಯಲ್ಲಿ ನಡುಕ ಉಂಟಾಗಿ ವಿಷಪ್ರಭಾವವು ಹೆಚ್ಚಾಗಿ ಅವರು ಪರಮಪದಕ್ಕೆ ಸೇರಿಬಿಡುತ್ತಾರೆ ಎಂದು ಜನರೆಲ್ಲ ಆಡಿಕೊಳ್ಳುವ ಸ್ಥಿತಿ ಬಂದೊದಗಿತು. ಇಂತಹ ವಿಷಮ ಪರಿಸ್ಥಿತಿಯಲ್ಲೂ ಸಹ ಸ್ವಾಮಿಗಳು ಪ್ರಜ್ಞೆಯನು- ಕಳೆದುಕೊಳ್ಳಲಿಲ್ಲ ಮತ್ತು ಗಾರುಡಮಂತ್ರದ ಪುನರುಚ್ಚಾರಣೆಯನು- ಬಿಡಲಿಲ್ಲ. ಈ ಮಂತ್ರಪ್ರಭಾವದಿಂದ ಸ್ವಾಮಿಗಳು ಮತ್ತೆ ಸ್ವಸ್ಥರಾದರಲ್ಲದೇ, ಗಾರುಡಮಂತ್ರದ ಸಿದ್ಧಿಯನು- ಪಡೆದುಕೊಂಡರು. ಆದ್ದರಿಂದ ಸ್ವಾಮಿಗಳಿಗೆ ಇಂದಿಗೂ ಸಹ ಶ್ರೀರಾಮಾನುಜಬ್ರಹ್ಮತಂತ್ರಸ್ವತಂತ್ರಸ್ವಾಮಿಗಳ ಮೇಲೆ ಪರಮವಿಶ್ವಾಸ.

ಈಗಲೂ ಸಹ ಸ್ವಾಮಿಗಳಿಗೆ ಮನಸ್ಸಿನಲ್ಲಿ ಗೊಂದಲ ಉಂಟಾದರೇ, ಅಥವಾ ಮಠದಲ್ಲಿ ಯಾವುದೇ ಸಮಸ್ಯೆ ಉದ್ಭವಿಸಿದರೇ ಹಾಗೂ ಮಠದ ಶಿಷ್ಯರಲ್ಲಿ ಯಾರಿಗಾದರೂ ಸಮಸ್ಯೆ ಇದ್ದರೆ ಶ್ರೀಸ್ವಾಮಿಗಳು ಕೃಷ್ಣಾಪುರದ ಶ್ರೀರಾಮಾನುಜ ಬ್ರಹ್ಮತಂತ್ರಸ್ವಾಮಿಗಳ ಬೃಂದಾವನಕ್ಕೆ ಹೋಗಿ ಪೂಜೆ ಮಾಡುತ್ತಾರೆ ಮತ್ತು ಧ್ಯಾನಮಗ್ನರಾಗುತ್ತಾರೆ. ಶಿಷ್ಯರಿಗೂ ಅಲ್ಲಿ ಹೋಗಿ ಶ್ರೀರಾಮಾನುಜಬ್ರಹ್ಮತಂತ್ರಸ್ವಾಮಿಗಳ ಅನುಗ್ರಹ ಪಡೆಯುವಂತೆ ಹೇಳುತ್ತಾರೆ. ನಾನು ಸಹಶ್ರೀಸ್ವಾಮಿಗಳ ಜೊತೆಯಲ್ಲಿ ಅನೇಕ ಬಾರಿ ಆ ಪ್ರಶಾಂತ ಪರಿಸರಕ್ಕೆ ಹೋಗಿದ್ದೇನೆ ಮತ್ತು ಆ ಪ್ರದೇಶಕ್ಕೆ ಹೋದರೆ ಶ್ರೀಸ್ವಾಮಿಗಳ ಮುಖದಲ್ಲಿ ಹೆಚ್ಚುವ ಕಾಂತಿಯನು-ಗಮನಿಸಿದ್ದೇನೆ. ಈ ಅವಕಾಶ ಎಲ್ಲರಿಗೂ ಸಿಗಬೇಕು ಎಂದು ಆಶಿಸುತ್ತೇನೆ.

ಇನು- ಎರಡನೇ ವಿಷಯಕ್ಕಾಗಿ ನಾನು ಪ್ರಸ್ತಾಪಿಸುವುದು - ಶ್ರೀಸ್ವಾಮಿಗಳಿಗೆ ದಿನವೂ ಸಹ ಕೃಷ್ಣಾಪುರಕ್ಕೆ ಸಬಂಧಿಸಿದಂತೆ ಅನೇಕ ದೂರುಗಳು ಬರತೊಡಗಿದವು. ಆ ದೂರುಗಳ ಪ್ರಕಾರ ಕೃಷ್ಣಾಪುರದಲ್ಲಿರುವ ಶ್ರೀಮಠದ

ಕಟ್ಟದಲ್ಲಿ ಅಪೂರ್ವವಾದ ಕಂಬಗಳು, ತೊಲೆಗಳು (ತೇಗಿನ ಮರದಿಂದ ಮಾಡಿದ್ದು) ಕೋಟ್ಯಾಂತರ ರೂಪಾಯಿ ಬೆಲೆಬಾಳುತ್ತವೆ. ಆದರೆ ಶ್ರೀಮಠವು ಈಗ ಪಾಳು ಬಿದ್ದಿರುವುದರಿಂದ (ನಾನು ಮೊದಲೇ ಹೇಳಿದ ಹಾಗೆ ಹೊಸ ಊರು ನಿರ್ಮಾಣವಾದ ನಂತರ ಇದು ಪಾಳು ಬಿದ್ದಿದೆ - ಸುಮಾರು ೧೦೦ ವರ್ಷದಿಂದ) ಅದನು- ನೋಡಿಕೊಳ್ಳುತ್ತಿದ್ದ ವ್ಯಕ್ತಿ ದಿನವೂ ಒಂದು ತೊಲೆಯನು- ಮಾರಿಕೊಂಡು ಕುಡಿಯಲು ಆರಂಭಿಸಿ ಮಠವನು- ಹಾಳುಮಾಡಿದ್ದಾನೆ ಇನು- ಸ್ವಲ್ಪ ದಿನ ಬಿಟ್ಟರೂ ಯಾವುದೇ ತೊಲೆಯು ಅಲ್ಲಿ ಉಳಿಯುವುದಿಲ್ಲ ಎಂದು. ಇದನು- ಗಂಭೀರವಾಗಿ ಪರಿಗಣಿಸಿದ ಶ್ರೀಸ್ವಾಮಿಗಳು ಇದರ ಬಗ್ಗೆ ಗಮನ ಹರಿಸುವಂತೆ ಕೃಷ್ಣಾಪುರದ ಅನೇಕ ಶಿಷ್ಯರಿಗೆ ಹೇಳಿದರು ಆದರೆ ಅವರು ಇದನು- ಪರಿಗಣಿಸಲಿಲ್ಲ. ಈ ಸಮಯದಲ್ಲಿ ನನಗೆ ಮತ್ತು ಕಾರ್ಯದರ್ಶಿಗಳಾದ ಶ್ರೀನಿವಾಸನ್ ರವರಿಗೆ ಇದರ ಬಗ್ಗೆ ಗಮನಹರಿಸಿ ವರದಿ ನೀಡಲು ತಿಳಿಸಿದರು. ಅದರಂತೆ ನಾವು ಅಲ್ಲಿಗೆ ಹೋದಾಗ ತಿಳಿದು ಬಂದಿದ್ದೆಂದರೆ, ಶ್ರೀಮಠಕ್ಕೆ ಸೇರಿದ ಸುಮಾರು ೨೦ ಕುಂಟೆ ಜಮೀನು ಮತ್ತು ಮಠ ನಮಗೆ ಸೇರಿದ್ದಾಗಿದೆ ಹಾಗೂ ಅಲ್ಲಿ ಈಗಾಗಲೇ ತೊಲೆಗಳು ಕಣ್ಮರೆಯಾಗಿ ಕೇವಲ ಕೇಲವು ಮಾತ್ರ ಉಳಿದಿದೆ. ಅಷ್ಟೇ ಅಲ್ಲದೇ ಶ್ರೀಮಠದ ಪಾಳುಬಿದ್ದ ಆವರಣದಲ್ಲಿ ಜೂಜು, ಹೆಂಡ ಮತ್ತು ಅಸಹ್ಯ, ಅನೈತಿಕ ಕೆಲಸಗಳು ರಾಜಾರೋಷವಾಗಿ ನಡೆಯುತ್ತಿದೆ. ಹಾಗೂ ಶ್ರೀರಾಮಾನುಜಬ್ರಹ್ಮತಂತ್ರಸ್ವತಂತ್ರಸ್ವಾಮಿಯ ಬೃಂದಾವನದ ಸಮೀಪ ಎರಡು ಎಕರೆ ಮಾವಿನ ತೋಪು ಮತ್ತು ಬೃಂದಾವನ ನಮಗೆ ಸೇರಿದ್ದು ಅದೂ ಸಹ ಶಿಥಿಲವಾಗಿದೆ. ಈ ವರದಿಯನು- ನಾನು ಶ್ರೀಸ್ವಾಮಿಗಳಿಗೆ ತಿಳಿಸಿದಾಗ ಅವರು ಮಠದಲ್ಲಿ ಹಿರಿಯರ ಜೊತೆ ಚರ್ಚಿಸಿ ಕೃಷ್ಣಾಪುರದಲ್ಲಿರುವ ಮಠದಲ್ಲಿದ್ದ ಮರಗಳನು- ಉಳಿಸಲು ನಿರ್ಧರಿಸಿದರು ಹಾಗೂ ಆ ಮರಗಳನು- ಹಯಗ್ರೀವಕಲ್ಯಾಣ ಮಂಟಪದ ನಿರ್ಮಾಣಕ್ಕೆ ಬಳಸಿಕೊಳ್ಳಲು ತಿಳಿಸಿದರು. ಅದರಂತೆ ನಾನು, ಕಾರ್ಯದರ್ಶಿಗಳು, ಶ್ರೀರಾಮನಾಥನ್ ಮುಂತಾದವರು ಆ ಮರವನು- ತರಲು ಹೋದಾಗ ಅಲ್ಲಿನ ಜನ ನಮಗೆ ಹೊಡೆಯಲು ಸಹ ಬಂದರು. ನೋಡಿ ಹೇಗಿದೆ ಕಾಲ ಮಠದ ಆಸ್ತಿಯನು- ಕಾಪಾಡಲು ಹೋದರೆ ನಮಗೆ ಬೆದರಿಕೆ! ಕಡೆಗೆ ಅವರಿಗೆ ತಿಳುವಳಿಕೆ ಹೇಳಿ ಶ್ರೀಮಠದ ಮರಗಳನು- ಉಳಿಸಲಾಯಿತು.

ಇಂದಿಗೂ ಸಹ ಕೃಷ್ಣಾಪುರದಲ್ಲಿ ಆ ಜಮೀನು ಇದ್ದು ಶ್ರೀಮಠದ ಹೆಸರಿಗೆ ಖಾತೆಯನು- ವರ್ಗಾಯಿಸಲಾಗಿದೆ. ಬಿಟ್ಟಿದ್ದರೆ ಆ ಆಸ್ತಿ ಇಂದು ಮಠದ ಹೆಸರಿನಲ್ಲಿ ಇರುತ್ತಿರಲಿಲ್ಲ ಏಕೆಂದರೆ ಆ ಮಠದ ಆಸ್ತಿಯ ಬಗ್ಗೆ ಈ ಹಿಂದೆ ೧೦೦ ವರ್ಷಗಳ ಹಿಂದೆ ಮಾತ್ರ ಪ್ರಯತಮಾಡಲಾಗಿತ್ತು. ಆದರೆ ಈ ಸ್ವಾಮಿಗಳ ಕಾಲದಲ್ಲಿ ಕೃಷ್ಣಾಪುರದ ಆಸ್ತಿಯನು- ರಕ್ಷಿಸಲಾಗಿದೆ.

ಇದು ಏನೇ ಆಗಲಿ ಮತ್ತೊಂದು ಮುಖ್ಯವಾದ ಅಂಶವೆಂದರೆ ಶ್ರೀಸ್ವಾಮಿಗಳು ತಪ್ಪದೇ ಕೃಷ್ಣಾಪುರದ ರಥೋತ್ಸವದ ದಿನ ಬಿಜಯಮಾಡಿ ದೇವರ ಹಾಗೂ ಶ್ರೀರಾಮಾನುಜಬ್ರಹ್ಮತಂತ್ರಸ್ವಾಮಿಗಳ ದರ್ಶನಪಡೆದೇ ಪಡೆಯುತ್ತಾರೆ.

ತುಂಬಾ ಸಂಕಟದಿಂದ ಹೇಳುವುದು ಏನೆಂದರೆ ಇಂದು ಅಲ್ಲಿನ ಅಗ್ರಹಾರದಲ್ಲಿ ಯಾವ ಶ್ರೀವೈಷ್ಣವರೂ ಇಲ್ಲದೇ ಸಂತಾನಗೋಪಾಲಕೃಷ್ಣನ ಹಾಗೂ ರಾಮಾನುಜಬ್ರಹ್ಮತಂತ್ರಸ್ವಾಮಿಗಳ ಬೃಂದಾವನದ ನಿತ್ಯಪೂಜೆಗೂ ಸಹ ಕಷ್ಟವಾಗಿದೆ.

**ಶ್ರೀಸ್ವಾಮಿಗಳು ಮತ್ತು ಶ್ರೀರಂಗಪಟ್ಟಣದ ಕೊಪ್ಪಲು ಮಠ**

ಶ್ರೀಸ್ವಾಮಿಗಳು ಪ್ರತಿವರ್ಷ ತಪ್ಪದೇ ಭೇಟಿ ನೀಡಲೇ ಬೇಕಾದ ಮತ್ತೊಂದು ಪ್ರದೇಶವೆಂದರೆ ಅದು ಶ್ರೀರಂಗಪಟ್ಟಣದ ಬಳಿ ಇರುವ ಮೂಲ ಮಠ ಅಥವಾ ಕೊಪ್ಪಲು ಮಠ. ಇದು ಶ್ರೀರಂಗಪಟ್ಟಣದ ಬಳಿ ಇರುವ ವೆಲ್ಲೆಸ್ಲಿ ಸೇತುವೆಯ ಪಕ್ಕದಲ್ಲಿ ನದಿಯ ಎಡದಂಡೆಯಲ್ಲಿದೆ. ಇದು ಕೊಪ್ಪಲು ಎನುವ ಗ್ರಾಮದಲ್ಲಿರುವುದರಿಂದ ಇಂದು ಅದನು- ಕೊಪ್ಪಲು ಮಠ ಎಂದು ಕರೆಯುತ್ತಾರೆ. ಮಠದ ಸುತ್ತಲೂ ಸುಮಾರು ೨ ಎಕರೆಯಷ್ಟು ಜಾಗವನು- ಇಂದು ಶ್ರೀಸ್ವಾಮಿಗಳ ಕಾಲದಲ್ಲಿ ರಕ್ಷಿಸಲಾಗಿದೆ. ಇಲ್ಲದಿದ್ದರೇ ಈ ಮಠ ಮತ್ತು ಭೂಮಿ ಪರಭಾರೆಯಾಗಿರುತ್ತಿತ್ತು. (ಒಂದು ಎಕರೆ ಮೊದಲೆ ಪರಭಾರೆಯಾಗಿತ್ತು ಒಟ್ಟು ೩ ಎಕರೆ ಪ್ರದೇಶವಿತ್ತು). ಈ ಕೊಪ್ಪಲು ಮಠದ ಭೂಮಿಯಲ್ಲಿ ಸುಮಾರು ೨೦೦ಕ್ಕೂ ಹೆಚ್ಚು ತೆಂಗಿನಮರಗಳಿದ್ದು ಇಂದಿಗೂ ಸಹ ಮಠದ ಅಡಿಗೆಗೆ ಈ ಕೊಪ್ಪಲು ಮಠದ ತೆಂಗಿನಕಾಯಿಗಳನೇ ಬಳಸಲಾಗುತ್ತಿದೆ. ಇಲ್ಲಿ ಮೂರು ಬೃಂದಾವನಗಳು ಮತ್ತು ಒಂದು ಸುಂದರವಾದ ಮಠವಿದೆ.

ಶ್ರೀಸ್ವಾಮಿಗಳು ಚಾತುರ್ಮಾಸವ್ರತವನು- ಸಮಾಪನ ಮಾಡುವುದು ಇಲ್ಲಿಯೇ ಆದ್ದರಿಂದ ಪರಂಪರೆಯಂತೆ ಚಾತುರ್ಮಾಸ ವ್ರತದ ಕೊನೆಯ ದಿನ ಶಿಷ್ಯರೊಂದಿಗೆ ಹಾಗೂ ಶ್ರೀಮಠದ ಹಯಗ್ರೀವದೇವರೊಂದಿಗೆ ಬ್ರಾಹ್ಮಿಮಹೂರ್ತದಲ್ಲಿ ನದಿಯನು- ದಾಟಿ ಇಲ್ಲಿಗೆ ಬಂದು ಸೇರುತ್ತಾರೆ. ಶಾಸ್ತ್ರಗಳ ಪ್ರಕಾರ ಚಾತುರ್ಮಾಸವ್ರತದಲ್ಲಿರುವ ಯತಿಗಳು ನದಿಯನು- ದಾಟಿ ಮತ್ತೊಂದು ಕಡೆ ಹೋಗಬಾರದು. ಆದ್ದರಿಂದ ಮಠದ ಪರಂಪರೆಯಂತೆ ಮೈಸೂರಿನ ಪರಕಾಲಮಠದಲ್ಲಿ ಚಾತುರ್ಮಾಸ್ವವ್ರತವನು- ಕೈಗೊಂಡರೆ ಕಾವೇರಿನದಿಯನು-ಅವರು ದಾಟುವುದಿಲ್ಲ. ಹಾಗಾಗಿ ವ್ರತಸಮಾಪನದ ದಿನ ಸೀಮೋಲ್ಲಂಘನಕ್ಕಾಗಿ ಈ ಮಠಕ್ಕೆ ದಯಮಾಡಿಸುತ್ತಾರೆ. ಅಂದು ಬೆಳಿಗ್ಗೆಯೇ ಬಂದು ಪವಿತ್ರವಾದ ಕಾವೇರಿ ನದಿಯಲ್ಲಿ ಸಾನಮಾಡಿ ನಂತರ ಶ್ರೀಕೊಪ್ಪಲು ಮಠದಲ್ಲಿ ಹಯಗ್ರೀವ ಆರಾಧನೆಯನು- ಮುಗಿಸಿ, ಅಲ್ಲಿನ ಮಠದ ಹಯಗ್ರೀವದೇವರಿಗೆ ಹಾಗೂ ಬೃಂದಾವನಗಳಿಗೆ ಪೂಜೆ ಸಲ್ಲಿಸುತ್ತಾರೆ. ನಂತರ ಮೈಸೂರು ನಗರಕ್ಕೆ ಬಂದು ಸೇರುತ್ತಾರೆ. ಇಲ್ಲಿಗೆ ಚಾತುರ್ಮಾಸ ಮುಗಿಯುತ್ತದೆ.

ವಿಶೇಷಾಂಶವೆಂದರೆ ಮೊದಲು ಸ್ವಾಮಿಗಳು ಪಲ್ಲಕಿಯಲ್ಲಿ ಇಲ್ಲಿಗೆ ಬರುತ್ತಿದ್ದರು ಮರಳಿ ಹೋಗುವಾಗ ಮೈಸೂರಿನ ಮಹಾರಾಜರು ಮೈಸೂರಿನ ಹೆಬ್ಬಾಗಿಲಿಗೆ ಬಂದು ಚತುರಂಗಬಲದ ಸಮೇತ ಸ್ವಾಮಿಗಳನು- ಸ್ವಾಗತಿಸುತ್ತಿದ್ದರು ಆದರೆ ಇಂದು ಪ್ರಜಾಪ್ರಭುತ್ವದ ಈ ಕಾಲದಲ್ಲಿ ಆ ರೀತಿಯ ವೈಭವಗಳು ಇಲ್ಲದಿದ್ದರೂ ಸಹ

ಶ್ರೀಸ್ವಾಮಿಗಳು ಧಾರ್ಮಿಕವಾದ ಆಚರಣೆಗಳನು- ಮಾತ್ರ ಬಿಡದೆ ರಕ್ಷಿಸುತ್ತಿದ್ದಾರೆ. ಆದ್ದರಿಂದಲೇ ನನಗೆ ಸ್ವಾಮಿಗಳ ಮೇಲೆ ಅಪಾರವಾದ ಅಭಿಮಾನ ಮೂಡಿ ಬರುತ್ತದೆ.

**ಶ್ರೀಸ್ವಾಮಿಗಳು ಹಾಗೂ ವಿದ್ವತ್‌ಸಭೆ**

ಶ್ರೀಮಠದ ವಿಶೇಷತೆ ಎಂದರೆ ಮಠದಲ್ಲಿ ನಡೆಯುತ್ತಿರುವ ವಿದ್ವತ್ ಸದಸ್ಸು. ಈ ಹಿಂದೆ ಶ್ರೀಮದಭಿನವ ರಂಗನಾಥ ಮಹಾದೇಶಿಕರ ಕಾಲದಲ್ಲಿ ವೇದಾಂತದೇಶಿಕವಿಹಾರ ಸಭೆಯನು- ಆರಂಭಿಸಲಾಯಿತು. ವೇದಾಂತದೇಶಿಕರ ತಿರುನಕ್ಷತ್ರ ಕಾಲದಲ್ಲಿ ಪ್ರತಿದಿನವೂ ಶ್ರೀಮಠದಲ್ಲಿ ವೇದವೇದಾಂತಶಾಸ್ತ್ರಗಳ ವಿದ್ವತ್ ಸಭೆಯನು- ನಡೆಸಲಾಗುತ್ತಿತ್ತು. ಶ್ರೀಸ್ವಾಮಿಗಳು ಪಟ್ಟಾಭಿಷಿಕ್ತರಾದಮೇಲೆ ಈ ಪರಂಪರೆಯನು- ಅತ್ಯಂತ ಶ್ರದ್ಧೆಯಿಂದ ಮುಂದುವರೆಸಲು ಶ್ರೀಸ್ವಾಮಿಗಳು ಸಂಕಲ್ಪಿಸಿದರು. ಆದರೆ ಶ್ರೀಮಠದ ಆರ್ಥಿಕ ಪರಿಸ್ಥಿತಿ ಅನುಕೂಲಕರವಾಗಿಲ್ಲದಿದ್ದರೂ ಸಹ ಈ ಹಿಂದೆ ಮಠದಲ್ಲಿ ವಿದ್ವಾಂಸರಿಗೆ ನೀಡುತ್ತಿದ್ದ ವಿದ್ವತ್ ಸಂಭಾವನೆಯನು- ಕಡಿಮೆ ಮಾಡದೇ ಈ ಹಿಂದಿಗಿಂತಲೂ ಹೆಚ್ಚು ಸಂಭಾವನೆಯನು- ನೀಡುತ್ತಾ ವಿದ್ವತ್ ಸಭೆಯನು- ಮುಂದುವರೆಸಿರುವುದು ಸ್ವಾಮಿಗಳಿಗಿರುವ ವಿದ್ವದಭಿಮಾನ ಹಾಗೂ ಮಠದ ಪರಂಪರೆಯನು- ರಕ್ಷಿಸಲು ಮಾಡುವ ಪ್ರಯತ- ನಾನಂತೂ ಈ ವಿದ್ವತ್ ಸಭೆಗಳಲ್ಲಿ ನೇರವಾಗಿ ಭಾಗವಹಿಸುತ್ತಿದೆ ಮತ್ತು ಅದನು- ನಡೆಸುವುದಕ್ಕಾಗಿ ವಿದ್ವಾಂಸರನು- ಸ್ವತಃ ಪರಕಾಲ ಮಠದ ವಾಹನದಲ್ಲಿ ಕರೆತರುತ್ತಿದೆ. ಈ ವಿದ್ವತ್ ಸಭೆಯಲ್ಲಿ ಮುಖ್ಯವಾಗಿ ನಾಲ್ಕು ವೇದಗಳು, ಅದ್ವೈತ, ವಿಶಿಷ್ಟಾದ್ವೈತ, ದ್ವೈತ ವೇದಾಂತ, ಪಾಂಚರಾತ್ರ, ವೈಖಾನಸ ಆಗಮಗಳು, ಜ್ಯೋತಿಷ್ಯದ ಬಗ್ಗೆ ವಿದ್ವಜ್ಜನರ ವೇದಾಂತ ಚರ್ಚೆ ನಡೆಯುತ್ತಿತ್ತು. ನಾನು ಈ ವಿದ್ವತ್ ಸಭೆಗಳಲ್ಲಿ ಭಾಗವಹಿಸಿದ ಕೆಲವು ಸ್ವಾಮಿಗಳು ಮತ್ತು ವಿದ್ವಜ್ಜನರನು-ನೆನಪಿಸಿಕೊಳ್ಳುತ್ತೇನೆ.

ಶ್ರೀಪರಕಾಲಸ್ವಾಮಿಗಳು, ಶ್ರೀರಂಗಪ್ರಿಯಮಹಾಸ್ವಾಮಿಗಳು ಇವರ ಅಧ್ಯಕ್ಷತೆಯಲ್ಲಿ ವಿದ್ವತ್ ಗೋಷ್ಠಿ ನಡೆಯುತ್ತಿದ್ದು, ಇದರ ಮೇಲ್ವಿಚಾರಣೆಯನು- ಶ್ರೀಮಠದ ಶ್ರೀಕಾರ್ಯಕರ್ತರಾದ ಶ್ರೀ. ಎ. ಎಸ್ ವೆಂಕಟನಾಥನ್ ನಡೆಸುತ್ತಾರೆ. ಈ ವಿದ್ವತ್ ಸಭೆಯಲ್ಲಿ ಕಂಚಿಶ್ರೀವಾದಕೇಸರೀ ಅಳಹಿಯಮಣವಾಳ ಸ್ವಾಮಿಗಳು, ಶ್ರೀಆಂಡವನ್ ಸ್ವಾಮಿಗಳು, ಶ್ರೀಯದುಗಿರಿಯತಿರಾಜಸ್ವಾಮಿಗಳು, ಶ್ರೀಅಳಹಿಯಶಿಂಗರ್ ಸ್ವಾಮಿಗಳು, ಮಾಧ್ವಮಠದ ಶ್ರೀಭಿಮನಕೊಲ್ಲಿ ಸ್ವಾಮಿಗಳು, ಶ್ರೀವಿಲ್ಲಿಪುತ್ತೂರುವರವರಮುನಿಸ್ವಾಮಿಗಳು ಹಾಗೂ ವಿದ್ವಾಂಸರಾದ ಕೆ.ಎಸ್. ವರದಾಚಾರ್ಯರು, ದಿ. ಈ.ಎಸ್. ವರದಾಚಾರ್ಯರು, ದಿ. ಎಸ್.ಎಮ್. ವರದಾಚಾರ್ಯರು (ವರದತ್ರಯ), ದಿ. ಆತ್ಮಕೂರು ವೇಂಕಟನಾಥಾಚಾರ್ಯರು (ಕೃಷ್ಣಯಜುರ್ವೇದ ಘನಪಾಠೀ), ದಿ. ಶ್ರೀಕೃಷ್ಣಜೋಯಿಸರು (ಜ್ಯೋತಿಷ್ಯ ಮತ್ತು ಅರಮನೆ ಧರ್ಮಾಧಿಕಾರಿ), ದಿ. ಮೇಲುಕೋಟೆಯ ಮಂತ್ರಮೂರ್ತಿ ಸುದರ್ಶನನರಸಿಂಹಾಚಾರ್ಯರು (ಮಂತ್ರಶಾಸ್ತ್ರ), ಮೇಲುಕೋಟೆಯ ಅರೆಯರ್ ಶ್ರೀರಾಮಶರ್ಮ (ವೇದಾಂತ - ತರ್ಕ), ಶ್ರೀಗಂಗಾಧರಭಟ್ಟರು (ಅದ್ವೈತ ವೇದಾಂತ), ಶ್ರೀಮಾಧವನ್ (ಆಂಡವನ್ ಆಶ್ರಮ), ಮೇಲುಕೋಟೆಯ ಶ್ರೀ ಭಾ.ವಂ. ರಾಮಪ್ರಿಯ, ಶ್ರೀ ಎಂ.ಎ. ಆಳ್ವಾರ್ (ಇಬ್ಬರೂ ವೇದಾಂತ ಮತ್ತು ತರ್ಕ), ದಿ. ಶ್ರೀನರಸಿಂಹ ಭಟ್ಟರ್, ಶ್ರೀಪಾರ್ಥಸಾರಥಿಭಟ್ಟರ್,

ಶ್ರೀಧರ ಭಟ್ಟರ್ (ಮೂವರು ಪಾಂಚರಾತ್ರಾಗಮಿಕರು), ಶ್ರೀರಾಮನ್ (ತರ್ಕ) ಶ್ರೀಚಕ್ರವರ್ತಿ ರಾಮಚಂದ್ರ (ಮೀಮಾಂಸಶಾಸ್ತ್ರ - ವೇದಾಂತ), ಶ್ರೀವೆಂಕಟಾಚಾರಿ (ವೇದಾಂತ-ವ್ಯಾಕರಣ) (ಮಹಾರಾಜಸಂಸ್ಕೃತಕಾಲೇಜಿನ ಹಿಂದಿನ ಪ್ರಾಂಶುಪಾಲರು ಮತ್ತು ಈಗ ಶ್ರೀಮಠದಲ್ಲಿ ಆರಾಧಕರು), ಶ್ರೀವೀರರಾಘವಾಚಾರ್ಯ (ಈಗ ಮಠದ ಆರಾಧಕರು - ವೇದಾಂತ), ಶ್ರೀ ಎಸ್. ವೀರರಾಘವಾಚಾರ್ಯ (ವೇದಾಂತ), ದಿ. ಶ್ರೀತಿರುಕ್ಕಣ್ಣಮಂಗೈ ಸ್ವಾಮಿ (ಮಠದ ಆರಾಧಕರಾಗಿದ್ದವರು) ದಿ. ನಾಟ್ಟೇರಿ ರಾಘವಾಚಾರ್ಯ ಸ್ವಾಮಿ (ಮಠದಲ್ಲಿ ಆರಾಧಕರಾಗಿದ್ದರು ಮತ್ತು ದಿವ್ಯಪ್ರಬಂಧ ವಿಶೇಷಜ್ಞರು) ಮುಂತಾದ ವಿದ್ವಾಂಸರ ಜೊತೆಗೆ ಅನೇಕ ವಿದ್ಯಾರ್ಥಿಗಳು ಪಾಲ್ಗೊಂಡು ಅಲ್ಲಿಯೇ ಅವರಿಗೆ ವೇದ-ದಿವ್ಯಪ್ರಬಂಧ ಮತ್ತು ಶಾಸ್ತ್ರಗಳಲ್ಲಿ ಪರೀಕ್ಷೆ ನಡೆಸಿ ಪಾರಿತೋಷಕ ಮತ್ತು ಪ್ರಮಾಣಪತ್ರಗಳನು-ನೀಡಲಾಗುತ್ತಿತ್ತು. ಇಂದೂ ಸಹ ಈ ವಿದ್ವತ್ ಸಭೆ ನಡೆದು ಬರುತ್ತಿದೆ.

### ಶ್ರೀಸ್ವಾಮಿಗಳು ಮತ್ತು ತೂಪ್ಪುಲ್ ವೇದಾಂತದೇಶಿಕರ ಸನಿಧಿ

ಪ್ರತಿವರ್ಷವೂ ಸಹ ನನಗೆ ಕಾಂಚೀಪುರಕ್ಕೆ ಹೋಗುವೆಂದರೆ ತುಂಬಾ ಸಂತಸವಾಗುತ್ತಿತ್ತು. ಏಕೆಂದರೆ ಅಲ್ಲಿ ಶ್ರೀಮಠಕ್ಕೆ ಸೇರಿದ ವೇದಾಂತದೇಶಿಕರ ಅವತಾರಸ್ಥಳವಾದ ತೂಪ್ಪುಲ್ ನಲ್ಲಿ ಶ್ರೀಪರಕಾಲಮಠಕ್ಕೆ ಸಂಬಂಧಿಸಿದ ಶಾಖಾಮಠವಿದೆ. ವೇದಾಂತದೇಶಿಕರ ತಿರುಮಾಳಿಗೈ ಪಕ್ಕದಲ್ಲಿಯೇ ಈ ಮಠವಿದ್ದು, ಪ್ರತಿವರ್ಷ ಮಠದ ವತಿಯಿಂದ ರಾಮಾನುಜ ದಯಾಪಾತ್ರದ ಉತ್ಸವವು ನೆರವೇರುತ್ತದೆ. ಈ ಉತ್ಸವವನು- ಅದ್ದೂರಿಯಿಂದ ಶ್ರೀಮಠದವರೇ ಆಚರಿಸುತ್ತಾರೆ. ಈ ಶಾಖಾಮಠವು ಶ್ರೀಸ್ವಾಮಿಗಳು ಪಟ್ಟಕ್ಕೆ ಬರುವ ಮೊದಲು ಜೀರ್ಣಾವಸ್ಥೆಗೆ ತಲುಪಿತ್ತು. ಹಿಂದಿನ ದಿನಗಳಲ್ಲಿ ನಡೆಯುತ್ತಿದ್ದ ಉತ್ಸವಗಳೂ ಸಹ ಅಷ್ಟೊಂದು ವೈಭವಯುತವಾಗಿ ನಡೆಯುತ್ತಿರಲಿಲ್ಲ. ಒಂದು ಕಾಲಕ್ಕೆ ನಡೆಯುತ್ತಿದ್ದ ವೈಭವಗಳು ಕ್ರಮೇಣ ಮಂಕಾಗಿದ್ದವು. ಈ ಪರಿಸ್ಥಿತಿಯಲ್ಲಿ ಶ್ರೀಸ್ವಾಮಿಗಳು ಪಟ್ಟಕ್ಕೆ ಬಂದಮೇಲೆ ಈ ಉತ್ಸವವನು- ವೈಭವದಿಂದ ನಡೆಸಲು ತೀರ್ಮಾನಿಸಿ ಮಠದ ಕಾರ್ಯದರ್ಶಿಗಳಾದ ಶ್ರೀನಿವಾಸನ್, ನಾನು ಮತ್ತು ಅಲ್ಲಿ ಕೈಂಕರ್ಯಕ್ಕಾಗಿ ಶ್ರೀಮಠದ ಅಡುಗೆಯವರನು- ಕಳುಹಿಸುತ್ತಿದ್ದರು. ಹಾಗಾಗಿ ನಾನು ಉತ್ಸಾಹ ದಿಂದ ಶ್ರೀಮಠದ ವಾಹನವನು- ಚಲಾಯಿಸಿಕೊಂಡು ಈ ಉತ್ಸವಕ್ಕೆ ಹೋಗಿ ಭಾಗವಹಿಸುತ್ತಿದ್ದೆ. ಅಲ್ಲಿನ ಎಲ್ಲಾ ಭಕ್ತರೂ, ಕೈಂಕರ್ಯಪರರೂ ಸಹ ಹೇಳುತ್ತಿದ್ದರು ಮಠಕ್ಕೆ ಶ್ರೀಮದಭಿನವ ವಾಗೀಶ ಸ್ವಾಮಿಗಳು ಬಂದ ನಂತರ ಉತ್ಸವ ವೈಭವದಿಂದ ನಡೆಯುತ್ತಿದೆ. ಚಿನಚ ಪಲ್ಲಕ್ಕಿಯಲ್ಲಿ ಶ್ರೀವೇದಾಂತದೇಶಿಕರನು- ಕಂಚಿ ವರದರಾಜರ ದೇವಾಲಯಕ್ಕೆ ವೈಭವದಿಂದ ಮೆರವಣಿಗೆ ಮಾಡಲಾಗುತ್ತಿದೆ ಎಂದು. ಅಷ್ಟೇ ಅಲ್ಲದೇ ಶ್ರೀಸ್ವಾಮಿಗಳು ಕಂಚಿದೇವಾಧಿರಾಜ ಸ್ವಾಮಿ ದೇವಾಲಯದಲ್ಲಿ ಮಂಗಳಾಶಾಸನಕ್ಕೆ ದಯಮಾಡಿಸಿದಾಗ ಹಾಗೆಯೇ ಶ್ರೀತೂಪ್ಪುಲ್ ವೇದಾಂತದೇಶಿಕರ ಸನಿಧಿಗೂ ಮಂಗಳಶಾಸನ ಮಾಡಿ ತೂಪ್ಪುಲ್ ಮಠದಲ್ಲಿಯೇ ವಾಸ್ತವ್ಯಮಾಡಿದ್ದರು. ಈ ಎಲ್ಲಾ ನೆನಪುಗಳೂ ಸಹ ನನಗೆ ಚೆನಾಗಿ ಉಂಟು. ಈ ಸಮಯದಲ್ಲಿ ಮಠದ ಜೀರ್ಣಾವಸ್ಥೆಯನು- ನೋಡಿದ ಸ್ವಾಮಿಗಳು ಈ ಮಠವನು- ಅತ್ಯಂತ ವೈಭವಯುತವಾಗಿ ಮಾಡಬೇಕೆಂದು ತೀರ್ಮಾನಿಸಿ ಈಗ ಜೀರ್ಣೋದ್ಧಾರ ಮಾಡಿದ್ದಾರೆ. ಹೀಗೆ ಶ್ರೀಸ್ವಾಮಿಗಳ ದೃಷ್ಟಿದೆ ಗೋಚರವಾದ ಯಾವ ವಿಚಾರಗಳೂ ಸಹ ಉನತಿಯನು- ಹೊಂದುತ್ತವೆ. ಇದು ಅವರ ತಪಃ ಪ್ರಭಾವ.

ನಿಮಗೆಲ್ಲ ತಿಳಿದಿರುವಂತೆ ಶ್ರೀಮಠಕ್ಕೆ ಶ್ರೀತೂಪ್ಪುಲ್ ತಾಯಿಯ ಸ್ಥಾನದಲ್ಲಿದೆ. ಯಾಕೆಂದರೆ ಶ್ರೀವೇದಾಂತದೇಶಿಕರ ಶಿಷ್ಯರಾದ, ಶ್ರೀವರದರಾಜಸ್ವಾಮಿ ಕೈಂಕರ್ಯದಲ್ಲಿ ನಿರತರಾದ ಶ್ರೀಬ್ರಹ್ಮತಂತ್ರಸ್ವಾಮಿಗಳೇ ಈ ಮಠದ ಸ್ಥಾಪಕರು. ಅದೂ ಅಲ್ಲದೇ ಶ್ರೀಮಠವು ಆರಂಭ ಗೊಂಡಿದ್ದೇ ಶ್ರೀವೇದಾಂತದೇಶಿಕರ ಮತ್ತು ಶ್ರೀ ದೇವಾಧಿರಾಜಸ್ವಾಮಿಯ ಅನುಗ್ರಹದಿಂದ. ಆದ್ದರಿಂದ ತೂಪ್ಪುಲ್ ಮಠವನು- ಅಭಿವೃದ್ಧಿಪಡಿಸುವ ವಿಷಯದಲ್ಲಿ ಶ್ರೀಸ್ವಾಮಿಗಳು ಎಂದಿಗೂ ಸಹ ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಂಡಿರುತ್ತಾರೆ. ಇಂದಿಗೂ ಸಹ ಈ ಮಠದಲ್ಲಿ ಕೈಂಕರ್ಯಗಳು ಅತ್ಯಂತ ವೈಭವದಿಂದ ನಡೆಯುತ್ತಿದೆ. ಈ ಕೈಂಕರ್ಯದಲ್ಲಿ ಅತ್ಯಂತ ಆಸಕ್ತಿಯಿಂದ ನನಗೆ ತಿಳಿದಂತೆ ಕಾಂಚೀಪುರಂನ ವಕೀಲರಾದ ಸೌಂದರ್ಯರಾಜನ್ ರವರು ತೊಡಗಿಕೊಂಡಿದ್ದಾರೆ. ಇವರು ಈ ಹಿಂದೆ ಶ್ರೀಮದಭಿನವ ರಾಮಾನುಜ ಪರಕಾಲಸ್ವಾಮಿಗಳ ಕಾಲದಲ್ಲಿ ಮಠದಲ್ಲಿಯೇ ಅಧ್ಯಯನಮಾಡಿಕೊಂಡಿದ್ದರು.

**ಶ್ರೀಸ್ವಾಮಿಗಳು ಮತ್ತು ತಿರುಪತಿ**

ತಿರುಮಲೈಯಲ್ಲಿ ಮತ್ತು ತಿರುಪತಿಯಲ್ಲಿ ಶ್ರೀಮಠದ ಶಾಖಾಮಠಗಳಿವೆ. ತಿರುಪತಿಯಲ್ಲಿ ಶ್ರೀಸ್ವಾಮಿಗಳಿಗೆ ರಾಜಮರ್ಯಾದೆ ಇದ್ದು ಇಂದಿಗೂ ದೇವಾಲಯದ ಹೊರಭಾಗದಿಂದ ಶ್ರೀಸ್ವಾಮಿಗಳಿಗೆ ಇತರ ದಿವ್ಯದೇಶಗಳಲ್ಲಿ ಹೇಗೋ ಹಾಗೆಯೇ ಮಾಲೆ, ಪರಿವಟ್ಟಾದಿ ಮರ್ಯಾದೆಗಳು ಇವೆ. ಶ್ರೀಸ್ವಾಮಿಗಳು ಇಲ್ಲಿ ದೇವರ ಬಳಿಗೆ ಹೋಗಿ ಅಂದರೆ ಗರ್ಭಗೃಹಕ್ಕೆ ದಯಮಾಡಿಸಿ ಚಾಮರ ಕೈಂಕರ್ಯಮಾಡುವ ಅಧಿಕಾರವನು- ಪಡೆದಿದ್ದಾರೆ. ಹಾಗೂ ಶ್ರೀಮಠವು ಕಾಂಚೀಪುರದಿಂದ ನಂತರ ತಿರುಮಲೈಯಲ್ಲಿಯೇ ಹೆಚ್ಚುಕಾಲ ನೆಲೆಸಿತ್ತು ಎಂದು ಶ್ರೀಸ್ವಾಮಿಗಳು ನನಗೆ ಹೇಳುತ್ತಿರುತ್ತಾರೆ. ಇಂತಹ ಅವಿನಾಭಾವ ಸಂಬಂಧಹೊಂದಿರುವ ತಿರುಮಲೆಯಲ್ಲಿ ೧೯೯೮ರ ನಂತರ ಹೊಸದಾಗಿ ಅನೇಕ ಅಂಶಗಳನು- ಜಾರಿಗೊಳಿಸಲು ತೀರ್ಮಾನಿಸಲಾಯಿತು. ಇದು ಶ್ರೀಮಠದ ನಿರ್ಧಾರವಾಗಿರಲಿಲ್ಲ ಬದಲಿಗೆ ತಿರುಮಲತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯು ದೇವಾಲಯದ ಸುತ್ತಮುತ್ತ ನವೀಕರಣ ಮಾಡಬೇಕು ಮತ್ತು ಹೆಚ್ಚುತ್ತಿರುವ ದೇವಾಲಯದ ಭಕ್ತಾದಿಗಳ ಸಂಖ್ಯೆ ಮತ್ತು ಭದ್ರತಾ ವ್ಯವಸ್ಥೆಯಿಂದ ದೇವಾಲಯದ ಸುತ್ತಮುತ್ತಲಿನ ಪ್ರದೇಶವನು- ಜೀರ್ಣೋದ್ಧಾರಮಾಡಬೇಕೆಂದು ತಿಳಿಸಿ ಶ್ರೀಮಠಕ್ಕೆ ಬೇರೆ ಜಾಗವನು- ಕೊಡುವುದಾಗಿಯೂ ಅಲ್ಲಿ ನೂತನ ಮಠನಿರ್ಮಾಣ ಮಾಡಬೇಕೆಂದು ಕೇವಲ ಹಯಗ್ರೀವಸನಿಧಿಯನು-ಮಾತ್ರ ಹಿಂದೆ ಇದ್ದ ಜಾಗದಲ್ಲಿ ಪುನರ್ನಿರ್ಮಾಣ ಮಾಡುವುದಾಗಿ ತಿಳಿಸಿತು.

ಶ್ರೀಸ್ವಾಮಿಗಳು ಹಲವಾರು ಬಾರಿ ಶ್ರೀಮಠದ ತಿರುಪತಿಯ ಶಿಷ್ಯರಾದ ಶ್ರೀಗೋಪಾಲದೇಶಿಕನ್, ಶ್ರೀಪದ್ಮನಾಭ, ಶ್ರೀರಾಮು ಹಾಗೂ ಹಲವಾರು ಟಿಟಿಡಿ ಅಧಿಕಾರಿಗಳು ಇವರೆಲ್ಲರ ಬಳಿ ಚರ್ಚಿಸಿದರು. ನಂತರ ಶ್ರೀಮಠದ ಮುಖ್ಯಭಕ್ತಾದಿಗಳು, ಹಿತಚಿಂತಕರು ಎಲ್ಲರ ಬಳಿ ಚರ್ಚಿಸಿ ಭಕ್ತಾದಿಗಳ ಹಾಗೂ ದೇವಾಲಯದ ಹಿತದೃಷ್ಟಿಯಿಂದ ಶ್ರೀಮಠವನು- ಬೇರೆಡೆ ನಿರ್ಮಾಣ ಮಾಡಲು ಮತ್ತು ಶ್ರೀಹಯಗ್ರೀವದೇವರ ಸನಿಧಿಯನು-

ಇದ್ದ ಜಾಗದಲ್ಲಿಯೇ ನಿರ್ಮಾಣ ಮಾಡಲು ಒಪ್ಪಿಕೊಂಡರು. ಇದು ಶ್ರೀಮಠದ ಮತ್ತು ವೇಂಕಟೇಶ್ವರನ ಸನಿಧಿಯ ಹಿತದೃಷ್ಟಿಯಿಂದ ಅತ್ಯುತ್ತಮ ನಿರ್ಧಾರವಾಗಿತ್ತು.

ಪರಕಾಲ ಸ್ವಾಮಿಗಳ ಸಂಕಲ್ಪದಂತೆ ಎಲ್ಲ ತೊಂದರೆಗಳೂ ಬಗೆ ಹರಿದು ಶ್ರೀಮಠದ ದೇವಾಲಯ ಹಾಗೂ ಮಠದ ವಸತಿನಿಲಯ ಇಂದು ತಿರುಪತಿಯಲ್ಲಿ ಇದ್ದು ನಮ್ಮೆಲ್ಲ ಭಕ್ತಾದಿಗಳ ವೃಂದಕ್ಕೆ ನಿತ್ಯವೂ ಸಹಾಯಕವಾಗಿದೆ. ನಾನೂ ಸಹ ಈ ನಿರ್ಮಾಣದ ಹಂತದಲ್ಲಿ ಹಲವಾರು ಬಾರಿ ತಿರುಪತಿಗೆ ಭೇಟಿ ನೀಡಿದ್ದೇನೆ. ಮಠದ ನಿರ್ಮಾಣದಲ್ಲಿ ಸ್ವಾಮಿಗಳ ಸಂಕಲ್ಪ ಅತ್ಯದ್ಭುತವಾದುದಾಗಿದೆ.

ಈ ಎಲ್ಲಾ ಬೆಳವಣಿಗೆಗಳ ಮಧ್ಯದಲ್ಲಿಯೇ ಶ್ರೀಸ್ವಾಮಿಗಳು ಶ್ರೀಶ್ರೀನಿವಾಸದೇವರ ಮಂಗಳಾಶಾಸನವನು-ಹಲವಾರು ಬಾರಿ ಮಾಡಿದ್ದಾರೆ. ಮೊದಲಬಾರಿಗೆ ಮಂಗಳಾಶಾಸನ ಮಾಡಿದಾಗ ನಾನು ಜೊತೆಯಲ್ಲಿ ಇದ್ದದ್ದು ನನ-ಸೌಭಾಗ್ಯ ಮತ್ತು ಅದೂ ಕೂಡ ಮರೆಯಲಾಗದ ಕ್ಷಣಗಳು.

**ಶ್ರೀಸ್ವಾಮಿಗಳು ಮತ್ತು ಮೇಲುಕೋಟೆ**

ಬೇರೆ ಎಲ್ಲಾ ದಿವ್ಯದೇಶಗಳಿಗಿಂತಲೂ ಶ್ರೀಪರಕಾಲ ಮಠಕ್ಕೆ ಇರುವ ಸಂಬಂಧ ಮೇಲುಕೋಟೆಯ ಜೊತೆಗೆ ಅತ್ಯಧಿಕ. ಯಾಕೆಂದರೆ ಇದು ಮೈಸೂರು ಮಹಾರಾಜರ ಕುಲದೈವ ಶ್ರೀತಿರುನಾಯಣಸ್ವಾಮಿ. ಇವನು ಯಾದವಕುಲದ ಅಂದರೆ ಶ್ರೀರಾಮ, ಶ್ರೀಕೃಷ್ಣ ಹಾಗೂ ಬಲರಾಮದೇವರಿಂದ ಆರಾಧಿತವಾದ ದಿವ್ಯದೇಶ. ಸಾಕ್ಷಾತ್ ಯದುಕುಲದ ಅರಸರು ಮೈಸೂರು ವಂಶಸ್ಥರು. ಹಾಗಾಗಿ ಮೈಸೂರು ಒಡೆಯರು ಮೇಲುಕೋಟೆಗೆ ನೀಡಿರುವ ಕೊಡುಗೆ ಅಪಾರ. ಆದ್ದರಿಂದ ಶ್ರೀಮಠಕ್ಕೂ ಸಹ ಅತ್ಯಂತ ಗಾಢಸಂಬಂಧ ಹೊಂದಿರುವ ಪ್ರದೇಶ ಶ್ರೀಕ್ಷೇತ್ರಮೇಲುಕೋಟೆ.

ಶ್ರೀಮಠಕ್ಕೆ ಇಲ್ಲಿ ಮೊದಲ ಮರ್ಯಾದೆಯ ಸ್ಥಾನ. ಅಂದರೆ ಯಾವುದೇ ತೀರ್ಥಗೋಷ್ಠಿಗಳಲ್ಲಿ ಮೊದಲು ತೀರ್ಥವಾಗುವುದು ಪರಕಾಲಸ್ವಾಮಿಮಠದ ಸ್ವಾಮಿಗಳಿಗೆ. ಮುಖ್ಯವಾಗಿ ದೇವಾಲಯದ ಅರುಳ್ಪ್ಪಾಡು ಆಗುವುದು ಘಂಟಾವತಾರಪರಕಾಲ ಸ್ವಾಮಿಗಳ ಹೆಸರಿನಲ್ಲಿ. ಮೈಸೂರು ರಾಜ್ಯದಲ್ಲಿ ಒಂದು ಬಾರಿ ಭೀಕರಕ್ಷಾಮ ಬಂದಾಗ ಮೇಲುಕೋಟೆಯಲ್ಲಿ ದೇವಾಲಯದ ನಿತ್ಯಾರಾಧನೆಗೆ ಬೊಕ್ಕಸದಿಂದ ವ್ಯವಸ್ಥೆ ಮಾಡಲಾಯಿತಂತೆ. ಆದ್ದರಿಂದ ಈ ಮಠದವರಿಗೆ ಮೊದಲ ಮರ್ಯಾದೆ, ಪರಿವಟ್ಟ, ತೀರ್ಥ ಇತ್ಯಾದಿ ಗೌರವಗಳನು-ಸಮರ್ಪಿಸಲಾಗುತ್ತದೆ. ಇಂದಿಗೂ ಇದು ಅನೂಚಾನವಾಗಿ ನಡೆದು ಬರುತ್ತಿದ್ದು, ಶ್ರೀಮಠದ ಪರವಾಗಿ ಶ್ರೀಅನಂತರನರಸಿಂಹೈಂಗಾರ್ ಹಾಗೂ ಶ್ರೀಸಂಪತ್ಕುಮಾರಾಚಾರ್ ಅವರು ಪ್ರತಿನಿಧಿಗಳಾಗಿ ನೋಡಿಕೊಳ್ಳುತ್ತಿದ್ದಾರೆ.

ಪರಕಾಲಸ್ವಾಮಿಗಳು ಮೇಲುಕೋಟೆಗೆ ಪ್ರಥಮಬಾರಿ ಬಂದರೆ ಅವರನು- ಶ್ರೀಪಾರ್ವಟ್ಟೆ ಮಂಟಪದಿಂದ ಪಲ್ಲಕ್ಕಿಯಲ್ಲಿ ಬಿಜಯಮಾಡಿಸಿಕೊಂಡು, ದೇವಾಲಯದ ಗೋಷ್ಠಿ, ಶ್ರೀಶಠಗೋಪ, ನಾಮಗಳು, ಅಭಯಹಸ್ತಗಳು, ವಾದ್ಯ, ಛತ್ರ, ಚಾಮರ ಇತ್ಯಾದಿ ವೈಭವದಿಂದ ಕರೆಸಿಕೊಳ್ಳಲಾಗುತ್ತದೆ. ನಂತರ ಅವರನು- ದೇವರ ಸನಿಧಿಗಳಲ್ಲಿ ವಿಶೇಷವಾಗಿ ಮರ್ಯಾದೆಗಳನು- ನೀಡಲಾಗುತ್ತದೆ. ಮೇಲುಕೋಟೆಯ ಪರಕಾಲಮಠದ ಶಾಖಾಮಠದಲ್ಲಿ ಅವರು ತಂಗಿ ತದೀಯಾರಾಧನೆಗಳನು- ನಡೆಸಿ ಮೇಲುಕೋಟೆಯ, ಸ್ಥಾನೀಕರು, ಪರಿಚಾಕರು, ಅರ್ಚಕರು, ಸ್ಥಳಾಚಾರ್ಯಪುರುಷರು, ಶ್ರೀಪಾದತಾಂಗಿಗಳು ಇತ್ಯಾದಿ ಸಮಸ್ತ ಜನರಿಗೂ ಅವರರವರ ಯೋಗ್ಯತೆಯಂತೆ ಸಂಭಾವನೆ ಹಾಗೂ ಮರ್ಯಾದೆಯನು-ಪರಕಾಲಸ್ವಾಮಿಗಳು ಮಾಡಬೇಕಾಗುತ್ತದೆ.

ಈಗಿನ ಪರಕಾಲಸ್ವಾಮಿಗಳು ೧೯೯೨ರಲ್ಲಿ ಅಧಿಕಾರಕ್ಕೆ ಬಂದರೂ ಸಹ ಕೆಲವು ವರ್ಷಗಳ ಕಾಲ ಶ್ರೀಮಠದ ವ್ಯವಸ್ಥೆಯನು- ಸರಿಪಡಿಸುವ ನಿಟ್ಟಿನಲ್ಲಿ ಅವರು ಮೇಲುಕೋಟೆಗೆ ತೆರಳಿ ಮಂಗಳಾಶಾಸನಮಾಡಿರಲಿಲ್ಲ. ನಾನು ೧೯೯೫ರಲ್ಲಿ ಶ್ರೀಮಠಕ್ಕೆ ಬಂದನಂತರ ಅವರು ಮದ್ರಾಸ, ಹಾಗೂ ಇತರ ಭಾಗಗಳಲ್ಲಿ ಪ್ರಯಾಣಕೈಗೊಂಡರು ಹಾಗಾಗಿ ೯೮ರಲ್ಲಿ ಮೇಲುಕೋಟೆಗೆ ಪ್ರಪ್ರಥಮವಾಗಿ ಮಂಗಳಾಶಾಸನಕ್ಕಾಗಿ ದಯಮಾಡಿಸಿದರು.

ಈ ಮಂಗಳಾಶಾಸನಕ್ಕೆ ಮದ್ರಾಸಿನಿಂದ, ಕಾಂಚೀಪುರದಿಂದ ಹಾಗೂ ವಿವಿಧ ಭಾಗಗಳಿಂದ ಮೇಲುಕೋಟೆಗೆ ಭಕ್ತಾದಿಗಳು ಆಗಮಿಸಿದ್ದರು. ನಮ್ಮ ತಂದೆಯವರು ಪಾರುಪತ್ತೇಗಾರ್ ಹಾಗೂ ಸ್ಥಾನೀಕರಾಗಿದ್ದರಿಂದ, ನನ-ತಮ್ಮ ಸ್ಥಾನೀಕಂ ಶ್ರೀನಿವಾಸನರಸಿಂಹನ್ ಹಾಗೂ ಇನೂ- ಅನೇಕರು ಮೇಲುಕೋಟೆಯಲ್ಲಿ ಶ್ರೀಸ್ವಾಮಿಗಳ ಅಭಿಮಾನಿಗಳಾಗಿದ್ದರಿಂದ ತಂಡೋಪತಂಡವಾಗಿ ಸ್ವಾಮಿಗಳನು- ಸ್ವಾಗತಿಸಿ, ಸಕಲ ಮರ್ಯಾದೆಗಳಿಂದ ಮೇಲುಕೋಟೆಯಲ್ಲಿ ಮೆರವಣಿಗೆಯ ಮೂಲಕ ಸಾಗಿ ದೇವರಿಗೆ ಮಂಗಳಶಾಸನ ಮಾಡಿಸಲಾಯಿತು. ದೇವರಿಗೆ ಸ್ವಾಮಿಗಳು ಅತ್ಯಂತ ಶ್ರೇಷವಾದ ಪಟ್ಟು (ಪೀತಾಂಬರ) ಗಳನು- ಅಮ್ಮನವರಿಗೆ ಸೀರೆ, ಶ್ರೀರಾಮಾನುಜಾಚಾರ್ಯರಿಗೆ ಕಾಷಾಯವಸ್ತ್ರ, ಶ್ರೀನರಸಿಂಹದೇವರಿಗೆ ಪೀತಾಂಬರಗಳನು- ಸಮರ್ಪಿಸಿದರು. ಅದೊಂದು ಅತ್ಯಂತ ವೈಭವದ ಕ್ಷಣ ಮತ್ತು ನನ-ಜೀವನದಲ್ಲಿ ಮರೆಯಲಾರದ ಸಂತಸದ ಸಂಗತಿಗಳು.

ಮೇಲುಕೋಟೆಯಲ್ಲಿ ಶ್ರೀಮಠದ ಶಾಖಾಮಠವಿದ್ದು, ಅಲ್ಲಿ ಶ್ರೀಹಯಗ್ರೀವದೇವರು, ಶ್ರೀಲಕ್ಷ್ಮೀನಾರಾಯಣದೇವರು ಮತ್ತು ಶ್ರೀಶ್ರೀನಿವಾಸದೇವರ ಸನಿಧಿಗಳಿವೆ. ಈ ಕ್ಷೇತ್ರಕ್ಕೆ ಎಲ್ಲಾ ಪೀಠಾಧಿಪತಿಗಳು ಭೇಟಿಕೊಟ್ಟು ಇಲ್ಲಿ ತಂಗಲೇ ಬೇಕಾಗುತ್ತದೆ. ಆದು ಅಲ್ಲದೇ ಪ್ರಾಚೀನ ಕಾಲದಲ್ಲಿ ಕಟ್ಟಲ್ಪಟ್ಟ ಮಠವಾಗಿದ್ದು ಮೈಸೂರಿನ ಈಗಿನ ಹೊಸದಾಗಿ ಅಂದರೆ ೧೯೦೨ರಲ್ಲಿ ಕಟ್ಟಲ್ಪಟ್ಟಿರುವ ಪರಕಾಲಮಠಕ್ಕಿಂತ ಅತ್ಯಂತ ಪ್ರಾಚೀನವಾಗಿ ಮೈಸೂರು ಮಹಾರಾಜರ ಕಾಲದಲ್ಲಿ ಕಟ್ಟಲ್ಪಟ್ಟ ಮಠವಾಗಿದೆ ಮತ್ತು ಅತ್ಯಂತ ವಿಶಾಲವಾಗಿ ಶ್ರೀಕಲ್ಯಾಣಿಯ ತಟದಲ್ಲಿದೆ.

ಮೇಲುಕೋಟೆಯ ಈ ಶಾಖಾಮಠಕ್ಕೆ ಶ್ರೀಚಲುವನಾರಾಯಣಸ್ವಾಮಿಯವರು ವರ್ಷದಲ್ಲಿ ಮೂರು ಬಾರಿ ಬಿಜಯಮಾಡಿಸುತ್ತಾರೆ. ಶ್ರೀವೈರಮುಡಿ ಬ್ರಹ್ಮೋತ್ಸವದ ಸಮಯದಲ್ಲಿ ಚಲುವನಾರಾಯಣಸ್ವಾಮಿಯವರ ತೀರ್ಥೋತ್ಸವವಾದ ಮೇಲೆ ದೇವರು ಇಲ್ಲಿಗೆ ಬಿಜಯಮಾಡಿಸಿ ಇಲ್ಲಿ ಪಟ್ಟಾಭಿಷೇಕದ ಅಲಂಕಾರವಾಗುತ್ತದೆ. ಇದಾದ ನಂತರ ಹೋಮವಾಗಿ ಪಟ್ಟಾಭಿಷೇಕ ಪಾರಾಯಣ, ಕುಂಭಪ್ರೋಕ್ಷಣೆ ವೇದ ಸ್ವಸ್ತಿ, ಮಹೂರ್ತವಾಚನ, ಪ್ರಸಾದ ವಿನಿಯೋಗವಾಗುತ್ತದೆ. ಈ ಸಮಯದಲ್ಲಿ ಈಗಿರುವ ಶ್ರೀಸ್ವಾಮಿಗಳು ಪ್ರತಿವರ್ಷವೂ ಸಹ ತಪ್ಪದೇ ಈ ಉತ್ಸವದಲ್ಲಿ ಭಾಗವಹಿಸುವರಲ್ಲದೇ, ಈ ಮಠದಲ್ಲಿ ವೈರಮುಡಿ ಬ್ರಹ್ಮೋತ್ಸವದ ಕಾಲಕ್ಕೆ ದೇಶದೆಲ್ಲಡೆ ಇಂದ ಬರುವ ಭಕ್ತಾದಿಗಳಿಗೆ ಊಟದ ವ್ಯವಸ್ಥೆಯನು- ಏರ್ಪಡಿಸಲಾಗುತ್ತದೆ. ಇದನು- ಶ್ರೀಸ್ವಾಮಿಗಳು ತಪ್ಪದೇ ನಡೆಸುತ್ತಾ ಬಂದಿದ್ದಾರಲ್ಲದೇ, ತಾವೇ ಸ್ವತಃ ಇದರ ಮೇಲ್ವಿಚಾರಣೆಯನು-ನೋಡಿಕೊಳ್ಳುತ್ತಾರೆ.

ಇದೇ ರೀತಿ ಕೃಷ್ಣರಾಜಮುಡಿ ಹಾಗೂ ರಾಜಮುಡಿ ಬ್ರಹ್ಮೋತ್ಸವಗಳ ಸಮಯದಲ್ಲೂ ಇದೇ ರೀತಿಯ ಉತ್ಸವವಾಗುತ್ತದೆ ಮತ್ತು ಶ್ರೀಮಠದಲ್ಲಿಯೇ ಈ ಎಲ್ಲಾ ಕಾರ್ಯಕ್ರಮಗಳು ನೆರವೇರುತ್ತವೆ. ಇಂತಹ ಸಂದರ್ಭದಲ್ಲಿ ಅಂದರೆ ತಪ್ಪದೇ ವೈರಮುಡಿ ಸಂದರ್ಭದಲ್ಲಿ ಶ್ರೀಸ್ವಾಮಿಗಳು ಭೇಟಿಕೊಡುತ್ತಾರೆ.

ಮೇಲುಕೋಟೆಯಲ್ಲಿ ಇಂದಿಗೂ ಹಲವಾರು ವಿದ್ವಾಂಸರಿದ್ದು ಅವರಿಗೆ ಇಂದಿಗೂ ಶ್ರೀಮಠದಿಂದ ಸಂಭಾವನೆಗಳನು- ನೀಡಲಾಗುತ್ತಿದೆ. ಶ್ರೀಮಠದಿಂದ ಸಂಭಾವನೆ ಪಡೆಯುತ್ತಿರುವವರೆಂದರೆ ಶ್ರೀಅನಂತನರಸಿಂಹಾಚಾರ್ (ಶ್ರೀಮಠದ ಪ್ರತಿನಿಧಿ - ಚಲುವನಾರಾಯಣಸ್ವಾಮಿ ದೇವಸ್ಥಾನ) ಶ್ರೀಸಂಪತ್ಕುಮಾರಾಚಾರ್ (ಶ್ರೀಮಠದ ಪ್ರತಿನಿಧಿ - ಯೋಗನರಸಿಂಹಸ್ವಾಮಿ ದೇವಸ್ಥಾನ), ಶ್ರೀಸಂಪತ್ಕುಮಾರ ಭಟ್ಟರ್ (ಅರ್ಚಕರು), ಶ್ರೀಸ್ಥಾನೀಕಂ ನಾಗರಾಜ ಐಯಂಗಾರ್ (ಸ್ಥಾನೀಕರು), ಶ್ರೀಅರೆಯರ್ ರಾಮಶರ್ಮಾ (ಪಂಚಭಾಷಾ ವಿದ್ವಾಂಸರು - ಅರೆಯರ್) ಮುಂತಾದವರು.

ಶ್ರೀಮಠವನು-ಇತ್ತೀಚೆಗೆ ಜೀರ್ಣೋದ್ಧಾರ ಮಾಡಲು ಕ್ರಮಕೈಗೊಳ್ಳಲಾಗಿದೆ. ಹಾಗೆಯೇ ಶ್ರೀಮಠದ ವತಿಯಿಂದ ಶ್ರೀಲಕ್ಷ್ಮೀಹಯಗ್ರೀವ ಪದವಿಪೂರ್ವಕಾಲೇಜನು- ನಡೆಸಲಾಗುತ್ತಿದ್ದು, ಇಲ್ಲಿ ವಿದ್ಯಾರ್ಥಿಗಳಿಗೆ ನಿತ್ಯವೂ ಯಾವ ಜಾತಿಭೇದವಿಲ್ಲದೆ ಮಧ್ಯಾಹ್ನದ ಊಟವನು- ನೀಡಲಾಗುತ್ತಿದೆ. ಈಗ ಹೊಸದಾಗಿ ಕಾಲೇಜು ಕಟ್ಟಡವನು- ಕಟ್ಟಲಾಗಿದೆ. ಇದು ಶ್ರೀಸ್ವಾಮಿಗಳು ಶ್ರೀಕ್ಷೇತ್ರಕ್ಕೆ ಹಾಗೂ ಗ್ರಾಮೀಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕೈಗೊಂಡ ಉತ್ತಮಕಾರ್ಯಗಳಾಗಿದೆ.

**ಶ್ರೀಸ್ವಾಮಿಗಳು ಮತ್ತು ಹೆಮ್ಮನಹಳ್ಳಿ ಜಮೀನು**

ಮೈಸೂರಿನ ಪರಕಾಲ ಮಠದ ಅದೇ ರಸ್ತೆಯಲ್ಲಿ ಬೋಗಾದಿಯ ಕಡೆಗೆ ತೆರಳಿದರೆ ೧೦ನೇ ಮೈಲಿಕಲ್ಲಿನ ಬಳಿ ಹೆಮ್ಮಲಹಳ್ಳಿಯ ಸಮೀಪ ಶ್ರೀಮಠಕ್ಕೆ ಸೇರಿದ ೨೨ ಎಕರೆ ಜಮೀನಿದೆ. ಇದನೇ ನಾನು ಹೆಮ್ಮನಹಳ್ಳಿ ಜಮೀನು ಎಂದು ಕರೆದಿರುವುದು. ಈ ಜಮೀನನು- ಹಿಂದಿನ ಸ್ವಾಮಿಗಳಾದ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರ

ಪರಕಾಲ ಸ್ವಾಮಿಗಳು ಖರೀದಿಸಿದ್ದರೂ ಸಹ ಖರೀದಿ ಪ್ರಕ್ರಿಯೆ ಪೂರ್ಣವಾಗಿರಲಿಲ್ಲ ಮತ್ತು ಅದು ಪೂರ್ಣವಾಗಿ ವ್ಯಾಜ್ಯದಲ್ಲಿ ತೊಡಗಿಕೊಂಡಿತ್ತು. ಆದ್ದರಿಂದ ಶ್ರೀಸ್ವಾಮಿಗಳು ಪಟ್ಟಕ್ಕೆ ಬಂದಮೇಲೆ ಈ ಜಮೀನಿನ ವಿಷಯವಾಗಿ ಅನೇಕ ಪ್ರಸಂಗಗಳು ನಡೆದವು. ಕಡೆಯಲ್ಲಿ ಶ್ರೀಸ್ವಾಮಿಗಳು ಈ ಜಮೀನನು- ಮಠದ ಒಳಿತಾಗಿ ಉಳಿಸಲೇ ಬೇಕೆಂದು ಶ್ರೀಮಠದ ಆಗಿನ ಕಾರ್ಯದರ್ಶಿಗಳಾದ ಶ್ರೀನಿವಾಸನ್, ಶ್ರೀಮಠದ ಶಿಷ್ಯರಾದ ಪ್ರಮುಖ ಉದ್ಯಮಿಗಳಾದ ಶ್ರೀನಿವಾಸರಾಘವನ್ (ಅದಿತಿ ಫೈಟೋಕೆಮ್ ಮಾಲೀಕರು), ಮತ್ತು ನನಗೆ ವಹಿಸಿದರು. ಈ ಜಮೀನನು- ಯಾರಿಗೋ ಗುತ್ತಿಗೆಗೆ ಕೊಟ್ಟು ಕೇವಲ ವಾರ್ಷಿಕವಾಗಿ ಶ್ರೀಮಠಕ್ಕೆ ೨೫೦೦ ರೂ ಬರುತ್ತಿತ್ತು. ನಾವು ಅಲ್ಲಿಗೆ ಹೋಗಿ ಉಪಾಯದಿಂದ ಈ ಗುತ್ತಿಗೆಯನು- ರದ್ದು ಪಡಿಸಿ ನಾವೇ ಬೆಳೆಯನು- ಬೆಳೆಯಲು ಸಿದ್ಧಪಡಿಸಿ ಮೂರು ಬೋರ್‌ವೆಲ್ (ಕೊಳವೆ ಬಾವಿಗಳು)ನು- ತೆಗೆಸಿ ಅಲ್ಲಿ ಬೆಳೆ ಬೆಳೆಯಲು ಆರಂಭಿಸಿದೆವು. ಇದಕ್ಕೆ ರಾಘವನ್ ಮತ್ತು ರಾಧಾ ದಂಪತಿಗಳು ಪಟ್ಟ ಶ್ರಮವನು-ನಾನು ಇಂದಿಗೂ ಮರೆಯುವುದಿಲ್ಲ. ಅವರ ಪ್ರಯತಚಿಲ್ಲದಿದ್ದರೇ ಇಂದು ಈ ಜಮೀನು ಈ ಸ್ಥಿತಿಯಲ್ಲಿ ಇರುತ್ತಿರಲಿಲ್ಲ. ಒಂದು ಬೆಳೆ ಮುಸುಕಿನ ಜೋಳವನು- ಬೆಳೆದು ಅದನು- ಶ್ರೀಮಠದಲ್ಲಿರುವ ಗೋಶಾಲೆಗೆ ನೀಡಲಾಯಿತು. ಶ್ರೀಮಠದ ಹಸುಗಳು ಧಾರಾಳವಾಗಿ ಇದನು- ತಿಂದು ಹಾಲುಕರೆಯಲಾರಂಭಿಸಿತು. ಆದರೆ ಮಳೆ, ಇತ್ಯಾದಿ ಕಾರಣಗಳಿಂದ ನಮ್ಮ ಪ್ರಯತ- ಅರ್ಧಕ್ಕೆ ನಿಂತುಹೋಯಿತು. ಆದರೂ ಹೆಮ್ಮನಹಳ್ಳಿಯ ಜಮೀನು ಈಗ ಅತ್ಯಂತ ಬೆಲೆಬಾಳುವ ಶ್ರೀಮಠದ ಆಸ್ತಿಯಾಗಿದೆ.

ಶ್ರೀಸ್ವಾಮಿಗಳು ಈಗ ಈ ಜಮೀನನ ಜಾಗದಲ್ಲಿ ಭೂಪರಿವರ್ತನೆ ಮಾಡಿಸಿ ಇಂಜಿನಿಯರಿಂಗ್, ಮೆಡಿಕಲ್ ಮತ್ತು ಆರ್ಯುವೇದ ಕಾಲೇಜುಗಳನು-ಕಟ್ಟಲು ಪ್ರಯತನಡೆಸಿದ್ದಾರೆ. ಇದನು-ಶ್ರೀಹಯಗ್ರೀವ ನಡೆಸಬೇಕು.

ಈ ಜಮೀನನು- ಉಳಿಸಿದ ಸಂಪೂರ್ಣಕೀರ್ತಿ ಶ್ರೀಮಠದ ಶ್ರೀಸ್ವಾಮಿಗಳಿಗೆ ಸಲ್ಲಬೇಕು. ಇದಕ್ಕೆ ಪಟ್ಟ ಹಾಗೂ ಪಡುತ್ತಿರುವ ಶ್ರಮವನು-ಕೇವಲ ಅಕ್ಷರಗಳಲ್ಲಿ ಹೇಳಲು ಆಗವುದಿಲ್ಲ.

**ಶ್ರೀಸ್ವಾಮಿಗಳು ಮತ್ತು ದಿವ್ಯದೇಶಗಳು**

ಶ್ರೀಸ್ವಾಮಿಗಳು ಪಟ್ಟಕ್ಕೆ ಬಂದ ನಂತರ ಅನೇಕ ದಿವ್ಯದೇಶಗಳಿಗೆ ಭೇಟಿ ನೀಡಿ ಅಲ್ಲಿನ ದಿವ್ಯದಂಪತಿಗಳಿಗೆ ಮಂಗಳಾಶಾಸನಗಳನು- ಮಾಡಿದ್ದಾರೆ. ಧಾರ್ಮಿಕ ಮಠದ ಮುಖಂಡರಾದವರು ಕೇವಲ ಮಠದ ಆಡಳಿತದಲ್ಲಿ ಮಾತ್ರವಲ್ಲದೇ ಸ್ವ ಆತ್ಮೋನತಿಯತ್ತ ಮತ್ತು ಶಿಷ್ಯರನು- ಸಂಪಾದಿಸುವುದು ಮತ್ತು ಅವರಿಗೆ ಸನ್ಮಾರ್ಗತೋರಿಸುವುದು ಇತ್ಯಾದಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ಶ್ರೀಸ್ವಾಮಿಯವರು ತಮ್ಮ ಅವಕಾಶಗಳನು-ಸಮರ್ಥವಾಗಿ ಬಳಸಿಕೊಂಡಿದ್ದಾರೆ ಎಂಬುದು ನನ-ಭಾವನೆ. ನಾನು ಜೊತೆಯಲ್ಲಿರುವಾಗ ಹಾಗೂ ಈಗಲೂ ಸ್ವಾಮಿಗಳು ತಪ್ಪದೇ ಅನೇಕ ದಿವ್ಯದೇಶಗಳಿಗೆ ಭೇಟಿ ನೀಡಿ ಅಲ್ಲಿನ ಭಕ್ತಜನತೆಗೆ ಸನ್ಮಾರ್ಗವನು- ತೋರುತ್ತಾ ಬರುತ್ತಿದ್ದಾರೆ. ಮೊದಲಿಗೆ ನಾವು ೧೯೯೭ರಲ್ಲಿ ತಮಿಳುನಾಡಿಗೆ ಪ್ರವಾಸವನು- ಆಚರಿಸುವ ವೇಳೆಯಲ್ಲಿ ಶ್ರೀಪೆರಂಬೂದೂರಿಗೆ ಭೇಟಿ ನೀಡಿದ್ದೆವು. ನಂತರ ತಿರುನೀರ್ ಮಲೈ,

ಶ್ರೀಕಾಂಚಿಪುರಂ, ಶ್ರೀರಂಗಂ, ತಿರುಪತಿ, ಮೇಲುಕೋಟೆ, ತಿರುನಲ್ವೇಲಿ ಜಿಲ್ಲೆಯ ತಿರುಕ್ಕುರುಂಗುಡಿ, ನವತಿರುಪತಿ, ವಾನಮಾಮಲೈ, ಕೇರಳದ ದಿವ್ಯದೇಶಗಳು, ಗುರುವಾಯೂರಪ್ಪನ್ ಸನಿಧಿ, ಆಂಧ್ರಪ್ರದೇಶದ ಹಲವು ಪ್ರಮುಖ ದೇವಾಲಯಗಳು, ತಿರುವಳ್ಳೂರ್, ತಿರುವಹೀಂದ್ರಪುರಂ, ತಿರುಪ್ಪುಲ್ಲಣಿ, ಸೇತುಸಮುದ್ರಂ ಮುಂತಾದ ಅನೇಕ ದಿವ್ಯದೇಶಗಳಿಗೆ ಶ್ರೀಸ್ವಾಮಿಗಳು ಬಿಜಯಮಾಡಿಸಿ ಅಲ್ಲಿಯೇ ಇದ್ದು ಪ್ರವಚನ ಮಾಡುತ್ತಾ ಶ್ರೀದಿವ್ಯದೇಶದ ದಂಪತಿಗಳಿಗೆ ಕಾಯಿಕ ಮತ್ತು ವಾಚಿಕ ಕೈಂಕರ್ಯವನು-ನೆರವೇರಿಸಿದ್ದಾರೆ.

ತಿರುಕ್ಕುರುಂಗುಡಿಯಲ್ಲಿ ರಾತ್ರಿ ವೇಳೆ ಇದ್ದ ಅನುಭವ, ವಾನಮಾಮಲೈಯಲ್ಲಿ ವಾನಮಾಮಲೈ ಸ್ವಾಮಿಗಳ ಜೊತೆ ಶ್ರೀಸ್ವಾಮಿಗಳ ಚರ್ಚೆ, ಆಳ್ವಾರ್ ತಿರುನಗರಿಯಲ್ಲಿ ಶ್ರೀರಾಮನುಜರು ತಂಗಿದ್ದ ಮನೆಯಲ್ಲಿ ವಾಸ, ತಾಮ್ರಪರ್ಣಿನದಿಯಲ್ಲಿ ಸ್ನಾನ, ಶ್ರೀವೈಕುಂಠಂ ದೇವಾಲಯದಲ್ಲಿ ಸ್ವಾಮಿಗಳ ಭೇಟಿ, ತಿರುವಹೀಂದ್ರಪುರಂನಲ್ಲಿ ಒಂದು ತಿಂಗಳು ವಾಸಮಾಡಿದ್ದು, ತಿರುಪತಿಯಲ್ಲಿ ಸ್ವಾಮಿಗಳ ವಾಸ, ಮೇಲುಕೋಟೆಯಲ್ಲಿ ವಾಸ, ತಿರುವಳ್ಳೂರಿನಲ್ಲಿ ವಾಸ, ಅಹಮದಾಬಾದನಲ್ಲಿ ವಾಸಮಾಡಿದ್ದು, ದ್ವಾರಕೆ ಸಂದರ್ಶನ ಇತ್ಯಾದಿ ಹಲವಾರು ವಿಚಾರಗಳನು-ನಾನು ಇಂದಿಗೂ ಅತ್ಯಂತ ಆನಂದದಿಂದ ಸ್ಮರಿಸುತ್ತೇನೆ.

ಶ್ರೀಸ್ವಾಮಿಗಳು ತಮ್ಮ ದಿವ್ಯದೇಶದ ಭೇಟಿಯ ವೇಳೆ ಶ್ರೀಕಾವೇರಿ, ಗೋದಾವರಿ, ನರ್ಮದಾ, ಸರಸ್ವತಿ, ತುಂಗಾಭದ್ರಾ, ಸರಸ್ವತೀ, ತಾಮ್ರಪರ್ಣೀ ಮುಂತಾದ ಪುಣ್ಯನದಿಗಳಲ್ಲಿ ಸ್ನಾನಮಾಡಿರುವುದನೂ- ಹಾಗೂ ಅವರ ಜೊತೆಯಲ್ಲಿದ್ದವರನೂ- ಸಹ ಪುನೀತರಾಗಿಮಾಡಿದ್ದನು- ಅತ್ಯಂತ ಕೃತಜ್ಞತೆಯಿಂದ ಸ್ಮರಿಸುತ್ತೇನೆ. (ಈ ಘಟನೆಗಳನೇ ಒಂದು ಇತಿಹಾಸ ಪುಸ್ತಕವಾಗಿ ಬರೆಯಬಹುದು)

**ಶ್ರೀಸ್ವಾಮಿಗಳ ನಿತ್ಯ ದಿನಚರಿ**

ನನಗೆ ಅತ್ಯಂತ ಆಶ್ಚರ್ಯವಾಗುತ್ತಿದ್ದ ಸಂಗತಿ ಎಂದರೆ ನಮ್ಮ ಸ್ವಾಮಿಗಳು ಎಂದೂ ಮಲಗುವುದಿಲ್ಲ ಎಂಬುದು! ಅದು ನಿಜವಲ್ಲದಿರಬಹುದು ಆದರೆ ನನಗೆ ಮಾತ್ರವಲ್ಲ ನನ-ಸಹಪಾಠಿಗಳಿಗೆ ಈ ರೀತಿ ಬಹಳ ಸಲ ಅನುಭವಕ್ಕೆ ಬಂದಿದೆ. ಈ ದಿನಚರಿಯನು-ಹೇಳುತ್ತೇನೆ ಅದು ನಿಮಗೂ ಸಹ ಅನಿಸದೇ ಇರಲಾರದು.

ನಂಬಿದರೆ ನಂಬಿ ಇಲ್ಲದಿದ್ದರೆ ಬಿಡಿ ಶ್ರೀಸ್ವಾಮಿಗಳು ಇಂದಿಗೂ ಸಹ ೮೦ನೇ ವಯಸ್ಸಿನಲ್ಲಿಯೂ ಬೆಳಗಿನ ಜಾವ ೪.೪೦ಕ್ಕೆ ಮುಂಚೆ ಏಳುತ್ತಾರೆ. ಎದ್ದ ತಕ್ಷಣ ಮುಖತೊಳೆದು ಧ್ಯಾನಮಗಾಗುತ್ತಾರೆ. ಪದ್ಮಾಸನದಲ್ಲಿ ಕುಳಿತು ಅವರು ಧ್ಯಾನಸ್ಥರಾದರೆ ಅದು ಸಮಾಧಿಸ್ಥಿತಿಗೆ ತಲುಪಿದಂತೆ ಯಾವುದರ ಪರಿವೆಯೂ ಇರುವುದಿಲ್ಲ. ಧ್ಯಾನದಿಂದ ಹೊರಬಂದು ಮೃತ್ತಿಕಾ ಸ್ನಾನವಿಧಿಯನು- ಪೂರೈಸಿ ಸೂರ್ಯೋದಯದ ಕಾಲಕ್ಕೆ ಸರಿಯಾಗಿ ಅರ್ಘ್ಯಪ್ರದಾನ ಮಾಡುತ್ತಾರೆ ಮತ್ತು ಸಂಧ್ಯಾವಂದನೆಯ ಜಪವಿಧಿಗಳನು- ಪೂರೈಸುತ್ತಾರೆ. ಆದರೆ ಕಾಲಕ್ಕೆ ಸರಿಯಾಗಿ ಅರ್ಘ್ಯಪ್ರದಾನ ಮಾಡಿಯೇ ಮಾಡುತ್ತಾರೆ. ನಂತರ ಮತ್ತೆ ಜಪವನು-ಪೂರೈಸಿ ಹಯಗ್ರೀವನ ಆರಾಧನೆಗಾಗಿ ಭೂತಶುದ್ಧಿಪ್ರಕಾರಗಳನು-ಮಾಡುತ್ತಾರೆ. ಶರೀರದಲ್ಲಿ ನ್ಯಾಸಗಳನು-ಮಾಡಿಕೊಂಡು ಹಯಗ್ರೀವನ

ಸನಿಧಾನಕ್ಕೆ ತೆರಳುತ್ತಾರೆ. ಈ ಸಮಯದಲ್ಲಿ ಅವರು ಯಾವ ಆಹಾರವನೂ- ಸಹ ಸ್ವೀಕರಿಸುವುದಿಲ್ಲ ಮತ್ತು ಯಾರ ಬಳಿಯೂ ಮಾತನಾಡುವುದಿಲ್ಲ. ನನಗೆ ಶ್ರೀಸ್ವಾಮಿಗಳು ಹೇಳುತ್ತಿದ್ದರು 'ಭೂತಶುದ್ಧಿ ಮತ್ತು ನ್ಯಾಸಗಳನು- ಮಾಡಿದ ನಂತರ ನಾನು ಯಾರ ಬಳಿಯೂ ಮಾತನಾಡುವುದಿಲ್ಲ'. ಅಗತ್ಯವಿದ್ದರೆ ಹಯಗ್ರೀವನ ಆರಾಧನಕಾಲದಲ್ಲಿ ಪರಿಚಾರಕರು ಮತ್ತು ಆರಾಧಕರ ಬಳಿ ಮಾತನಾಡುತ್ತಾರೆ. ಅದೂ ಸಹ ವೈಯುಕ್ತಿಕ ಮಾತುಗಳಲ್ಲ ಆರಾಧನೆಗೆ ಅನುಕೂಲವಾಗುವ ಮಾತುಗಳು. ನಂತರ ಶ್ರೀಸ್ವಾಮಿಗಳು ತಮ್ಮ ವೈಯುಕ್ತಿಕ ಶಾಲಗ್ರಾಮ, ಹಯಗ್ರೀವದೇವರು ಇತ್ಯಾದಿಗಳಿರುವ ಸಂಪುಟವನು- ತೆಗೆದುಕೊಂಡು ಹಯಗ್ರೀವನ ಸನಿಧಿಗೆ ಬಂದು ಅಲ್ಲಿ ತ್ರಿಕರಣಪೂರ್ವಕವಾಗಿ ನ್ಯಾಸಗಳನು- ಪ್ರಾರ್ಥನೆಯನು- ಮಾಡಿ ಶ್ರೀವೇದಾಂತದೇಶಿಕರಿಗೆ, ಅವರ ಮೂಲಕ ಶ್ರೀರಾಮಾನುಜಾಚಾರ್ಯರಿಗೆ ಮತ್ತು ಅವರ ಮೂಲಕ ಶ್ರೀಹಯಗ್ರೀವ ದೇವರಿಗೆ ಸುಪ್ರಭಾತವನು- ಮಾಡುತ್ತಾರೆ. (ಪರಕಾಲಮಠದಲ್ಲಿ ವಿಶೇಷವಾದ ಸುಪ್ರಭಾತ ಸ್ತೋತ್ರವಿದ್ದು ಅತ್ಯಂತ ಸುಂದರ ಹಯಗ್ರೀವನ ಸುಪ್ರಭಾತವಾಗಿದೆ) ನಂತರ ಷಡಾಸನಯುಕ್ತವಾದ ಆರಾಧನೆಯನು- ಶ್ರೀಸ್ವಾಮಿಗಳು ಪರಕಾಲಮಠದ ಆಸ್ಥಾನದಲ್ಲಿ ಬಿಜಯಮಾಡಿಸಿರುವ ಶ್ರೀಲಕ್ಷ್ಮೀಹಯವದನ, ಲಕ್ಷ್ಮೀನಾರಾಯಣ, ವೇಣುಗೋಪಾಲ, ಶ್ರೀಭೂಸಮೇತಶ್ರೀವೇಂಕಟೇಶ, ಶ್ರೀರಂಗನಾಥ, ಶ್ರೀಭೂಸಮೇತಶ್ರೀಸಂಪತ್ಕುಮಾರ, ಶ್ರೀಭೂಸಮೇತವರದರಾಜ, ಶ್ರೀರಾಮಸೀತಾಲಕ್ಷ್ಮಣಹನುಮಂತ (ಸ್ವರ್ಣವಿಗ್ರಹಗಳು), ಶ್ರೀರುಕ್ಮಿಣೀಸತ್ಯಭಾಮಾಸಮೇತಕೃಷ್ಣ(ಸ್ವರ್ಣವಿಗ್ರಹಗಳು) ಶ್ರೀವರಾಹ ಮುಂತಾದ ಅನೇಕ ದೇವದೇವತೆಯರ ಸಾನಿಧ್ಯವಿಗ್ರಹಗಳಿಗೆ ಆರಾಧನವನು- ಸಮರ್ಪಿಸುತ್ತಾರೆ. ನಂತರ ಆಳ್ವಾರ್, ಆಚಾರ್ಯರುಗಳು, ಮಠದ ಪೂರ್ವಾಚಾರ್ಯರುಗಳಿಗೆ ಆರಾಧನವನು- ಕ್ರಮವಾಗಿ ಸಮರ್ಪಿಸುತ್ತಾರೆ. ಕ್ರಮವಾಗಿ ಆವಾಹನೆ, ಸಾನಿಧ್ಯಪ್ರಾರ್ಥನೆ, ನ್ಯಾಸ, ಮುಂತಾದ ಎಲ್ಲಾ ಕ್ರಮಗಳನೂ- ಚಾಚೂ ತಪ್ಪದೇ ಶಾಸ್ತ್ರೋಕ್ತವಾಗಿ ಸ್ವಾಮಿಗಳು ಮಾಡುವ ಆರಾಧನೆಯನು- ಯಾರು ನೋಡಿದರೂ ಸಂತಸವಾಗುತ್ತದೆ ಮತ್ತು ದೇವರ ದಿವ್ಯಸಾನಿಧ್ಯ ಮತ್ತು ಸಾಮೀಪ್ಯದ ಅನುಭವವಾಗುತ್ತದೆ.

ಶ್ರೀಸ್ವಾಮಿಗಳ ಆರಾಧನೆ ಎಷ್ಟು ಶಾಸ್ತ್ರಬದ್ಧವಾಗಿದೆಯೆಂದರೇ, ಸಾಕ್ಷಾತ್ ಶ್ರೀಮದಭಿನವರಂಗನಾಥಸ್ವಾಮಿಗಳೇ ಇವರ ಆರಾಧನೆ, ಪೂಜಾವಿಧಾನವನು- ನೋಡಿ ಮೆಚ್ಚುಗೆಯನು- ವ್ಯಕ್ತಪಡಿಸಿದ್ದರಂತೆ. ದೇವರಿಗೆ ಭೋಜ್ಯಾಸನವನು-ಸಮರ್ಪಿಸುವಾಗ ಕೆಲವೊಮ್ಮೆ ಪ್ರಸಾದ ಬರುವುದು ವಿಳಂಬವಾದರೆ ಶ್ರೀಸ್ವಾಮಿಗಳು ಯಾರ ಬಳಿಯೂ ಮಾತನಾಡದೆ ಮಂತ್ರಜಪವನು- ಮಾಡುತ್ತಾ ಭಗವಂತನ ಪ್ರೀತಿಗಾಗಿ ವಾಚಾಕೈಂಕರ್ಯವನು- ನೇರವೇರಿಸುತ್ತಾ ಇರುತ್ತಾರೆ. ನಂತರ ಭೋಜ್ಯಾಸನ ಸಮರ್ಪಿಸಿ, ಪರ್ಯಂಕಾಸನವನು- ಪ್ರಾರ್ಥನೆಮಾಡಿ ಶಾತ್ತುಮೊರೈ, ತೀರ್ಥದೊಂದಿಗೆ ಪೂಜೆಯನು-ಮುಗಿಸುತ್ತಾರೆ.

ನಾನು ಮಠದಲ್ಲಿದ್ದಾಗ ಬೆಳಿಗ್ಗೆ ೧೦.೩೦ ಅಥವಾ ೧೧ ಕ್ಕೆ ಪೂಜೆಯು ಮುಕ್ತಾಯವಾಗುತ್ತಿತ್ತು. ನಂತರ ಶ್ರೀಸ್ವಾಮಿಗಳು ತಮ್ಮ ತ್ರಿದಂಡವನು- ತೆಗೆದುಕೊಂಡು ಮಠದ ಹಿಂಭಾಗದಲ್ಲಿರುವ ಪೂರ್ವಾಚಾರ್ಯರ ಬೃಂದಾವನಗಳಿಗೆ ಪ್ರದಕ್ಷಿಣೆಯನು- ಮಾಡಿ ನಂತರ ಮರಳಿ ಹಯಗ್ರೀವಾಸ್ಥಾನಕ್ಕೆ ಬಂದು ತಮ್ಮ ನಿತ್ಯಪೂಜಾ

ಸಂಪುಟವನು- ತೆಗೆದು ಕೊಂಡು ತಮ್ಮ ಪ್ರಕೋಷ್ಠಕ್ಕೆ ಬರುತ್ತಾರೆ. ಅಲ್ಲಿ ಮತ್ತೆ ಸಂಪುಟಕ್ಕೆ ನಿತ್ಯಪೂಜೆಯನು- ನೆರವೇರಿಸಿ ಶ್ರೀಮಡಪಳ್ಳಿಯಿಂದ ಬಂದ ಪ್ರಸಾದವನು- ಸಂಪುಟಕ್ಕೆ ನಿವೇದನ ಮಾಡಿ ಗೋಗ್ರಾಸ ಮತ್ತು ಬಲಿಕರ್ಮವನು- ನೆರವೇರಿಸುತ್ತಾರೆ. (ಗೋಗ್ರಾಸ ಎಂದರೆ ಹಸುವಿಗಾಗಿ ನೀಡುವ ಹಣ್ಣು ಇತ್ಯಾದಿ) (ಬಲಿ ಎಂದರೆ ಶುದ್ಧಾನಚಿಂದ ನೀಡುವ ದೇವತಾ ಬಲಿ)

ಈ ಸಮಯಕ್ಕಾಗಲೇ ಶ್ರೀಸ್ವಾಮಿಗಳ ಅನುಗ್ರಹಪಡೆಯಲು ಭಕ್ತರು ಕಾಯುತ್ತಿರುತ್ತಾರೆ. ಅವರಿಗೆ ಅಕ್ಷತೆಗಳನು-, ಫಲಗಳನು- ಅನುಗ್ರಹಿಸಿದ ನಂತರ ಶ್ರೀಸ್ವಾಮಿಗಳು ಸೂರ್ಯದರ್ಶನ ಮಾಡುವ ಮೂಲಕ ಮಾಧ್ಯಾಹಿಕವನು- ನೆರವೇರಿಸಿ, ಅತ್ಯಂತ ಅಲ್ಪವಾದ, ಸರಳವಾದ ಹುಳಿಹುಪ್ಪು ಖಾರ ಇಲ್ಲದ, ತೊಗರಿಬೇಳೆ ಇಲ್ಲದ ದೇವರಿಗೆ ನಿವೇದಿತವಾದ ಅನಪ್ರಸಾದವನು- ಭಿಕ್ಷೆಯನಾ-ಗಿ ಸ್ವೀಕರಿಸುತ್ತಾರೆ. ಉಪವಾಸದ ದಿನಗಳಲ್ಲಿ ಅಂದರೆ ಏಕಾದಶಿ, ಶ್ರವಣದ್ವಾದಶೀ, ಶ್ರೀಕೃಷ್ಣಾಷ್ಟಮೀ ಮುಂತಾದ ದಿನಗಳಲ್ಲಿ ನಿರಾಹಾರವಾಗಿರುತ್ತಾರೆ.

ಭಿಕ್ಷೆಯಾಗುತ್ತಿರುವಂತೆಯೇ ಶ್ರೀಮಠದ ನಿತ್ಯದ ಆಗುಹೋಗುಗಳು, ಆಡಳಿತವ್ಯವಸ್ಥೆ, ಶ್ರೀಮಠದ ಸಮಸ್ಯೆಗಳನು- ಪರಿಹರಿಸುವುದಕ್ಕಾಗಿ, ಶ್ರೀಮಠದ ಶ್ರೀಕಾರ್ಯಕರ್ತರಾದ ಶ್ರೀವೆಂಕಟನಾಥನ್, ಕಾರ್ಯದರ್ಶಿಗಳು, ಮಠದ ನಂಬಿಗೆಯ ಲೆಕ್ಕಾಧಿಕಾರಿಗಳಾದ ಶ್ರೀಶಾಮರಾವ್, ಮಠದ ಮ್ಯಾನೇಜರ್ ಆದ ಶ್ರೀಯುತ ರಾಮಸ್ವಾಮಿ ಅಯ್ಯಂಗಾರ್ ಇವರ ಬಳಿ ಚರ್ಚೆ ನಡೆಸುತ್ತಾರೆ.

ಶ್ರೀಮಠದಲ್ಲಿ ಯಾರಾದರೂ ಸಮಾಶ್ರಯಣಕ್ಕಾಗಿ ಆಗಮಿಸಿದ್ದರೆ ಆಗ ಸ್ವಾಮಿಗಳ ದಿನಚರಿಯಲ್ಲಿ ಸ್ವಲ್ಪಬದಲಾವಣೆಯಾಗುತ್ತದೆ. ಭಿಕ್ಷೆಗೆ ಮುಂಚೆಯೇ ಹೊರಬಂದು ಸಮಾಶ್ರಯಣವನು- ಮಾಡಿ ಮಂತ್ರೋಪದೇಶಮಾಡುತ್ತಾರೆ.

ಮಧ್ಯಾಹಚ ಹೊತ್ತು ಸ್ವಾಮಿಗಳು ಅಂದರೆ ೩.೩೦ ರಿಂದ ೪ ರ ತನಕ ಯಾವುದಾದರೂ ಶಾಸ್ತ್ರಗ್ರಂಥಗಳನು- ನೋಡುತ್ತಾ ಹಾಗೆಯೇ ವಿಶ್ರಮಿಸುತ್ತಾರೆ. ಮತ್ತೆ ೪ ರಿಂದ ೬ರ ತನಕ ಭಕ್ತಾದಿಗಳಿಗೆ ಅನುಗ್ರಹಮಾಡುತ್ತಾ ಸಂಜೆ ಸೂರ್ಯಾಸ್ತದ ಸಂದರ್ಭಕ್ಕೆ ಸರಿಯಾಗಿ ಅರ್ಘ್ಯಪ್ರದಾನದೊಂದಿಗೆ ಸಂಧ್ಯಾವಂದನಾದಿಗಳನು- ಮಾಡುತ್ತಾರೆ. ಮತ್ತೆ ಮಠದಲ್ಲಿ ಪ್ರದಕ್ಷಿಣೆ ಮಾಡುತ್ತಾ ಶ್ರೀವಿಷ್ಣುಸಹಸ್ರನಾಮವನು- ಹೇಳುತ್ತಾ ಮತ್ತೆ ಕೆಲ ಹೊತ್ತು ಧ್ಯಾನಮಗ-ರಾಗುತ್ತಾರೆ.

ಶುಕ್ರವಾರ, ಶ್ರವಣ ನಕ್ಷತ್ರ ಮತ್ತು ಇತರೆ ದಿನಗಳಲ್ಲಿ ಸಂಜೆಯೂ ಆರಾಧನೆಗೆ ತೆರಳುವುದರಿಂದ ಸಂಧ್ಯಾಕಾಲದಲ್ಲಿ ಸಾ-ನಮಾಡಿ ಪೂಜೆಗೆ ತೆರಳುತ್ತಾರೆ. ಮತ್ತೆ ಪೂಜೆ ಮುಗಿಸಿ ಬರುವುದು ರಾತ್ರಿಯಾಗುತ್ತದೆ. ರಾತ್ರಿ ಬಂದ ತಕ್ಷಣವೇ ಭಕ್ತಾದಿಗಳು ಕಾಯುತ್ತಿದ್ದರೆ ಅವರಿಗೆ ಅಕ್ಷತೆ, ಫಲ ನೀಡಿ ಅವರ ಯೋಗಕ್ಷೇಮಗಳನು- ವಿಚಾರಿಸುತ್ತಾರೆ. ನಂತರ ಕೆಲ ಹೊತ್ತು ಧ್ಯಾನಮಗ-ರಾಗಿ ಪರಮಾತ್ಮನನು- ಚಿಂತಿಸುತ್ತಾ ಕೇವಲ ಹಯಗ್ರೀವರಿಗೆ ನಿವೇದನವಾದ ಹಣ್ಣುಗಳು,

ಹಾಲನು- ಮಾತ್ರ ಸ್ವೀಕರಿಸುತ್ತಾರೆ. ಉಪವಾಸದಿಂದ ಕೂಡಿದ್ದರೆ ಸ್ವಲ್ಪ ಅಲ್ಪ ಫಲಾಹಾರವನು- ಸ್ವೀಕರಿಸುತ್ತಾರೆ. ನಂತರ ಮಠದ ವಿದ್ಯಾರ್ಥಿಗಳ ಜೊತೆಯಲ್ಲಿ ಧಾರ್ಮಿಕ ವಿಷಯಗಳ ಬಗ್ಗೆ ತಿಳುವಳಿಕೆ ನೀಡುತ್ತಾರೆ. ನಾನೇಷ್ಟು ಭಾಗ್ಯಶಾಲಿ ಎಂದರೆ ನಾನು ಶ್ರೀಸ್ವಾಮಿಜಿಯವರ ಜೊತೆಯಲ್ಲಿ ಚಿತ್ರಕೂಟದಲ್ಲಿ ಮಲಗುತ್ತಿದ್ದೆ. ಅಲ್ಲಿ ಅವರು ಶ್ರೀರಾಮಾಯಣ, ಮಹಾಭಾರತ, ಭಾಗವತ ಮತ್ತು ಸಂಪ್ರದಾಯದ ಅನೇಕ ವಿಷಯಗಳನು-ಹೇಳುತ್ತಿದ್ದರು. ಆ ಸಮಯದಲ್ಲಿ ನನಗೆ ಗೊತ್ತಿಲ್ಲದೇ ನಿದ್ದೆ ಆವರಿಸುತ್ತಿತ್ತು. ನಂತರ ಮತ್ತೆ ಬೆಳಗ್ಗೆ ನಾನು ನಿಧಾನವಾಗಿ ಏಳುವುದರೊಳಗೆ ಆಗಲೇ ಸ್ವಾಮಿಗಳು ನಿತ್ಯಕರ್ಮಮುಗಿಸಿ ಧ್ಯಾನಾಸಕ್ತರಾಗಿರುತ್ತಿದ್ದರು. ಆಗ ನಾನು ಕೇಳಿದ ಮೊದಲ ಪ್ರಶೆ- ಇವರು ಯಾವಾಗ ಮಲಗುತ್ತಾರೆ, ಯಾವಾಗ ಏಳುತ್ತಾರೆ? ಎಂಬುದು ನನ- ಮನಸ್ಸಿನಲ್ಲಿ ಹಾದು ಹೋಗುತ್ತಿತ್ತು. ನಿಮಗೆಲ್ಲ ತಿಳಿದಿರಲಿ ಯೋಗಿಯು ಕೇವಲ ಅರ್ಧಗಂಟೆ ಮಲಗಿದರೆ ಸಾಕು ನಾವು ೮ ಗಂಟೆ ನಿದ್ದೆಮಾಡುವುದಕ್ಕೆ ಸಮ ಎಂದು ಯೋಗಾಚಾರ್ಯರು ನನಗೆ ತಿಳಿಸಿದ್ದಾರೆ. ಅದು ಸ್ವಾಮಿಗಳ ವಿಷಯದಲ್ಲಿ ನಿಜ ಎನುವುದು ನನಗೆ ಖಾತ್ರಿಯಾಗಿದೆ.

## ಶ್ರೀಸ್ವಾಮಿಗಳು ಮತ್ತು ವರಾಹನಾಥ ಕಲ್ಲಹಳ್ಳಿ

ಮೈಸೂರಿಗೆ ಸಮೀಪದಲ್ಲಿ ಒಂದು ವರಾಹನಾಥ ಕಲ್ಲಹಳ್ಳಿ ಎಂಬ ಗ್ರಾಮವಿದ್ದು ಅಲ್ಲಿ ಚೋಳರ ಕಾಲದ ಶ್ರೀಲಕ್ಷ್ಮೀವರಾಹಸ್ವಾಮಿಯವರ ೧೪ ಅಡಿ ಎತ್ತರದ ಅತ್ಯಂತ ಭವ್ಯವಾದ ವಿಗ್ರಹವಿರುವ ದೇವಾಲಯವಿದೆ. ಇದನು- ದೇವಾಲಯದ ಮುಂದಿರುವ ಶಾಸನದೃಢಪಡಿಸುವುದಲ್ಲದೇ, ಹೊಯ್ಸಳ ಬಲ್ಲಾಳನ ಕಾಲದಲ್ಲಿ ಅವನ ಹೆಂಡತಿಯು ಜೀರ್ಣೋದ್ಧಾರಮಾಡಿ ಬ್ರಾಹ್ಮಣರ ಅಗ್ರಹಾರವನು- ಮಾಡಿ ದಾನಮಾಡಿದ್ದನು- ಹೇಳುತ್ತದೆ. ಅಂತಹ ಪ್ರದೇಶದಲ್ಲಿರುವ ಈ ದೇವಾಲಯವು ಕೆಲವು ವರ್ಷಗಳ ಹಿಂದೆ ಅನ್ಯಾಕ್ರಾಂತವಾಗಿ ಪಾಳುಬಿದ್ದಿತ್ತು. ಆಗ್ಗಾಗ್ಗೆ ಮೇಲುಕೋಟೆ ಇತ್ಯಾದಿ ಪ್ರದೇಶದಿಂದ ಆಗಮಿಸುವ ಶ್ರೀವೈಷ್ಣವರು ಪೂಜಾದಿಗಳನು- ನೆರವೇರಿಸುತ್ತಿದ್ದರು ಎನವುದನು- ಬಿಟ್ಟರೆ ಇಲ್ಲಿ ನಿತ್ಯಪೂಜೆಯೂ ಇರಲಿಲ್ಲ ಮತ್ತು ಕಟ್ಟಡವು ಸಹ ಅತ್ಯಂತ ಶಿಥಿಲವಾಗಿತ್ತು. ಶ್ರೀಸ್ವಾಮಿಗಳು ಪಟ್ಟಕ್ಕೆ ಬಂದ ನಂತರ ಈ ಪ್ರದೇಶವು ಶ್ರೀಮಠಕ್ಕೆ ದತ್ತಿಯಾಗಿ ಸೇರಿದ್ದನು- ಸ್ವಾಮಿಗಳು ಗಮನಿಸಿದರು. ೧೯೯೬ ರಿಂದ ಈ ದೇವಾಲಯಕ್ಕೆ ಶ್ರೀಸ್ವಾಮಿಗಳು ಆಗಾಗ್ಗೆ ಹೋಗಿಬರುತ್ತಿದ್ದರು. ನಾನು ಮತ್ತು ನನ-ತಮ್ಮ ಸ್ಥಾನೀಕಂ ಶ್ರೀನಿವಾಸನರಸಿಂಹನ್ ಮತ್ತು ನಮ್ಮ ಮಿತ್ರರು ಅನೇಕಬಾರಿ ಇಲ್ಲಿ ಹೋಗಿ ಅಭಿಷೇಕವನು- ನೆರವೇರಿಸಿದ್ದೆವು. ಶ್ರೀಸ್ವಾಮಿಗಳು ಸಹ ಅನೇಕ ಬಾರಿ ಈ ವರಾಹದೇವರಿಗೆ ಅಭಿಷೇಕವನು- ತಾವೇ ನೆರವೇರಿಸಿದ್ದರು. ೨೦೦೫ರ ನಂತರ ಶ್ರೀಸ್ವಾಮಿಗಳು ಮತ್ತು ಶ್ರೀನಿವಾಸರಾಘವನ್ (ಅದಿತಿ ಫೈಟೋಕೆಮ್) ಇವರ ಪ್ರಯತಚಿಂದ ಅಲ್ಲಿದ್ದ ಸುತ್ತಮುತ್ತಲಿನ ಜಮೀನು ಶ್ರೀಸ್ವಾಮಿಗಳ ಹೆಸರಿನಲ್ಲಿ ಅಂದರೆ ಶ್ರೀಮಠಕ್ಕೆ ನೊಂದಾವಣಿಯಾಯಿತು. ಅಂದರೆ ಹಿಂದಿನ ರಾಜರುಗಳು ದಾನಮಾಡಿದ್ದು ಊರ್ಜಿತವಾಯಿತು. ನಂತರ ಶ್ರೀಮಠದ ವತಿಯಿಂದ ಇದನು- ಅಭಿವೃದ್ಧಿಪಡಿಸಲಾಯಿತು. ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಭವ್ಯವಾದ ಕಲ್ಲಿನ ಕಟ್ಟಡವನು- ಕಟ್ಟಿದ್ದಲ್ಲದೇ ಸುತ್ತಲಿನ ಪ್ರದೇಶದಲ್ಲಿ ಅಭಿವೃದ್ಧಿಮಾಡಲಾಯಿತು. ದೇವರ ಸನಿಧಿಯ ಪಕ್ಕದಲ್ಲೇ ಒಂದು ಕಟ್ಟಡವನು- ಕಟ್ಟಿ ಅಲ್ಲೇ ಶ್ರೀಸ್ವಾಮಿಗಳು ಇಳಿಯುವಂತೆ ಮತ್ತು ದೇವಾಲಯದ ಪ್ರಸಾದವನು- ತಯಾರಿಸುವ ವ್ಯವಸ್ಥೆ ಮಾಡಲಾಯಿತು. ಇಂದು ಇದು

ಅತಿ ಪವಿತ್ರಸ್ಥಳವಾಗಿ ಬದಲಾಗಿದೆ ಮತ್ತು ಸಾವಿರಾರು ಭಕ್ತರು ಇಲ್ಲಿಗೆ ಭೇಟಿ ನೀಡುತ್ತಿದ್ದಾರೆ. ಶ್ರೀನಿವಾಸ ರಾಘವನ್ ಅವರ ಪಾತ್ರ ಇದರಲ್ಲಿ ಹೆಚ್ಚಿದ್ದು ಅವರ ಧರ್ಮಪತಿಯಾದ ಶ್ರೀಮತಿ ರಾಧಾರವರ ಸಂಕಲ್ಪವೂ ಸಹ ಮುಖ್ಯವಾಗಿದೆ. ಈ ದೇವಾಲಯದ ಜೀರ್ಣೋದ್ಧಾರ ಪುನರ್ ಪ್ರತಿಷ್ಠಾಕಾರ್ಯವು ಮತ್ತು ಕುಂಭಾಭಿಷೇಕವು ೨೦೧೩ ರಲ್ಲಿ ನೆರವೇರಿದೆ. ಇದು ಶ್ರೀಸ್ವಾಮಿಗಳ ಆಶೀರ್ವಾದದಿಂದ ಆದ ಒಂದು ಪ್ರಮುಖವಾದ ಕಾರ್ಯವಾಗಿದೆ.

**ಶ್ರೀಸ್ವಾಮಿಗಳು ಮತ್ತು ಕೇರಳ**

ಶ್ರೀಸ್ವಾಮಿಗಳು ಮುಖ್ಯವಾಗಿ ಎರಡು ಕಾರಣಗಳಿಗಾಗಿ ಕೇರಳಕ್ಕೆ ಭೇಟಿ ನೀಡುತ್ತಾರೆ. ಒಂದು ದಿವ್ಯದೇಶಗಳಲ್ಲಿರುವ ದಿವ್ಯದಂಪತಿಗಳ ಮಂಗಳಾಶಾಸನಕ್ಕಾಗಿ ಹಾಗೂ ವೈನಾಡು ಪ್ರದೇಶದಲ್ಲಿ ಇರುವ ಶ್ರೀಮಠದ ಭಕ್ತಾದಿಗಳಾದ ನಾಮಧಾರಿ ಗೌಡಸಮುದಾಯದ ಸಮಾಶ್ರಯಣಕ್ಕಾಗಿ. ವೈನಾಡು ಪ್ರದೇಶದಲ್ಲಿ ನಾಮಧಾರಿಗೌಡ ಸಮುದಾಯದ ಭಕ್ತರು ಹೆಚ್ಚುವಾಸಿಸುತ್ತಿದ್ದು ಅವರು ಪ್ರಮುಖವಾಗಿ ವ್ಯವಸಾಯದಲ್ಲಿ ತೊಡಗಿಸಿಕೊಂಡಿದ್ದಾರೆ. ಇವರು ಶ್ರೀರಾಮಾನುಜಾಚಾರ್ಯರಿಂದ ಪ್ರೇರಣೆ ಪಡೆದು ಶ್ರೀವೈಷ್ಣವ ಸಿದ್ಧಾಂತವನು- ತಮ್ಮ ನಿತ್ಯಜೀವಲದಲ್ಲಿ ಅಳವಡಿಸಿಕೊಂಡಿದ್ದಾರೆ. ಇವರು ವ್ಯವಸಾಯ ಮತ್ತು ಗೌಡಿಕೆಯಲ್ಲಿ ತೊಡಗಿಕೊಂಡಿರುವುದರಿಂದ ಇವರನು-ನಾಮಧಾರಿ ಗೌಡಸಮುದಾಯ ಎಂದು ಕರೆಯಲಾಗುತ್ತದೆ. ಇವರು ವೈನಾಡು ಪ್ರದೇಶದಲ್ಲಿ ಶ್ರೀವೈಷ್ಣವ ಸಂಪ್ರದಾಯದಂತೆ ಒಂದು ಲಕ್ಷ್ಮೀನರಸಿಂಹ ದೇವಾಲಯವನು- ನಿರ್ಮಿಸಿದ್ದಾರೆ. ಶ್ರೀಸ್ವಾಮಿಗಳು ಒಂದು ಬಾರಿ ವೈನಾಡು ಪ್ರದೇಶಕ್ಕೆ ಬಿಜಮಾಡಿಸಿದಾಗ ನಾನೇ ಸ್ವತಃ ವಾಹನವನು-ಚಲಾಯಿಸಿ ಅಲ್ಲಿಗೆ ಹೋಗಿದ್ದೆವು. ಹಾಗೂ ಶ್ರೀಸ್ವಾಮಿಗಳು ಈ ಲಕ್ಷ್ಮೀನರಸಿಂಹ ದೇವಾಲಯದಲ್ಲಿ ಹಾಗೂ ಪಕ್ಕದಲ್ಲಿರುವ ಸಮುದಾಯಭವನದಲ್ಲಿ ಎರಡು ದಿನಗಳ ಕಾಲ ವಾಸಮಾಡಿ ಅವರಿಗೆ ಸಮಾಶ್ರಯಣ ಮತ್ತು ಪ್ರವಚನಾದಿಗಳಿಂದ ಅನುಗ್ರಹಮಾಡಿದರು.

ಅದಲ್ಲದೇ ಶ್ರೀಸ್ವಾಮಿಗಳು ಕೇರಳದಲ್ಲಿ ಪ್ರಮುಖಕ್ಷೇತ್ರವಾದ ಶ್ರೀಗುರುವಾಯೂರ್ ಗೆ ಭೇಟಿನೀಡಿ ಗುರುವಾಯುರಪ್ಪನ್ ಶ್ರೀಕೃಷ್ಣನಿಗೆ ಮಂಗಳಾಶಾಸನವನು- ನೆರವೇರಿಸಿದಾಗ ಶ್ರೀಸ್ವಾಮಿಗಳಿಗೆ ರಾಜಗುರುಗಳಾಗಿದ್ದರಿಂದ ಶ್ರೀಕೃಷ್ಣನ ಕೌಪೀನಪ್ರಸಾದವನು-ನೀಡಿ ಗೌರವಿಸಲಾಯಿತು.

ಈ ರೀತಿ ಇನೂ- ಅನೇಕ ಪ್ರಸಂಗಗಳು ನನ- ನೆನಪಿನಲ್ಲಿದ್ದರೂ ಈ ಕೆಲವು ಪ್ರಸಂಗಗಳೊಂದಿಗೆ ನನ- ಈ ಬರಹವನು-ಅವರ ಪಾದಪದ್ಮಗಳಿಗೆ ಸಮರ್ಪಿಸುತ್ತಾ ಅವರ ಕೆಲವು ಸಾಧನೆಗಳನು-ಇಲ್ಲಿ ಪಟ್ಟಿ ಮಾಡಿದ್ದೇನೆ.

**ಶ್ರೀಸ್ವಾಮಿಗಳ ಸಾಧನೆಗಳ ಪಟ್ಟಿ**

೧. ಶ್ರೀಸ್ವಾಮಿಗಳು ಶ್ರೀಪರಕಾಲ ಮಠದ ಸ್ವಾಮಿಗಳಾಗಿ ಪಟ್ಟಾಭಿಷೇಕ - ೧೯೯೨

೨. ಮೈಸೂರು ಕಲ್ಯಾಣ ಮಂಟಪ ನಿರ್ಮಾಣ ಮತ್ತು ಉದ್ಘಾಟನೆ - ೧೯೯೮

೩. ಶ್ರೀಬ್ರಹ್ಮತಂತ್ರಸ್ವತಂತ್ರಸ್ವಾಮಿ ಟ್ರಸ್ಟ್ ಸ್ಥಾಪನೆ

೪. ಮೈಸೂರಿನಲ್ಲಿ ಶ್ರೀಲಕ್ಷ್ಮೀಹಯಗ್ರೀವ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಆರಂಭ

೫. ತಿರುಮಲತಿರುಪತಿಯಲ್ಲಿ ಶ್ರೀಮಠದ ಶಾಖಾಮಠದ ಸ್ಥಾಪನೆ - ಉದ್ಘಾಟನೆ

೬. ತಿರುಮಲತಿರುಪತಿಯಲ್ಲಿ ಶ್ರೀಹಯಗ್ರೀವದೇವರ ದೇವಾಲಯಪುನರ್ನಿರ್ಮಾಣ ಕುಂಭಾಭಿಷೇಕ

೭. ಹೈದರಾಬಾದಿನ ಮಲ್ಕಜಗಿರಿಯಲ್ಲಿ ಶ್ರೀಮಠದ ಮಠ ಮತ್ತು ದೇವಾಲಯಗಳ ಉದ್ಘಾಟನೆ

೮. ಚೆನ್ನೈಯಲ್ಲಿ ಶ್ರೀಮಠದ ನಿರ್ಮಾಣ

೯. ಶ್ರೀತೂಪ್ಪುಲ್ ಮಠದ ಪುನರ್ನಿರ್ಮಾಣ ಮತ್ತು ಜೀರ್ಣೋದ್ಧಾರ

೧೦. ಮೇಲುಕೋಟೆಯಲ್ಲಿ ಶ್ರೀಮಠದ ಜೀರ್ಣೋದ್ಧಾರ

೧೧. ಮೇಲುಕೋಟೆಯಲ್ಲಿ ಶ್ರೀಲಕ್ಷ್ಮೀಹಯಗ್ರೀವ ಪದವಿಪೂರ್ವಕಾಲೇಜು ಸ್ಥಾಪನೆ

೧೨. ಶ್ರೀಮಠಕ್ಕಾಗಿ ಮುಂಬಯಿನಲ್ಲಿ ಜಾಗದ ಖರೀದಿ ಮತ್ತು ಸಿದ್ಧತೆ

೧೩. ಬೆಂಗಳೂರು ಮಠದ ಪುನರ್ನಿರ್ಮಾಣ ಮತ್ತು ಜೀರ್ಣೋದ್ಧಾರ

೧೪. ಮೈಸೂರು ಮಠದ ನವೀಕರಣ ಮತ್ತು ಜೀರ್ಣೋದ್ಧಾರ

೧೫. ಶ್ರೀಮದಭಿನವ ರಾಮಾನುಜ ಸ್ವಾಮಿಗಳ ಬೃಂದಾವನ ಸ್ಥಾಪನೆ

೧೬. ಶ್ರೀಮದಭಿನವ ಶ್ರೀನಿವಾಸ ಸ್ವಾಮಿಗಳ ಬೃಂದಾವನ ಸ್ಥಾಪನೆ

೧೭. ಹೊಸಕಾಲೇಜಿಗಾಗಿ ಮೈಸೂರಿನಲ್ಲಿ ಹೊಸ ನಿವೇಶನವನು-ಖರೀದಿಸಲಾಗಿದೆ

೧೮. ವಿದ್ವತ್ ಸಭೆಗಳ ಆಯೋಜನೆ

೧೯. ಶ್ರೀಕೃಷ್ಣ ಮತ್ತು ಶ್ರೀವರಾಹಸ್ವಾಮಿಯವರ ಜಯಂತಿ ಉತ್ಸವಗಳು

೨೦. ಶ್ರೀಮಠದ ವತಿಯಿಂದ ವೇದಗಳು, ದಿವ್ಯಪ್ರಬಂಧ, ಶಾಸ್ತ್ರ ಮತ್ತು ಸ್ತೋತ್ರಪುಸ್ತಕಗಳ ಪ್ರಕಟನೆ

೨೧. ವರಾಹನಾಥಕಲ್ಲಹಳ್ಳಿಯಲ್ಲಿ ವರಾಹಸ್ವಾಮಿಯ ದೇವಾಲಯದ ನಿರ್ಮಾಣ ಮತ್ತು ಪುನರ್ ಪ್ರತಿಷ್ಠೆ

೨೨. ಪೂನಾದ ಬಳಿ ಒಂದು ಎಕರೆ ಮಠಕ್ಕಾಗಿ ನಿವೇಶನ

೨೩. ಕೃಷ್ಣಾಪುರದಲ್ಲಿ ರಾಮಾನುಜಬ್ರಹ್ಮತಂತ್ರಸ್ವಾಮಿಗಳ ಬೃಂದಾವನ ನವೀಕರಣ

೨೪. ಶ್ರೀರಂಗಪಟ್ಟಣದ ಕೊಪ್ಪಲ್ ಮಠದ ನವೀಕರಣ

೨೫. ಹೆಮ್ಮನಹಳ್ಳಿ ಜಮೀನಿನಲ್ಲಿ ಕಾಲೇಜುಗಳ ನಿರ್ಮಾಣಕ್ಕಾಗಿ ನಕ್ಷೆ ಸಿದ್ಧಪಡಿಸಿದ್ದು

॥ ಶ್ರೀಃ ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥

॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ ॥

# ನವ್ಯ-ವಾಗೀಶ ಸ್ತುತಿಃ - ಮಂಗಲಂ

ಶ್ರೀಮಾನ್ ಉ. ವೇ ವೇಣುಗೋಪಾಲ್
ಬೆಂಗಳೂರು

ಅಭಿಗಮ್ಯಾಯ ಸರ್ವೇಷಾಂ ದಯಾಶೀಲಾದಿಭಿಃ ಗುಣೈಃ |
ನವ್ಯವಾಗೀಶವರ್ಯಾಯ ಪರಕಾಲಾಯ ಮಂಗಲಂ ||೧||

ಶಾಂತಿಭಕ್ತಿವಿರಕ್ತ್ಯಾದಿ-ಮುಕ್ತಾರತ್ನೌಘಶಾಲಿನೇ |
ಮಂಗಲಂ ಸುಗಭೀರಾಯ ನವ್ಯವಾಗೀಶಸಿಂಧವೇ ||೨||

ತಪಸ್ವಿನೇಽಪಿ ಶಾಂತಾಯ ಸರ್ವಜ್ಞಾಯಾಽಪಿ ಮೌನಿನೇ |
ಮೈತ್ರೀಗುಣಸಮಾಶ್ಲಿಷ್ಟೈಃ ಗುಣೈಃ ಜುಷ್ಟಾಯ ಮಂಗಲಂ ||೩||

ಮಂತ್ರಸಿದ್ಧಾಯ ಬುದ್ಧಾಯ ಜ್ಞಾನವೃದ್ಧಾಯ ಯೋಗಿನೇ |
ಭಕ್ತಿವೈರಾಗ್ಯರೂಪಾಯ ಮಂಗಲಂ ಹಂಸರೂಪಿಣೇ ||೪||

ಜಿಹ್ವಾಗ್ರವಿಲಸನ್ಮಂತ್ರರಾಜಾಯಾಽಽಜಾನಶುದ್ಧಯೇ |
ಶ್ರೀಭಾಷ್ಯಾದಿ-ಮಹಾಗ್ರಂಥ-ಸಾರಜ್ಞಾಯಾಽಸ್ತು ಮಂಗಲಂ ||೫||

ಬ್ರಹ್ಮವರ್ಚಸಪೂರ್ಣಾಯ ತೇಜಸೋಜ್ಜ್ವಲಿತಾಯ ಚ |

ಸ್ಪೃಹಣೀಯಚರಿತ್ರಾಯ ನಿಸ್ಸ್ಪೃಹಾಯಾಸ್ತು ಮಂಗಲಂ ॥೬॥

ಭವ್ಯಾಯ ಭವಿತವ್ಯಾಯ ಭವಾಭಾವಾಯ ಭೂಷ್ಣವಃ ।
ಭಾವಯಂತಿ ಯಮೇವಾಂತಃ ತಸ್ಮೈ ಭವ್ಯಾಯ ಮಂಗಲಂ ॥೭॥

ಕೋಪಾವಲೇಪದೂರಾಯ ಕರುಣಾಮೃತವರ್ಷಿಣೇ ।
ವಿಲಸನ್ಮಂದಹಾಸಾಯ ತಸ್ಮೈ ಸೌಮ್ಯಾಯ ಮಂಗಲಂ ॥೮॥

ಶ್ರೀಹಯಾಸ್ಯಾಜ್ಞಯಾ ಲಬ್ಧ-ತುರೀಯಾಶ್ರಮಸೇವಿನೇ ।
ನವ್ಯವಾಗೀಶಗುರವೇ ತಸ್ಮೈ ಸೇವ್ಯಾಯ ಮಂಗಲಂ ॥೯॥

ಧರ್ಮಂ ಸಂಚಾಲಯಾಮಾಸ ಯಶ್ಚತುರ್ಭಿಃ ಪದ್ಯೈರಪಿ ।
ಕಲೌ ಪದ್ಭ್ಯಾಂ ಚಲನ್ನೇವ ತಸ್ಮೈ ಶ್ರೇಷ್ಠಾಯ ಮಂಗಲಂ ॥೧೦॥

ಸರ್ವೇ ಚಾತ್ಮಗುಣಾಃ ಸರ್ವಾಃ ವಿದ್ಯಾಃ ಸರ್ವಾಃ ಚ ಸಿದ್ಧಯಃ ।
ಯಮೇವಾಶ್ರಿತ್ಯ ದೀವ್ಯಂತಿ ತಸ್ಮೈ ದಿವ್ಯಾಯ ಮಂಗಲಂ ॥೧೧॥

ಮಂಗಲಂ ಶ್ರೀಹಯಗ್ರೀವನಿತ್ಯಕೈಂಕರ್ಯಶಾಲಿನೇ ।
ನವ್ಯವಾಗೀಶಮುನಯೇ ಭೂಯೊ ಭೂಯೋಽಸ್ತು ಮಂಗಲಂ ॥೧೨॥

ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ

**ಲಕ್ಷ್ಮೀನಾಥಾರಂಭಾಂ ಯತಿಪತಿನಿಗಮಾಂಚಲಾರ್ಯಕೃತಗುಂಭಾಂ ।**
**ಅಸ್ಮದ್ಗುರುಪರ್ಯಂತಾಂ ಸೇವೇಽಹಂ ಗುರುಪರಂಪರಾಂ ಶಾಂತಾಂ ॥**
**(ಶ್ರೀಕೃಷ್ಣ ಬ್ರಹ್ಮತಂತ್ರಸ್ವತಂತ್ರ ಪರಕಾಲ ಸ್ವಾಮಿ)**

॥ ಶ್ರೀಃ ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ ॥

ಶ್ರೀಮತೇ ಅನಂತರಂಗಾರ್ಯಮಹಾದೇಶಿಕಾಯ ನಮ:

## ಪರಮಪೂಜ್ಯ ಆಚಾರ್ಯಪಾದರಡಿದಾವರೆಗಳಲ್ಲಿ

# ಅಂಜಲಿ ಸಮರ್ಪಣೆ

ಶ್ರೀಮತೀ ಕಮಲಾ ಗೋವಿಂದಾಚಾರ್ಯ

ಬೆಂಗಳೂರು

---

**ಲಕ್ಷ್ಮೀಹಯಾಸ್ಯ ಪದೂವರಿವಸ್ಯೈಕ ಕಾಂತಮಾನಸಸ್ಸತತಂ ।**
**ಜಯತು ಶ್ರೀಮದಭಿನವರಾಮಾನುಜ ಸಂಯಮೀಂದ್ರ ಪರಕಾಲಃ ॥**

ಸತ್ಸಂಪ್ರದಾಯ ಪ್ರವರ್ತಕ ಪರಂಪರೆಯಲ್ಲಿ ಬಂದವರೂ, ದೇಶಿಕ ದರ್ಶನ ಚೂಡಾಮಣಿಗಳೂ, ಮಹಾಮಹೋಪಾಧ್ಯಾಯರೂ, ಸ್ವಚ್ಛಂದಕುಲಸರೋಜದಿವಾಕರರೂ ಆದ ತೀರ್ಥರೂಪ ಶ್ರೀಮಾನ್ ಅನಂತರಂಗಾಚಾರ್ಯಸ್ವಾಮಿಗಳನ್ನು, ಪೂರ್ವಸುಕೃತವಿಶೇಷಣಗಳ ಪ್ರಭಾವಗಳಿಂದ, ನನ್ನ ತಂದೆಯಾಗಿಯೂ, ಆಚಾರ್ಯರನ್ನಾಗಿಯೂ ಪಡೆಯುವ ಭಾಗ್ಯ ದೊರೆತಿರುವುದು ನನ್ನ ಜನ್ಮಕ್ಕೆ ಸಾರ್ಥಕ್ಯವನ್ನು ತಂದುಕೊಟ್ಟಿದೆ. ಅಂತೆಯೇ ಸರ್ವತಂತ್ರಸ್ವತಂತ್ರೇತ್ಯಾದಿ ಬಿರುದಾಂಕಿತರಾದ ಸ್ವಾಮಿ ಶ್ರೀಮನ್ನಿಗಮಾಂತಮಹಾದೇಶಿಕರ ಚರಣನಳಿನಗಳ ಕಾಂತಿಯಿಂದ ದೇದೀಪ್ಯಮಯವಾಗಿ ಬೆಳಗುತ್ತಿರುವ ಶ್ರೀಬ್ರಹ್ಮತಂತ್ರಸ್ವತಂತ್ರ ಪರಕಾಲಸ್ವಾಮಿ ಆಚಾರ್ಯಪರಂಪರೆಯಲ್ಲಿ, ದಿಕ್ಚಕ್ರವಾಲೋಜ್ಜ್ವಲಖ್ಯಾತಿಯಿಂದ ಬೆಳಗಿದ ಪರಮಹಂಸೇತ್ಯಾದಿ ಶ್ರೀಮದಭಿನವ ರಾಮಾನುಜ ಬ್ರಹ್ಮತಂತ್ರಸ್ವತಂತ್ರ ಪರಕಾಲ ಸ್ವಾಮಿಗಳ ದಿವ್ಯಚರಣಚ್ಛಾಯೆಯಲ್ಲಿ, ಸಮಾಶ್ರಯಣ-ಮಂತ್ರೋಪದೇಶ ಸ್ವೀಕಾರವನ್ನೂ, ಪ್ರಪತ್ತ್ಯುಪಾಯಾನುಷ್ಠಾನವನ್ನೂ ನೆರವೇರಿಸಿಕೊಂಡಿರುವ ಪರಮಸೌಭಾಗ್ಯವೂ ನನ್ನದಾಗಿದೆ. ಇದೇ ಪರಂಪರೆಯಲ್ಲಿ ಶ್ರೀಲಕ್ಷ್ಮೀಹಯಗ್ರೀವದಿವ್ಯಪಾದುಕಾಸೇವಕರಾಗಿ ದಿವ್ಯಾಸ್ಥಾನವನ್ನಲಂಕರಿಸಿರುವವರೂ, ಪರಮ ತಪೋನಿಷ್ಠರೂ, ಅಸ್ಮದಾಚಾರ್ಯರೂ ಆದ ಶ್ರೀಮದಭಿನವ ವಾಗೀಶಬ್ರಹ್ಮತಂತ್ರಸ್ವತಂತ್ರ ಪರಕಾಲಸ್ವಾಮಿಗಳ ನಿರವಗ್ರಹಾನುಗ್ರಹಗಳಿಗೆ ಪಾತ್ರಳಾದ ನಾನು, ಅವರ ಶತಾಭಿಷೇಕಮಹೋತ್ಸವಾಂಗವಾಗಿ ಈ ಅಂಜಲಿಬದ್ಧ ಪದಪುಷ್ಪಗಳ ಸಮರ್ಪಣೆಯನ್ನು ಅವರ ಶ್ರೀಪಾದಗಳಲ್ಲಿ ಸಮರ್ಪಿಸುತ್ತಿದ್ದೇನೆ.

ಪೂರ್ವಾಶ್ರಮದಲ್ಲಿ ಶ್ರೀನಿವಾಸಾಚಾರ್ಯರೆಂಬ ನಾಮಾಂಕಿತದಿಂದ ಪ್ರಖ್ಯಾತರಾದ, ಕೌಶಿಕಗೋತ್ರಜರೂ, ಸ್ವಚ್ಛಂದ ಕುಲೋದ್ಭವರೂ, ಆದ ನಮ್ಮ ಸ್ವಾಮಿಗಳು ನಮೆಲ್ಲರಿಗೂ ಪಿತೃಸಮಾನರಾದವರು. ನಮ್ಮೆಲ್ಲರ

ವಿಷಯದಲ್ಲಿ ಅತ್ಯಂತ ಕೃಪೆ-ಕರುಣೆಗಳೊಂದಿಗೆ ವ್ಯವಹರಿಸುತ್ತಿದ್ದರು. ಬಾಲ್ಯದಲ್ಲಿಯೇ ಅವರ ತಪಶ್ಶಕ್ತಿ, ಆಚರಣೆ ಹಾಗು ಅನುಷ್ಠಾನವೈಭವಗಳನ್ನು ತಿಳಿದು ಪ್ರಭಾವಿತರಾದ ನಮಗೆ ಅವರ ವಿಷಯದಲ್ಲಿ ಸದಾ ಆಚಾರ್ಯಭಾವನೆಯೇ ಪ್ರಧಾನವಾಗಿ ಮೂಡುತಿತ್ತು. ಎಲ್ಲ ಹಬ್ಬ-ಹರಿದಿನ-ಸತ್ಸಂದರ್ಭಗಳಲ್ಲಿಯೂ ಹರ್ಷೋನ್ಮುಖರಾಗಿ, ಶ್ರೀಹಯಶೀರ್ಷನನ್ನು ದೀರ್ಘವಾಗಿ ಸ್ಮರಿಸಿಕೊಂಡು ವೇದೋಕ್ತವಾಗಿ ಹಾರೈಸಿ ಆಶೀರ್ವದಿಸುತ್ತಿದ್ದರು. ನಮ್ಮ ಪಿತೃವರ್ಯರ ಕಾಲಕ್ಷೇಪಗೋಷ್ಠಿಯಲ್ಲಿ ಅನ್ವಯಿಸಲು ಬರುವಾಗಲೆಲ್ಲಾ, ಅವರ ಗೃಹಾಲಯದ ಅರ್ಚಾಮೂರ್ತಿಗಳಿಗೆ ಹಾಗು ನಿತ್ಯ ಶ್ರೀನಾರಸಿಂಹ-ಸುದರ್ಶನ-ಯಜ್ಞಪುರುಷನಿಗೆ ಸಮರ್ಪಿಸಿದ ಪರಮಭೋಗ್ಯವಾದ ನಿವೇದನವನ್ನು ತಂದು ನಮ್ಮೆಲ್ಲರಿಗೂ ಪ್ರಸಾದವಾಗಿ ವಿನಿಯೋಗಿಸುತ್ತಿದ್ದರು. “ಪರಸ್ಪರಂಭಾವಯಂತಂ” ಎಂಬಂತೆ ಸ್ವಾಮಿಯ ವಿಷಯದಲ್ಲಿ ನಮ್ಮ ತಂದೆಯವರಿಗೆ ಅತ್ಯಂತ ಹೆಮ್ಮೆ, ಮೆಚ್ಚುಗೆ, ಆತ್ಮೀಯತೆ, ಗೌರವ. ಸ್ವಾಮಿಗಳೂ ನಮ್ಮ ತಂದೆಯವರ ವಿಷಯದಲ್ಲಿ ಆಚಾರ್ಯಪ್ರತಿಪತ್ತಿ, ಪಿತೃಸಮಾನ ಭಕ್ತಿ, ಅಭಿಮಾನ, ಗೌರವಗಳನ್ನಿಟ್ಟುಕೊಂಡಿದ್ದರು.

ವೈರಾಗ್ಯನಿಧಿಯಾಗಿ ಶ್ರೀಬ್ರಹ್ಮತಂತ್ರಸ್ವತಂತ್ರಪರಕಾಲಮಠದಿವ್ಯಾಸ್ಥಾನವನ್ನಲಂಕರಿಸಿ, ಅಪೌರುಷೇಯವಾದ ಶುದ್ಧಸತ್ತ್ವಮಯವಾದ ಪ್ರಾಚೀನವಾದ ಅನಪಾಯಪ್ರಭೆಯಿಂದ ಕೂಡಿದ ಶ್ರೀಲಕ್ಷ್ಮೀಹಯಗ್ರೀವ ದಿವ್ಯಮಂಗಳಸ್ವರೂಪವಿಗ್ರಹದ ನಿತ್ಯಾರಾಧನೆಯನ್ನು ನೆರವೇರಿಸುತ್ತಿರುವ, ಪರಮವೈದಿಕ ಶ್ರೀವೈಷ್ಣವ ಶ್ರೀಸಂಪ್ರದಾಯ ಪ್ರವರ್ತನವನ್ನು ಮಾಡುತ್ತಿರುವ, ಪೂರ್ವಾಚಾರ್ಯರುಗಳು ನಮ್ಮೆಲ್ಲರಿಗೂ ತೋರಿಸಿಕೊಟ್ಟಿರುವ ತತ್ತ್ವ-ಹಿತ-ಪುರುಷಾರ್ಥಗಳನ್ನು ಉಪದೇಶಿಸುತ್ತಿರುವ, ಸಕಲಾತ್ಮಗುಣ ಪೌಷ್ಕಲ್ಯವನ್ನು ಹೊಂದಿರುವ, ಅನುಷ್ಠಾನ ತತ್ಪರರೂ, ವೈದುಷ್ಯಸಂಪನ್ನರೂ ಆಗಿರುವ ಇಂತಹ ಮಹಾಮಹಿಮರ ಶತಾಭಿಷೇಕ ಮಹೋತ್ಸವ ವೈಭವವನ್ನು ನೋಡಿ ಕಣ್ತುಂಬಿಕೊಳ್ಳುವ ಸದವಕಾಶ ನಮಗೆ ದೊರೆತಿರುವುದು ಅದೆಂತಹ ಅನುಗ್ರಹ ವಿಶೇಷ!

“ದೇವಮಿವ ಆಚಾರ್ಯಮುಪಾಸೀತ”, “ಆಚಾರ್ಯಾದಿಹ ದೈವತಾಂ ಸಮಧಿಕಾಂ ಅನ್ಯಾಂ ನ ಮನ್ಯಾಮಹೇ”, “ಗುರುಂ ಪ್ರಕಾಶಯೇತ್ ಧೀಮಾನ್”, “ಗುರುಸ್ಸಾಕ್ಷಾತ್ ಪರಬ್ರಹ್ಮ” ಇತ್ಯಾದಿಯಾಗಿ ಶ್ರುತಿಸ್ಮೃತಿಗಳು ಪರಮಪುರುಷಾರ್ಥವನ್ನು ಹೊಂದುವ ಮಾರ್ಗವನ್ನು ಉಪದೇಶಿಸುವ ಸದಾಚಾರ್ಯರ ವಿಷಯದಲ್ಲಿ ಅತಿ ಉತ್ಕೃಷ್ಟವಾಗಿ ನುಡಿದಿವೆ. ಇಂತಹ ಸದಾಚಾರ್ಯರನ್ನು ಸರ್ವಕಾಲ-ಸರ್ವಾವಸ್ಥೆಗಳಲ್ಲಿಯೂ ನಮ್ಮ ಧ್ಯಾನಪರಂಪರೆಗಳಲ್ಲಿ ನೆನೆದು, ಮನದಣಿದು ಕೃತಾರ್ಥರಾಗಬೇಕು. ಅವರ ಸದ್ಗುಣಗಳನ್ನು ಹಾಡಿ-ಹೊಗಳಿ-ಕೊಂಡಾಡಬೇಕು. ಪರಮನಂತೆಯೇ ನಮ್ಮ ಆಚಾರ್ಯರ ವೈಭವವೂ ಎಲ್ಲೆಯಿಲ್ಲದ ಸಮುದ್ರದಂತೆ. ಎಷ್ಟು ಬರೆದು ಕೊಂಡಾಡಿದರೂ ಆಸಮುದ್ರದ ಎಲ್ಲೆಯು ನಮಗೆ ಗೋಚರವಾಗುವುದಿಲ್ಲ. ವೇದಗಳೇ “ಯತೋ ವಾಚೋನಿವರ್ತಂತೇ” ಎಂದು ತಿಳಿಸಿರುವಂತೆ ನಾವು ನಮ್ಮ ಆಚಾರ್ಯರನ್ನು ಸಂಪೂರ್ಣವಾಗಿ ಕೊಂಡಾಡಲಾಗದೆ ಹಿಂದಕ್ಕೆ ಬರಬೇಕಷ್ಟೇ.

ಧರ್ಮವನ್ನು ನಾವು ರಕ್ಷಿಸಿದರೆ ಆಧರ್ಮವು ನಮ್ಮನ್ನು ರಕ್ಷಿಸುತ್ತದೆ ಎಂಬಂತೆ ಧರ್ಮಾಚರಣೆಯಲ್ಲಿ ಕಷ್ಟವಾಗದಂತೆ ಧರ್ಮಸೂಕ್ಷ್ಮಗಳನ್ನೆಲ್ಲಾಸುಲಭವಾದ ಮಾತುಗಳಲ್ಲಿ ಜೋಡಿಸಿಕೊಟ್ಟಿರುವವರು ನಮ್ಮ ಆಚಾರ್ಯವರ್ಯರು. ಅವರ ಮಾತುಗಳು ಅಪೌರುಷೇಯವೈಭವವುಳ್ಳವೂ, ದೈವದತ್ತವೂ, ಅಖಂಡವೂ, ಅನಂತವೂ ಆಗಿರುವುದರಿಂದ ಅವು ಶ್ರುತಿಗಳಿಗೆ ಸಮಾನವಾಗಿದೆ. ಇವರ ಆದರ್ಶವು ಸಮರ್ಥವಾದ ಸಂದೇಶವಾಗಿ ಪ್ರತಿಯೊಂದೂ ನಮಗೆ

ದಾರಿದೀಪಿಗೆಯಂತಿದ್ದು ನಮ್ಮ ಜೀವನಕ್ಕೆ ಬೆಳಕು ನೀಡುತ್ತಾ ಇದೆ. ಪರಮಾತ್ಮನ ಸ್ವರೂಪ, ರೂಪ, ಗುಣಗಳ ಅಧ್ಯಯನ ಅನುಸಂಧಾನಗಳನ್ನು ಮಾಡುವುದು, ನಮ್ಮ ಆಚಾರ್ಯರ ಅನುಗ್ರಹಕ್ಕೆ ಪಾತ್ರರಾಗಿ ಸಮಾಶ್ರಯಣ ಮತ್ತು ಪ್ರಪತ್ತಿಗಳನ್ನು ಅನುಷ್ಠಿಸಿ ಸರ್ವದೇಶ ಸರ್ವಕಾಲ ಸರ್ವಾವಸ್ಥೆಗಳಲ್ಲಿಯೂ ಜಿತೇಂದ್ರಿಯರಾಗಿ ಆತ್ಮ-ಪರಮಾತ್ಮ ಸ್ವರೂಪಜ್ಞಾನಾನುಸಂಧಾನದೊಂದಿಗೆ ಪರಮಾತ್ಮನನ್ನು ಭಕ್ತಿಯಿಂದ ಸ್ಮರಿಸುತ್ತ ಧ್ಯಾನಿಸುತ್ತ ಅವನಿಗೆ ಶರಣಾಗಿ ಅಹಂಕಾರ ಮಮಕಾರ ರಹಿತರಾಗಿ ನಮ್ಮ ಕರ್ತವ್ಯ-ಕರ್ಮಗಳನ್ನು ಫಲಾಸಕ್ತರಹಿತವಾಗಿ ಭಗವದಾರಾಧನರೂಪವಾಗಿ ಮಾಡಬೇಕೆಂಬುದೇ ನಮ್ಮ ಆಚಾರ್ಯರ ಉಪದೇಶ.

ಸೂರ್ಯನ ಸಮ್ಮುಖದಲ್ಲಿ ತಾವರೆಯು ಅರಳುವಂತೆ, ಆಚಾರ್ಯರೆಂಬ ಸೂರ್ಯರ ಕಾಂತಿಯಿಂದ ಒಬ್ಬ ಜೀವಾತ್ಮನಲ್ಲಿ ಜ್ಞಾನವೆಂಬ ನಳಿನವು ವಿಕಾಸವಾಗುತ್ತದೆ. ನಮ್ಮ ಆಚಾರ್ಯರ ಉಪದೇಶಗಳು ನಮಗೆ ವಾಕ್ ಶುದ್ಧಿಯನ್ನೂ ಹೃದಯಶುದ್ಧಿಯನ್ನೂ ಅನುಗ್ರಹಿಸಲಿ. ನಮ್ಮ ಕಣ್ಣಿಗೆ ಅವರ ಶ್ರೀಚರಣಾರವಿಂದವು ಎಂದೆಂದಿಗೂ ರಕ್ಷಕ ದೀಪದಂತೆ ಬೆಳಗಲಿ. ನಮ್ಮ ಸ್ವಾಮಿಯ ಅನುಗ್ರಹದಿಂದ ಮನೋಜ್ಞವಾದ ಬ್ರಹ್ಮಜ್ಞಾನದ ಪ್ರವಾಹವು ಮರುಳುಗಾಡಿನಂತಿರುವ ನಮ್ಮ ಬುದ್ಧಿಯನ್ನು ಬಂದು ಸೇರಲಿ ಎಂದು ನಾವು ಪ್ರಾರ್ಥಿಸೋಣ.

'ದೇಶಿಕ' ಎಂಬ ನಿರುಪಾಧಿಕ ಶಬ್ದವನ್ನೇ ತಮಗೆ ನಾಮವನ್ನಾಗಿಸಿಕೊಂಡ ವೇದಾಂತಾಚಾರ್ಯರಾದ ಶ್ರೀಮದ್ವೇಂಕಟನಾಥರು, ಅವರು ರಚಿಸಿದ ನ್ಯಾಸವಿಂಶತಿಯಲ್ಲಿ ಹೇಳಿರುವ ಸದಾಚಾರ ಲಕ್ಷಣಗಳೆಲ್ಲವನ್ನೂ ಪರಿಪೂರ್ಣವಾಗಿ ಹೊಂದಿ ಶೋಭಾಯಮಾನವಾಗಿ ಬೆಳಗುತ್ತಿರುವ ನಮ್ಮ ಸ್ವಾಮಿಯನ್ನು, ದೇಶಿಕರ ಆ ಸೂಕ್ತಿಯಿಂದಲೇ ಹಾಡಿ ಕೊಂಡಾಡಿ ನಮ್ಮ ಧನ್ಯತೆಯನ್ನು ಸಮರ್ಪಿಸಿಕೊಳ್ಳೋಣ.

ಸಿದ್ಧಂ ಸತ್ಸಂಪ್ರದಾಯಂ ಸ್ಥಿರಧಿಯಮನಘಂ ಶ್ರೋತ್ರಿಯಂ ಬ್ರಹ್ಮನಿಷ್ಠಂ
ಸತ್ತ್ವಸ್ಥಂ ಸತ್ಯವಾಚಂ ಸಮಯನಿಯತಯಾ ಸಾಧುವೃತ್ತ್ಯಾ ಸಮೇತಂ ।
ಡಂಭಾಸೂಯಾದಿಮುಕ್ತಂ ಜಿತವಿಷಯಗಣಂ ದೀರ್ಘಬಂಧುಂ ದಯಾಳುಂ
ಸ್ಖಾಲಿತ್ಯೇ ಶಾಸಿತಾರಂ ಸ್ವಪರಹಿತಪರಂ ದೇಶಿಕಂ ಭೂಷ್ಣುರೀಪ್ಸೇತ್ ॥

ನಮ್ಮ ಆಚಾರ್ಯರು ವೇದೋಕ್ತವಾದ ನೂರು ವರ್ಷಗಳಕಾಲ ಅರೋಗದೃಢಗಾತ್ರದೊಂದಿಗೆ ಸತ್ಸಂಪ್ರದಾಯಸೇವೆಯಲ್ಲಿ ನಿರತರಾಗಿದ್ದು ಬೆಳಗಬೇಕೆಂದೂ, ಆಚಾರ್ಯರ ವಿಭವಾವತಾರದಲ್ಲಿಯೇ ಅವರ ಜನ್ಮಶತಮಾನೋತ್ಸವದ ವೈಭವವನ್ನೂ ಸಹ ನಾವೆಲ್ಲರೂ ನೋಡಿ, ಕೊಂಡಾಡಿ ಕೃತಾರ್ಥರಾಗುವಂತೆ ಅನುಗ್ರಹಿಸಬೇಕೆಂದು, ಶ್ರೀಲಕ್ಷ್ಮೀಹಯಗ್ರೀವನ ಹಾಗು ಪೂರ್ವಾಚಾರ್ಯಪಾದುಕೆಗಳ ದಿವ್ಯಸನ್ನಿಧಿಗಳಲ್ಲಿ ಅಂಜಲಿಬದ್ಧರಾಗಿ ನಿಂತು ಪ್ರಾರ್ಥಿಸೋಣ. ಆಚಾರ್ಯರ ವೈಭವವನ್ನು ಯಥಾಶಕ್ತಿ ಅಕ್ಷರಗಳಲ್ಲಿ ಹಾಡಿ ಕೊಂಡಾಡುವ ಸದವಕಾಶವನ್ನು ಕರುಣಿಸಿದ ನನ್ನ ಆಚಾರ್ಯರ ಚರಣಪಾದುಕೆಗಳಲ್ಲಿ ಧನ್ಯತೆಯನ್ನು ಸೂಚಿಸುತ್ತ ಪೂರ್ವಾಚಾರ್ಯಪರಂಪರೆಯ ಸ್ಮರಣೆಯೊಂದಿಗೆ ಅಂಜಲಿಬದ್ಧವಾಗಿ ಈ ಅಕ್ಷರಮಾಲೆಯನ್ನು ಅವರ ಶತಾಭಿಷೇಕಮಹೋತ್ಸವಾಂಗವಾಗಿ ಅವರ ಶ್ರೀಚರಣಗಳಲ್ಲಿ ಸಮರ್ಪಿಸಿಕೊಳ್ಳುತ್ತಿದ್ದೇನೆ.

**ಕವಿತಾರ್ಕಿಕ ಸಿಂಹಾಯ ಕಲ್ಯಾಣಗುಣಶಾಲಿನೇ. ಶ್ರೀಮತೇ ವೇಂಕಟೇಶಾಯ ವೇದಾಂತ ಗುರವೇ ನಮಃ**

ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರಸ್ವತಂತ್ರ ಪರಕಾಲ ಯತೀಂದ್ರ ಮಹಾ ದೇಶಿಕಾಯ ನಮಃ

॥ ಶ್ರೀಃ ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ ॥

# ನಮನ

ಶ್ರೀಮತಿ ಎ.ಗೀತಾ ರಾಘವನ್

ಬೆಂಗಳೂರು

---

ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ

ನಮಿಸುವೆಂ ನಮಿಸುವೆಂ ಗುರುಗಳಡಿದಾವರೆಗೆ
ಶ್ರದ್ಧೆ ಭಕ್ತಿಗಳಿಂದ ಶಿರಬಾಗಿ ನಮಿಸುವೆಂ
ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಯತಿವರರ
ಸಿರಿಪಾದಯುಗಳವಂ ನಮ್ರದಲಿ ಪೂಜಿಸುತ ------ [೧]

ನಮ್ಮ ಶ್ರೀಗುರುವರರು ಮಹಿಷೂರು ರಾಜಗುರು
ಲೋಕವನುದ್ಧರಿಪ ಲೋಕಪೂಜ್ಯರು ಇವರು
ಜ್ಞಾನ ವೈರಾಗ್ಯ ನಿಧಿ ವಾತ್ಸಲ್ಯಪೂರಿತರು
ಚೇತನರ ರಕ್ಷಿಸುವ ದೀಕ್ಷೆತೊಟ್ಟಿಹರು ------ [೨]

ಶಿಷ್ಯಕೋಟಿಯ ಜ್ಞಾನವೃದ್ಧಿಗೇ ಶ್ರಮಿಸುವರು
ಹಯವದನ ಹೋಮಗಳ ಶ್ರೀಮಠದಿ ನಡೆಸುವರು
ಬ್ರಹ್ಮ ತೇಜಸ್ಸಿನಿಂ ಮೆರೆವ ಗುರುವರರಿವರು
ಎರಡು ದಶಕಕೆ ಮೀರಿ ಶ್ರೀಮಠದ ಸಾರ್ವಜ್ಞರು ------ [೩]

ಬಡವ ಬಲ್ಲಿದನೆಂಬ ಜ್ಞಾನಿ-ಅಜ್ಞಾನಿ ಎಂಬ
ಗುಣಯುಕ್ತ ಗುಣರಹಿತನೆಂಬ ಭೇದವೇ ಇಲ್ಲ
ಶರಣು ಶರಣೆಂದು ಶರಣಾದ ಜನರಿಗೆ
ದೇವನಲಿ ಭಿನ್ನವಿಸಿ ಸದ್ಗತಿಯ ಕರಣಿಸುವ ಪೂಜ್ಯರಿವರು ------ [೪]

ಯತಿವರರು ತಾವೆನಿಸಿ ಲಕ್ಷ್ಮೀಹಯಾಸ್ಯನಂ
ಅನುದಿನಂ ಮೋದದಿಂ ಭಕ್ತಿಯಿಂದರ್ಚಿಸುತ
ಲೋಕ ಕಲ್ಯಾಣಮಂ ಸಾಧಿಸಿಹ ಪೂಜ್ಯರಿಗೆ
ಭಕ್ತಿಯಿಂ ನೇಮದಿಂ ನಮಿಸುವೆ ನಮಿಸುವೆಂ ------ [೫]

ಇಂದು ಈ ಸುದಿನವು ಪೂಜ್ಯಗುರುವರರ
ಶುಭತಮದ ಜನ್ಮದುತ್ಸವದ ಸಂಭ್ರಮವು
ಗುರುವರರ ಪದಕಮಲಗಳ ಭಕ್ತಿಕುಸುಮಗಳಿಂದ
ಅರ್ಚನೆಯಗೈಯುತ್ತ ನಮಿಸುವೆಂ ನಮಿಸುವೆಂ ------ [೬]

ಭಕ್ತಿ ಶ್ರದ್ಧೆಗಳಿಂದ ತಲೆಬಾಗಿ ನಮಿಸುತಲಿ
ಕರಗಳಂ ಮುಗಿಯುತಲಿ ಅವರ ಕರುಣೆಯ ನೋಟ
ನಮ್ಮನೆಂದಿಗೂ ಸಲಹೆನ್ನುತ ಬೇಡಿ
ಗುರುಗಳಡಿದಾವರೆಗೆ ಸಂತತಂ ಪೂಜಿಪೆವು ------ [೭]

ಜಯಮಕ್ಕೆ ಜಯಮಕ್ಕೆ ಲಕ್ಷ್ಮೀಹಯಾಸ್ಯನಿಗೆ
ಜಯಮಕ್ಕೆ ಜಯಮಕ್ಕೆ ಶ್ರೀಮಠದ ಗುರುಗಳಿಗೆ
ಜಯಮಕ್ಕೆ ಜಯಮಕ್ಕೆ ಗುರುಪರಂಪರೆಗೆಲ್ಲಾ
ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಯತಿವರಗೆ
ಜಯಮಕ್ಕೆ ಜಯಮಕ್ಕೆ ಸಕಲಕಾಲದೊಳು

॥ ಶ್ರೀಃ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ॥

# "ಶ್ರೀ ಭಾಷ್ಯ" ಮಹಾಗ್ರಂಥದ ಮಂಗಳ ಶ್ಲೋಕದ ವೈಭವ

ಶ್ರೀಮತಿ ಎ.ಗೀತಾ ರಾಘವನ್

ಬೆಂಗಳೂರು

ನಮ್ಮ ಪೂಜ್ಯ ತಂದೆಯವರಾದ ಆಚಾರ್ಯ ವಿದ್ವಾನ್ ಅನಂತರಂಗಾಚಾರ್ಯರು ಎಂತಹ ಗಹನ,ಗಂಭೀರ,ಕಠಿನವಾದ ವಿಷಯಗಳನ್ನೂ ಇದು ಇಷ್ಟು ಸರಳವಾದುದೇ ಎಂದು ಶಿಷ್ಯರು ಆಶ್ಚರ್ಯಪಡುವರೀತಿಯಲ್ಲಿ ಭೋಧಿಸುತ್ತಿದ್ದುದು ಎಲ್ಲರಿಗೂ ತಿಳಿದಿರುವ ಸತ್ಯ.ಅವರು ಶ್ರೀ ಭಾಷ್ಯ ಮಹಾಗ್ರಂಥದ ಸತ್ಕಾಲಕ್ಷೇಪ ನಮಗೆ ನಡೆಸಿದ ಸಮಯದಲ್ಲಿ ಅವರು ಅನಾರೋಗ್ಯದಿಂದ ನರಳುತ್ತಿದ್ದರೂ ವಯೋವೃದ್ಧರಾಗಿದ್ದರೂ ಜ್ಞಾನದಿಂದ ಪ್ರಜ್ವಲಿಸುತ್ತಾ ಸದಾ ಮಂದಹಾಸದೊಡನೆ ತತ್ವಗಳನ್ನು ಅವರದೇ ಆದ ವಿಶಿಷ್ಟರೀತಿಯಲ್ಲಿ ಬೋಧಿಸುತ್ತಿದ್ದರು.

ಅವರು ನಮ್ಮ ಆಚಾರ್ಯರು ಭಗವಾನ್ ಭಾಷ್ಯಕಾರರು ಶ್ರೀಭಾಷ್ಯದ ಮಂಗಳ ಶ್ಲೋಕದಲ್ಲಿ ನಾಲ್ಕು ಸಾಲುಗಳಲ್ಲಿ ಸಂಪೂರ್ಣ ಗ್ರಂಥದ ಎಲ್ಲಾ ವಿಷಯಗಳನ್ನು ಅಡಗಿಸಿ ತಿಳಿಸಿರುವ ಆಚಾರ್ಯರ ಅತ್ಯದ್ಭುತ ಅತ್ಯತಿಶಯ ಪಾಂಡಿತ್ಯ,ಸಾಮರ್ಥ್ಯ, ಕೌಶಲ್ಯವನ್ನು ನಮಗೆ ಅಷ್ಟೇ ಅದ್ಭುತವಾಗಿ ವಿವರಿಸುತ್ತಿದ್ದರು.ಅದು ನನ್ನ ಮನಸ್ಸಿನಲ್ಲಿ ಅಚ್ಚಳಿಯದೇ ನಿಂತಿದೆ.

ಇಂದು ನಮ್ಮ ಆಚಾರ್ಯರಾದ ಶ್ರೀ ಶ್ರೀ ಶ್ರೀ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಯತಿವರ್ಯರ ಶುಭತಮದ ಜನ್ಮದಿನೋತ್ಸವದಂದು ಆಚಾರ್ಯರು ಭಗವಾನ್ ಭಾಷ್ಯಕಾರರ ಪರಂಪರೆಯಲ್ಲಿ ಬಂದು ಅವರ ಎಲ್ಲಾ ಕಲ್ಯಾಣಗುಣಗಳು ಜ್ಞಾನ ಭಕ್ತಿ ವೈರಾಗ್ಯಗಳ ಪ್ರತಿನಿಧಿಗಳಾಗಿ ಅವರು ಆರಾಧಿಸುತ್ತಿದ್ದ ಶ್ರೀ ಲಕ್ಷ್ಮೀಹಯಾಸ್ಯನನ್ನು ಅವರಂತೆಯೇ ಭಕ್ತಿಯಿಂದ ಮೋದದಿಂದ ಆರಾಧಿಸುತ್ತಿರುವ ನಮ್ಮ ಪೂಜ್ಯ ಆಚಾರ್ಯರ ಪದಕಮಲಗಳಲ್ಲಿ ನನ್ನ ಈ "ಶ್ರೀ ಭಾಷ್ಯ ಮಹಾಗ್ರಂಥದ ಮಂಗಳಶ್ಲೋಕದ ವೈಭವ" ಎನ್ನುವ ಲೇಖನವನ್ನು ಭಕ್ತಿಯಿಂದ ಸಮರ್ಪಿಸುತ್ತಿದ್ದೇನೆ.

## "ಶ್ರೀ ಭಾಷ್ಯ" ಮಹಾಗ್ರಂಥದ ಮಂಗಳ ಶ್ಲೋಕದ ವೈಭವ

ಅಖಿಲ ಭುವನ ಜನ್ಮ ಸ್ಥೇಮ ಭಂಗಾದಿ ಲೀಲೆ
ವಿನತ ವಿವಿಧ ಭೂತ ವ್ರಾತ ರಕ್ಷೈಕ ದೀಕ್ಷೇ।
ಶ್ರುತಿ ಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ
ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ॥

"ಶ್ರೀ ಭಾಷ್ಯ" ಮಹಾಗ್ರಂಥ ಭಗವಂತನ ವಿಷಯವನ್ನು ಪ್ರತಿಪಾದಿಸುವುದರಿಂದ ಸದಾ ಸರ್ವದಾ ಅನುಭವಿಸಬೇಕಾದಂತಹ ರಸಮಯವಾದ ವಿಷಯ.ಭಗವನ್ನಾಮ,ಭಗವದ್ವಿಚಾರ ವಿವೇಚನೆ,ಭಗವತ್ಪ್ರಾಪ್ತಿಗೆ ಕಾರಣವಾದುದುರಿಂದ ಅತ್ಯಂತ ಸ್ವಾದುವಾದುದು."ವಾಸುದೇವ" ಎಂಬ ಜಪ ಮುಕ್ತಿ ಬೀಜ,ಮೋಕ್ಷಕ್ಕೆ ಕಾರಣವಾದುದು.ಅದಕ್ಕಿಂತ ಉತ್ತಮವಾದುದು ಇನ್ನೊಂದಿಲ್ಲ.ಇದನ್ನು ಎಲ್ಲರೂ ಅನುಭವಿಸಬೇಕೆಂಬುದು ಭಗವಾನ್ ರಾಮಾನುಜರ ಪ್ರಾರ್ಥನೆ.

ಉಪನಿಷತ್ತುಗಳಿಗೆ ವಿವಿಧವಾಗಿ ಅರ್ಥಗಳನ್ನು ಮಾಡುತ್ತಿದ್ದರು.ಆ ಎಲ್ಲಾಉಪನಿಷತ್ತುಗಳನ್ನು ಕೂಲಂಕಷವಾಗಿ ಅಧ್ಯಯನ ಮಾಡಿ,ಸಂದೇಹಗಳೆಲ್ಲೆಲ್ಲಿ ಇದೆಯೋ ಅವುಗಳನ್ನೆಲ್ಲಾ ಪರಿಹಾರ ಮಾಡಿ ಅದಕ್ಕೆ ಸಾರಭೂತವಾದ ಅರ್ಥವನ್ನು ಸ್ಥಾಪನೆ ಮಾಡಿದವರು ಬಾದರಾಯಣ ವ್ಯಾಸರು.ಹಿಂದೆ ಇನ್ನೂ ಅನೇಕರು ಬ್ರಹ್ಮಸೂತ್ರಗಳನ್ನು ಮಾಡಿದ್ದಾರೆ,ಆದರೆ ಅದು ಯಾವುದೂ ಈಗ ನಮಗೆ ಲಭ್ಯವಾಗಿಲ್ಲ.ಆದುದರಿಂದ ಬ್ರಹ್ಮಸೂತ್ರವೆಂದರೆ ಬಾದರಾಯಣ ಬ್ರಹ್ಮಸೂತ್ರ."ಅಥಾತೋ ಬ್ರಹ್ಮ ಜಿಜ್ಞಾಸ" ಎಂದು ಪ್ರಾರಂಭವಾಗಿ "ಅನಾವೃತ್ತಿಃ ಶಬ್ದಾತ್ ಅನಾವೃತಿಃ ಶಬ್ದಾತ್" ಎಂದು ಐದು ನೂರ ನಲವತ್ತೈದು ಸೂತ್ರಗಳು ಬರುತ್ತವೆ. ಇವುಗಳಿಗೆ ಏನೇನು ಸಂದೇಹಗಳು ಬರಬಹುದೋ ಅದೆಲ್ಲವನ್ನೂ ಅವರು ತೆಗೆದು ಕೊಟ್ಟಿದ್ದಾರೆ. ಇದು ಬಿಟ್ಟು ಬೇರೆ ಯಾವುದಾದರೂ ಸಂದೇಹ ಬರಬಹುದೆಂದು ಇದುವರೆಗೂ ಯಾರಿಗೂ ತಿಳಿಸಲಾಗಿಲ್ಲ.ಅಷ್ಟು ವ್ಯಾಪಕವಾಗಿ ಪರಿಶೀಲನೆ ಮಾಡಿ ಎಲ್ಲಾ ಸಂದೇಹಗಳನ್ನು ಪರಿಹಾರ ಮಾಡಿದ್ದಾರೆ.ಅದಕ್ಕೆ "ನಯಸೂತ್ರ" ವೆಂದೂ ಹೆಸರು.ಪರಬ್ರಹ್ಮವನ್ನು ವಿಚಾರ ಮಾಡುವುದರಿಂದ "ಬ್ರಹ್ಮ ಸೂತ್ರ" ವೆಂದೂ ಹೆಸರು."ಶಾರೀರಿಕ ಸೂತ್ರ"ವೆಂದೂ ಹೆಸರು.ಕಾರಣ "ಶಾರೀರಃ ಪರಮಾತ್ಮಾ ತತ್ ಪ್ರತಿಪಾದಕಂ ಶಾಸ್ತ್ರಂ ಶಾರೀರಕ ಶಾಸ್ತ್ರಂ".
ಇದನ್ನು ನಾಲ್ಕು ಅಧ್ಯಾಯಗಳಾಗಿ ವಿಂಗಡಿಸಿದ್ದಾರೆ.

೧] ಸಮನ್ವಯ ಅಧ್ಯಾಯ
೨] ಅವಿರೋಧ ಅಧ್ಯಾಯ
೩] ಸಾಧನಾಧ್ಯಾಯ
೪] ಫಲಾಧ್ಯಾಯ

ಒಂದೊಂದು ಅಧ್ಯಾಯದಲ್ಲೂ ನಾಲ್ಕು ಪಾದಗಳು[ಭಾಗಗಳು].ಒಂದೊಂದು ಪಾದದಲ್ಲೂ ಅನೇಕ ವಿಧವಾದ ಸೂತ್ರಗಳು.ಆ ಸೂತ್ರಗಳು ಸೇರಿ ಸೇರಿ ಒಂದೊಂದು ಅಧಿಕರಣಗಳಾಗಿವೆ.[ಅಧಿಕರಣ ಎಂದರೆ ವಿಷಯ]

ಒಂದು ವಿಷಯ.ಅದಕ್ಕೆ ಕಾರಣ ಒಂದು ಉಪನಿಷತ್ ವಾಕ್ಯ.ಒಂದೊಂದು ಅಧಿಕರಣದಲ್ಲೂ ಅದರ ಮೇಲೆ ಬರುವ ಸಂದೇಹಗಳನ್ನೆಲ್ಲಾ ತೆಗೆದು,ಸಂದೇಹ ಪರಿಹಾರ ಮಾಡಿ ಉಪನಿಷತ್ ವಾಕ್ಯದ ಅರ್ಥವನ್ನು ನಿಶ್ಚಯ ಮಾಡಿ ಹೇಳಿದ್ದಾರೆ.

ಸಮನ್ವಯ ಅಧ್ಯಾಯ --ಜಗತ್ಕಾರಣವೇನೆಂಬುದಕ್ಕೆ ಉಪನಿಷತ್ತಿನಲ್ಲಿ ಒಂದೊಂದು ಕಡೆ ಒಂದೊಂದು ಹೆಸರನ್ನು ಹೇಳಿದ್ದಾರೆ. ಒಂದು ಕಡೆ ಸತ್ ಎನ್ನುತ್ತಾರೆ,ಜ್ಯೋತಿ ಎನ್ನುತ್ತಾರೆ,ಆಕಾಶಃ,ದಹರಃ,ಎಂದೆಲ್ಲಾ ಬರುತ್ತದೆ.ಎಲ್ಲಾ ಯಾರನ್ನು ಹೇಳುತ್ತದೆ ಎಂದರೆ ಬೇರೆ ಬೇರೆ ಹೆಸರಿನಿಂದ ಯಾರನ್ನು ಹೇಳಿದ್ದಾರೋ ಅದು ಅವನ ತತ್ತ್ವ ಅದೇ ಪರಬ್ರಹ್ಮವಸ್ತು "ಶ್ರೀ ಮನ್ನಾರಾಯಣ" ಎಂದು ಮೊದಲನೆಯ ಅಧ್ಯಾಯದಲ್ಲಿ ಹೇಳುತ್ತಾರೆ.

ಶ್ರೀ ಭಾಷ್ಯ ಗ್ರಂಥವನ್ನು ರಾಮಾನುಜರು ರಚಿಸಿದ ಕಾರಣ -- ಯಾಮುನಾಚಾರ್ಯರಿಗೆ ಮೂರು ಅಪೇಕ್ಷೆಗಳಿದ್ದವು.

೧] ಬ್ರಹ್ಮ ಸೂತ್ರಗಳಿಗೆ ವಿಶಿಷ್ಟಾದ್ವೈತ ಪರವಾಗಿ ಭಾಷ್ಯ ಬರೆಯಬೇಕೆಂಬುದು,

೨] ವ್ಯಾಸರ ಸಹಸ್ರನಾಮಕ್ಕೆ ಭಾಷ್ಯ ಬರೆಯಬೇಕೆಂಬುದು--ಅದನ್ನು ಪರಾಶರ ಭಟ್ಟರಿಂದ"ಸಹಸ್ರ ನಾಮ ಭಾಷ್ಯ" ರಚನೆ ಮಾಡಿಸಿದರು.

೩] ಆಳ್ವಾರುಗಳ ಶ್ರೀ ಸೂಕ್ತಿ ಗಳಿಗೆ ಒಂದು ಗ್ರಂಥ ನಿರ್ಮಾಣ ಮಾಡಬೇಕೆಂಬುದು.ಅದನ್ನು ತಿರುಕ್ಕುರುಹೈ ಪಿಳ್ಳಾನ್ ಅವರಿಂದ "ಆರಾಯಿರಪ್ಪಡಿ" ಯ ರಚನೆ ಮಾಡಿಸಿದರು.

ಬ್ರಹ್ಮ ಸೂತ್ರಗಳಿಗೆ ಭಾಷ್ಯವನ್ನು ಸ್ವಾಮಿ ರಾಮಾನುಜರು ತಾವೇ ರಚಿಸಿದರು.ಬ್ರಹ್ಮ ಸೂತ್ರಗಳ ವಿಷಯ ಅತ್ಯಂತ ಗಂಭೀರವಾಗಿರುವುದುರಿಂದ ಆ ಗಾಢವಾದ ವಿಷಯವನ್ನು ಸದಾ ಸರ್ವದಾ ವಿಚಾರಮಾಡಿ ಮನಸ್ಸಿಗೆ ತಂದುಕೊಂಡು ನಿಶ್ಚಯ ಮಾಡಿಕೊಳ್ಳಬೇಕು.ಹಾಗೆ ಮಾಡಲು ಭಗವತ್ ಬೋಧಾಯನರ ಬ್ರಹ್ಮಸೂತ್ರ ಬಹಳ ವಿಸ್ತೀರ್ಣವಾದುದು. ಆ ಅರಣ್ಯದಲ್ಲಿ ಪ್ರವೇಶಿಸಿದರೆ ಹೊರಗೆ ಬರುವುದೇ ಕಷ್ಟ.

ಹಿಂದಿನ ಮುಂದಿನ ವಾಕ್ಯಗಳು ತಿಳಿಯುವುದಿಲ್ಲ. ಉಳಿದ ಪೂರ್ವಾಚಾರ್ಯರು [ಟಂಕ,ದ್ರಮಿಡ,ಭಾರುಚಿ ಮುಂತಾದವರು] ಬಹಳ ಸಂಗ್ರಹವಾಗಿ ಮಾಡಿದರು. ಅತಿ ಸಂಗ್ರಹವಾದರೆ ಅರ್ಥವಾಗುವುದಿಲ್ಲ. ಆದುದರಿಂದ ಅತಿ ವಿಸ್ತಾರವಿಲ್ಲದೆ ಅತಿ ಸಂಗ್ರಹವಿಲ್ಲದೆ ಮಾಡಬೇಕಾದ ಅವಶ್ಯಕತೆ ಇದ್ದುದುರಿಂದ ಈ ಗ್ರಂಥವನ್ನು ತಾವು ರಚಿಸಿರುವುದಾಗಿ ಪೂಜ್ಯ ರಾಮಾನುಜಾಚಾರ್ಯರು ತಿಳಿಸಿರುತ್ತಾರೆ.ಪೂರ್ವಾಚಾರ್ಯರ ಅಭಿಪ್ರಾಯಗಳಿಗೆ ಅನುಗುಣದಂತೆ ಸೂತ್ರಾಕ್ಷರಗಳಿಗೆ[ಅಕ್ಷರ ಎಂದರೆ ಪ್ರಕೃತಿ--ಪ್ರತ್ಯಯ] ಅರ್ಥವನ್ನು ಅವರ ಅಭಿಪ್ರಾಯಗಳಿಗೆ ಸ್ವಲ್ಪವೂ ವ್ಯತ್ಯಾಸವಾಗದಂತೆ ನಿರ್ವಾಹಮಾಡುವುದಾಗಿ ತಿಳಿಸಿದ್ದಾರೆ.

ಎಲ್ಲಾ ದರ್ಶನಗಳನ್ನೂ ಪೂರ್ಣವಾಗಿ ಅವಗಾಹನ ಮಾಡಿ ತತ್ತ್ವವೆಲ್ಲಾ ತಿಳಿದು ಸೂತ್ರಗಳಿಗೆ ಪರಸ್ಪರ ವಿರೋಧವಿಲ್ಲದ ಹಾಗೆ,ಉಪನಿಷತ್ ವಾಕ್ಯಗಳಿಗೆ ಪರಸ್ಪರ ವಿರೋಧವಿಲ್ಲದ ಹಾಗೆ,ಪುರಾಣವಾಕ್ಯಗಳಿಗೆ ಪರಸ್ಪರ ವಿರೋಧವಿಲ್ಲಧ ಹಾಗೆ,ಎಲ್ಲವನ್ನೂ ಸಮನ್ವಯ ಮಾಡಿ ಅರ್ಥನಿಶ್ಚಯ ಮಾಡಿರುವುದು ಅವರ ವೈಶಿಷ್ಟ್ಯ.ಸಗುಣ ವಾಕ್ಯ,ನಿರ್ಗುಣ ವಾಕ್ಯಗಳಲ್ಲಿ ಒಂದು ನಾಲ್ಕು ನಿರ್ಗುಣ ವಾಕ್ಯಗಳಿಗಾಗಿ ಸಾವಿರಾರು ಸಗುಣವಾಕ್ಯಗಳನ್ನು ಪರಿತ್ಯಾಗ ಮಾಡುವುದು ನ್ಯಾಯವಲ್ಲವೆಂಬುದು ರಾಮಾನುಜರ ನಿಶ್ಚಯ.ಒಂದು ಶ್ರುತಿಗೆ ಒಂದು ಶ್ರುತಿ

ವಿರೋಧವಲ್ಲ. ಅದನ್ನು ತೆಗೆದು ತೋರಿಸಿದ್ದಾರೆ.ಅದು ರಾಮಾನುಜರ ಕ್ರಮ. ಎಲ್ಲಾ ಶ್ರುತಿ ವಾಕ್ಯಗಳಿಗೆ ಮುಖ್ಯಾರ್ಥವೇ ಮುಖ್ಯ ಗೌಣಾರ್ಥವಲ್ಲ.

ಸ್ವಾಮಿ ವೇದಾಂತದೇಶಿಕರು ಈ ಶ್ರೀಭಾಷ್ಯವನ್ನು ಮೂವತ್ತು ಬಾರಿ ಪ್ರವಚನ ಮಾಡಿರುತ್ತಾರೆ.ಅದನ್ನು ಅವರೇ ಬಹಳ ಸಂತೋಷದಿಂದ ಹೆಮ್ಮೆಯಿಂದ ಸಂಕಲ್ಪ ಸೂರ್ಯೋದಯದಲ್ಲಿ ತಿಳಿಸಿರುತ್ತಾರೆ. ಪೂರ್ವಾಚಾರ್ಯರು ಮೋಕ್ಷಕ್ಕೆ ನೇರವಾದ ದಾರಿ"ಮುಕ್ತಿ ಘಂಟಾಪಥ"ವನ್ನು ತೋರಿಸಿಕೊಟ್ಟರು.ವಿವಿಧ ಕುದೃಷ್ಟಿ ಮತಗಳ ನೂರಾರು ದುರ್ವಚನಗಳಿಂದ ಆ ದಾರಿಗೆ ಎಷ್ಟೋ ಕಂಟಕಗಳು ಬಂದವು.ಆ ರೀತಿ ಲೋಕದ ಜನರಿಗೆಲ್ಲಾ ಮೋಹ ಉಂಟಾದಾಗ "ಸತ್--ಅಸತ್" ವಿವೇಚನಾ ಚತುರರಾದ ರಾಮಾನುಜಾಚಾರ್ಯರು ಲೋಕವನ್ನು ಉಜ್ಜೀವನ ಮಾಡಲು ಪೂರ್ವಾಚಾರ್ಯರು ತೋರಿಸಿದ ಪ್ರಾಚೀನವಾದ ಆ ಮತವೇ ಸಮೀಚೀನವೆಂದು ತೋರಿಸಲು ಆ ಕಂಟಕಗಳನ್ನು ಹೋಗಲಾಡಿಸಿ, ಸಂಸಾರದಲ್ಲಿ ಭಯಪಟ್ಟು ಪರಮಪುರುಷಾರ್ಥವನ್ನು ಅಪೇಕ್ಷಿಸುವ ಜನಗಳಿಗೆ ಅವರನ್ನು ಕೃತಾರ್ಥರಾಗಿಸಲು ಅವರ ಅದೃಷ್ಟ ವೈಭವ ಆವಿರ್ಭಾವವಾಗುವಂತೆ ಮಾಡಲು ಶಾರೀರಿಕ ಶಾಸ್ತ್ರ- ಬಾದರಾಯಣರ ಸೂತ್ರಗಳಿಗೆ ವ್ಯಾಖ್ಯಾನವನ್ನು ರಚಿಸಿದರು.

"ಅಖಿಲ ಭುವನ ಜನ್ಮ ಸ್ಥೇಮ ಭಂಗಾದಿ ಲೀಲೆ
ವಿನತ ವಿವಿಧ ಭೂತ ವ್ರಾತ ರಕ್ಷೈಕ ದೀಕ್ಷೆ|
ಶ್ರುತಿ ಶಿರಸಿ ವಿದೀಪ್ತೇ ಬ್ರಹ್ಮಣಿ ಶ್ರೀನಿವಾಸೇ
ಭವತು ಮಮ ಪರಸ್ಮಿನ್ ಶೇಮುಷೀ ಭಕ್ತಿರೂಪಾ||

ಈ ಮಂಗಳ ಶ್ಲೋಕವನ್ನು "ಶ್ರೌತಂ ಮಂಗಳಂ"--ಶ್ರುತಿಗೆ ಸಂಬಂಧಪಟ್ಟ ಮಂಗಳ ಎಂದಿದ್ದಾರೆ. ಈ ಮಂಗಳ ಶ್ಲೋಕವನ್ನು ಏಕೆ ಮಾಡಿದರು ಅದರ ಅರ್ಥವೇನು ಎನ್ನುವುದನ್ನು ವಿಸ್ತಾರವಾಗಿ ಹೇಳಿದ್ದಾರೆ.ಈ ಶ್ಲೋಕದ ಅರ್ಥವನ್ನು ನಾವು ತಿಳಿದುಕೊಂಡರೆ ಅದರಲ್ಲಿ ಸಿದ್ಧಾಂತದ ಸ್ವರೂಪವೆಲ್ಲಾ ಬರುತ್ತದೆ."ಪ್ರಮೇಯ" ಏನು ಎನ್ನುವುದನ್ನೆಲ್ಲಾ ಈ ಶ್ಲೋಕದಲ್ಲಿ ಹೇಳಿದ್ದಾರೆ.[ಯಾವ ಜ್ಞಾನವನ್ನು ತಿಳಿದರೆ ನಾವು ಈ ಸಂಸಾರದಿಂದ ಬಿಡುಗಡೆ ಹೊಂದುತ್ತೇವೆಯೋ ಯಾವ ಜ್ಞಾನವನ್ನು ತಿಳಿಯದಿದ್ದರೆ ಭ್ರಮೆಯಲ್ಲಿ ಬಿದ್ದು ನಾವು ಸಂಸಾರದಲ್ಲಿ ಬೀಳುತ್ತೇವೆಯೋ ಆ ಜ್ಞಾನ ಪ್ರಮೇಯ.]

ಒಂದು ಮಹಾಗ್ರಂಥಕ್ಕೆ ಮಂಗಳವನ್ನು ಏಕೆ ಮಾಡಬೇಕೆಂದರೆ,"ನಿರ್ವಿಘ್ನೇನ ಪರಿಸಮಾಪ್ತ್ಯರ್ಥಂ"---ಆರಂಭ ಮಾಡಿದ ಪ್ರಬಂಧ ಒಂದು ವಿಘ್ನವಿಲ್ಲದೆ ಪರಿಸಮಾಪ್ತಿ ಆಗಬೇಕು.
"ಪ್ರಚಯ ಗಮನಾರ್ಥಂ"--ಅರ್ಥಗಳು ಪುಷ್ಕಳವಾಗಿ ಬರಬೇಕು.
"ಸ್ಮೃತ್ಯಾಚಾರ ಸಿದ್ಧಂ"---ಸ್ಮೃತಿಯಲ್ಲಿ ಹೇಳಿರುವಂತೆ ಶಿಷ್ಯರಿಗೆ ಶಿಕ್ಷಣ ನೀಡಲು ಆಚಾರ್ಯರು ಮಾಡಿರುವಂತೆ ತಾವೂ ಈ ರೀತಿಯಾಗಿ ಒಂದು ಪ್ರಾರ್ಥನೆ ಮಾಡಿ ಆರಂಭಿಸಬೇಕೆಂಬ ಶಿಕ್ಷಣವನ್ನು ಶಿಷ್ಯರಿಗೆ ನೀಡಲು "ಇಷ್ಟ ದೇವತೋಪಾಸನ ರೂಪಂ"---ಇಷ್ಟದೇವತೆ ಉಪಾಸನೆ [ಶ್ರೀನಿವಾಸ ಇಷ್ಟದೇವತೆ]

ಮಂಗಳಶ್ಲೋಕದಲ್ಲಿ ಭಾಷ್ಯದ ವಿಷಯವೇನೆಂದು ನಿರ್ದೇಶ ಮಾಡಿದ್ದಾರೆ.ಒಳ್ಳೆಯದಾಗಲಿ ಎಂಬ ಆಶೀರ್ವಚನ,ವಿನತ-ಭಕ್ತಿರೂಪ ಎಂದು ಹೇಳಿರುವುದರಿಂದ ಭಗವದ್ವಿಷಯದಲ್ಲಿ ಪ್ರಹ್ವೀಭಾವ, ಪ್ರಣತಿಃ--ನಮಸ್ಕಾರ.

ಆಶೀರ್ವಸ್ತು ನಿರ್ದೇಶಃ ನಮಸ್ಕಾರಗಳನ್ನು ಮಾಡಿದ್ದಾರೆ.

"ಅಖಿಲ ಭುವನ ಜನ್ಮ ಸ್ಥೇಮ ಭಂಗಾದಿ ಲೀಲೆ
ವಿನತ ವಿವಿಧ ಭೂತ ವ್ರಾತ ರಕ್ಷೈಕ ದೀಕ್ಷೆ|"

ಅಷ್ಟರಲ್ಲಿ ಮೊದಲ ಎರಡು ಅಧ್ಯಾಯದ ಅರ್ಥವೆಲ್ಲಾ ನಿರೂಪಿಸಿದೆ. ಮುಂದಿನ ಭಾಗದಲ್ಲಿ ಮುಂದೆ ಬರುವ ಅಧ್ಯಾಯದ ಅರ್ಥಗಳೆಲ್ಲಾ ಉಪಾಯ,ಫಲ,ಸಾಧನೆಯನ್ನು ಹೇಳಲಾಗಿದೆ.ಮೊದಲು ಸಮನ್ವಯ,ಅವಿರೋಧ ಅಧ್ಯಾಯಗಳ ಅರ್ಥಗಳನ್ನು ಪ್ರತಿಪಾದನೆ ಮಾಡಿದ್ದಾರೆ.

"ಅಖಿಲ ಭುವನ ಜನ್ಮ ಸ್ಥೇಮ ಭಂಗಾದಿ ಲೀಲೇ,ವಿನತ ವಿವಿಧ ಭೂತ ವ್ರಾತ ರಕ್ಷೈಕ ದೀಕ್ಷೇ,ಶ್ರುತಿ ಶಿರಸಿ ವಿದೀಪ್ತೇ,ಬ್ರಹ್ಮಣಿ ಶ್ರೀನಿವಾಸೇ,ಪರಸ್ಮಿನ್" ಈ ಐದು ಶಬ್ದಗಳೂ ಸಪ್ತಮೀ ವಿಭಕ್ತಿ ಯಲ್ಲಿವೆ.ಸಪ್ತಮೀ ವಿಭಕ್ತಿ ಯಲ್ಲಿರುವುದೆಲ್ಲಾ ಪರಬ್ರಹ್ಮ ಸ್ವರೂಪವನ್ನು ತಿಳಿಸುತ್ತದೆ.ಪರಬ್ರಹ್ಮ ಸ್ವರೂಪವು ಎಂತಹುದೆಂದರೆ ಶ್ರುತ್ಯೈಕ ಸಮಧಿಗಮ್ಯವಾದುದು, ಸಕಲ ಗುಣ ಪರಿಪೂರ್ಣವಾದುದು,ಸೃಷ್ಟಿ ಸ್ಥಿತಿ ಲಯ ಕಾರ್ಯಗಳನ್ನೆಲ್ಲಾ ಮಾಡುವಂತಹುದು,ಅದು ಶ್ರೀನಿವಾಸರೂಪವಾದುದು.ಸಪ್ತಮೀ ವಿಭಕ್ತಿಯಲ್ಲಿ ಹೇಳಿರುವುದೆಲ್ಲಾ ಸಿದ್ಧೋಪಾಯ,ಉಪೇಯ.ನಾವು ಪಡೆಯಬೇಕಾದ ವಸ್ತು.

ಒಂದೊಂದು ಪದವನ್ನು ನೋಡಿದರೆ, ಅಖಿಲ ಭುವನಂ----"ಭುವನಂ" ಎನ್ನುವುದು ಸಕಲದೇಶ ಕಾಲದಲ್ಲಿ ಇರುವ ಎಲ್ಲಾ ಬ್ರಹಾಂಡ ಸಮೂಹ.ಇತರರು ಚತುರ್ಮುಖ ಬ್ರಹ್ಮ,ದಕ್ಷ ಪ್ರಜಾಪತಿ ಮುಂತಾದವರು ಇವನ ನಿರ್ದೇಶನದಂತೆ ಯಾವುದಾದರೂ ಒಂದೊಂದು ಅಂಡವನ್ನು ಮಾಡಬಹುದೇ ಹೊರತು ಎಲ್ಲವನ್ನೂ ಮಾಡಲು ಅವರು ಯಾರಿಗೂ ಸಾಧ್ಯವಿಲ್ಲ. ಅದು ಪರಬ್ರಹ್ಮ ಸ್ವರೂಪ. "ಅಖಿಲಂ"--"ಖಿಲಂ ನಾಸ್ತಿ ಇತಿ ಅಖಿಲಂ" ಖಿಲಂ ಎಂದರೆ ಬಿಟ್ಟು ಹೋಗುವುದು,ಎಂದರೆ ಇವನ ಸೃಷ್ಟಿ ವ್ಯಾಪಾರಕ್ಕೆ ವಿಷಯವಾಗದೇ ಇರುವುದು ಯಾವುದೂ ಇಲ್ಲ. ಎಲ್ಲಾ ಅವನಿಂದಲೇ ಆಗುವಂತಹುದು. ಇಲ್ಲಿ ಸಕಲಂ ಎಂದು ಹೇಳಬಹುದಿತ್ತು. "ಅಖಿಲಂ" ಎಂದು ಏಕೆ ಹೇಳಿದರೆಂದರೆ, "ಸಕಲಂ" ಎಂದರೆ ಎಲ್ಲಾ ಎಂದರ್ಥ. "ಅಖಿಲಂ" ಎಂದರೆ ವಿಷಯವಾಗದೇ ಇರುವುದು ಯಾವುದೂ ಇಲ್ಲ ಎಂದರ್ಥ. "ನಿಖಿಲಂ" ಎಂದರೂ ನಿಷೇದಾರ್ಥವಾಗುತ್ತದೆ ಹೇಳಬಹುದಿತ್ತಲ್ಲಾ ಎಂದರೆ "ಅ" ಎಂದು ಅವರು ಆರಂಭಮಾಡಲು ಕಾರಣ "ಅ" ಇತಿ ಭಗವತೋ ನಾರಾಯಣಸ್ಯ ಪ್ರಥಮಾಭಿಧಾನಂ----ಭಗವದ್ವಾಚಕ, ವಿಷ್ಣುವಾಚಕ. "ಅ" ಎಂದರೆ "ಅವತಿ"[ರಕ್ಷತಿ] ಎಂದರ್ಥ. "ಅ" ಕಾರ ಮಾಂಗಳಕ. ಅತ್ಯಂತ ಮಂಗಳಕರವಾದುದು.

"ಅ" ಕಾರದಲ್ಲಿ ಸರ್ವ ಅಷ್ಟಾಕ್ಷರ ಅಂತಸ್ಥ. "ಅಖಿಲ" ಎಂದರೆ ಚಿತ್ ಅಚಿತ್ ಎಲ್ಲಾ ಸೇರಿದೆ.
"ಜನ್ಮ"--ಸೃಷ್ಟಿ ಮೂರು ವಿಧವಾದುದು ೧]ನಿತ್ಯ ೨]ನೈಮಿತ್ತಿಕ ೩]ಪ್ರಾಕೃತ ಸೃಷ್ಟಿ.

"ಸ್ಥೇಮಾ"--ಸ್ಥಿತಿ-- ರಕ್ಷಣೆ ಮಾಡುವವನು.ಹೇಗೆ ರಕ್ಷಣೆ ಮಾಡುತ್ತಾನೆಂದರೆ ಅದರ ಒಳಗೆ ತಾನಿದ್ದು ರಕ್ಷಣೆ ಮಾಡುತ್ತಾನೆ.ಪ್ರತಿಯೊಂದರಲ್ಲೂ ವಿಷ್ಣು ಅಂತರ್ಯಾಮಿಯಾಗಿ ಇದ್ದು, ಅವತಾರ ಮಾಡಿ, ಲೋಕಪಾಲ ರೂಪದಲ್ಲಿ, ಮನ್ವಾದಿ ರೂಪದಲ್ಲಿ ನೃಪ, ಮಾತಾಪಿತೃಗಳ ರೂಪದಲ್ಲಿ ಏನೇನು ರಕ್ಷಣೆಯಾಗುತ್ತದೆಯೋ ಎಲ್ಲಾ ಇವನಿಂದ ಆಗುತ್ತದೆ.

"ಭಂಗಂ"--ಎಂದರೆ ಪ್ರಳಯ- ಮೂರು ವಿಧವಾದುದು.೧]ನಿತ್ಯವಾದುದು ೨]ನೈಮಿತ್ತಿಕವಾದುದು ೩]ಪ್ರಾಕೃತವಾದುದು. "ಮೋಕ್ಷ" ಅದರಲ್ಲಿ ಸೇರುವುದಿಲ್ಲ, ಅಂತರ್ಗತವಾಗಿಲ್ಲ.ಮೋಕ್ಷವನ್ನು ಪ್ರತ್ಯೇಕವಾಗಿ ಹೇಳಿದ್ದಾರೆ.

ಸೃಷ್ಟಿ,ಸ್ಥಿತಿ,ಲಯ ಮೂರೂ ಅವನಿಂದ ಆಗುತ್ತದೆಯೆಂದು ನಿರೂಪಣೆ ಮಾಡಿದಂತಾಯಿತು.

"ಆದಿ"--ಶಬ್ದದಿಂದ ಸೃಷ್ಟಿಗೆ ಉಪಯುಕ್ತವಾದುದು.ನಿಯಮನ ಮಾಡುವುದು. ಅನುಪ್ರವೇಶ,ಅಂತಃಪ್ರವೇಶವಾಗಿ ನಾಮ ರೂಪ ವ್ಯಾಕರಣ.

"ವಿವಿಧ ಲೀಲೆ"--ಸ್ವಚ್ಛಂದ ಚೇಷ್ಟಿ ತತ್ತ್ವ,ಅವನ ಇಷ್ಟದಂತೆ ಮಾಡುವುದು.ಭಗವಂತನು ಪರಿಪೂರ್ಣನಾಗಿರುವುದರಿಂದ ಬೇರೆ ಯಾರೂ ಅವನನ್ನು ಪ್ರೇರಣೆ ಮಾಡಲಾಗುವುದಿಲ್ಲ.ಅವನು ಅಪ್ರಮೇಯನು,ನಾವು ಪೂರ್ಣವಾಗಿ ತಿಳಿಯಲಾಗದಂತವನು."ಲೀಲೆ"ಗೆ ಇನ್ನೊಂದು ವಿಶೇಷವಾದ ಅರ್ಥ "ಕಾರುಣ್ಯ". ಚೇತನರು ಸಂಸಾರದಲ್ಲಿ ಸೇರಿಹೋಗಿರುವುದರಿಂದ ಅವರು ಉಜ್ಜೀವನವಾಗಲೆಂದು ಅವರಿಗೆ ಕಾರುಣ್ಯದಿಂದ ಕರಣ ಕಳೇಬರ ನೀಡುವುದು.

"ಲೀಲೆ" ಎನ್ನುವ ಶಬ್ದದಿಂದ "ಭಂಗಂ" ಎಂದು ಹೇಗೆ ಬರುವುದೆಂದರೆ ಚೇತನರು ಸಂಸಾರದಲ್ಲಿ ಬಂದು ಸೇರಿದಾಗ ವಿರುದ್ಧವಾಗಿ ಹೋಗುವ ವ್ಯಾಪಾರವನ್ನು ತಡೆದು ಒಳ್ಳೆಯದನ್ನು ಉಂಟು ಮಾಡಲು ಸಂಹಾರ ಮಾಡುತ್ತಾನೆ.ಸೃಷ್ಟಿ ಮಾಡುವಾಗ ಒಳ್ಳೆಯ ದಾರಿಯಲ್ಲಿ ಹೋಗಲು ಅನುಕೂಲವಾಗಲೆಂದು ಶರೀರಾದಿಗಳನ್ನೆಲ್ಲಾ ಕೊಡುತ್ತಾನೆ.ಇವನು ಶರೀರಾದಿಗಳನ್ನೆಲ್ಲಾ ತೆಗೆದುಕೊಂಡು ಆಳ್ವಾರ್ ರವರು ಹೇಳಿದಂತೆ "ಅನ್ನಾಳ್ ನೀ ತಂದ ಆಕ್ಕೈಯಿಲ್ ವಯಿ ಉಯಲ್ವೇನ್". ನೀನು ಉದ್ಧಾರವಾಗಲೆಂದು ನೀಡಿದ ಶರೀರದಿಂದ ಉದ್ಧಾರವಾಗದೆ ಶರೀರ ಹೋಗುವ ದಾರಿಯಲ್ಲೇ ಹೊರಟು ಹೋದೆ ಎನ್ನುತ್ತಾನೆ.ತುಂಬಾ ದೂರ ಹೊರಟು ಹೋದರೆ ನಷ್ಟವಾಗುತ್ತದಲ್ಲಾ ಎಂದು ಅದನ್ನು ತಡೆದು ಸಂಹಾರ ಮಾಡುತ್ತಾನೆ.ಪ್ರಥಮೋಧ್ಯಾಯದ ವಿಷಯವೆಲ್ಲಾ ಇದರಲ್ಲಿ ಬರುತ್ತದೆ.

"ವಿನತ ವಿವಿಧ ಭೂತ ವ್ರಾತ ರಕ್ಷೈಕ ದೀಕ್ಷೇ"----ಇಲ್ಲಿ ಸೌಲಭ್ಯವನ್ನು ಸಂಕ್ಷೇಪವಾಗಿ ಹೇಳುತ್ತಾರೆ.

"ವಿನತ"--ನ್ಯಾಸ,ಉಪಾಸನಾ ನಿಷ್ಠರು.ಬೇರೆ ಬೇರೆ ಮೂವತ್ತೆರಡು ವಿದ್ಯೆಗಳಲ್ಲಿ ಪ್ರವರ್ತಿಸುವವರು.ದೇವತೆಗಳು,ಮನುಷ್ಯರು,ಪಶು ಪಕ್ಷಿ ಯಾರಾದರೂ ಆಗಬಹುದು.

"ವಿವಿಧ"---"ಅರ್ಥಿತ್ವಂ ಸಾಮರ್ಥ್ಯಂ" ಮೋಕ್ಷಬೇಕೆಂಬ ಆಸೆಯಿರುವವರು.ಶಕ್ತಿ ಇದ್ದವರು ಉಪಾಸನೆ,ಇಲ್ಲದೇ ಇದ್ದವರು ಪ್ರಪತ್ತಿ[ಶರಣಾಗತಿ] ಎಲ್ಲರನ್ನೂ ಅನ್ವಯಿಸಿದೆ.

"ಭೂತ"----ಬ್ರಹ್ಮಜ್ಞಾನ ಸದ್ಭಾವ ಉಳ್ಳವರು.

ಯಾರು ನನ್ನ ಇರುವನ್ನು ತಿಳಿದಿದ್ದಾರೋ ಅವರಿಗೆ ಅವರ ಆತ್ಮದೊಳಗೇ ಇದ್ದು ಅಂತರ್ಯಾಮಿಯಾಗಿ ನಾನು ಅನುಗ್ರಹ ಮಾಡುತ್ತೇನೆ ಎಂದು ಭಗವದ್ಗೀತೆಯಲ್ಲಿ ಭಗವಂತನು ಹೇಳಿದ್ದಾನೆ.

"ಭೂತ ವ್ರಾತಃ"---"ಸಂಶ್ರಿತ ಸಂಬಂಧಿನೋಪಿ" ಆಶ್ರಿತರಿಗೆ ಸಂಬಂಧ ಪಟ್ಟವರು, ಅವರ ಸಮೂಹ,ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತೇನೆ.

"ರಕ್ಷೈಕ ದೀಕ್ಷೆ"----ರಕ್ಷೆ ಮಾಡುವುದರಲ್ಲಿ ಪ್ರಧಾನವಾದ ಸಂಕಲ್ಪ."ಏಕಂ" ಎಂದರೆ ಮುಖ್ಯವಾದುದು.ಇಷ್ಟವನ್ನು ಉಂಟುಮಾಡಿ ಅನಿಷ್ಟವನ್ನು ಹೋಗಲಾಡಿಸುವುದು.ದೀಕ್ಷಕನ ಪ್ರಯೋಜನಕ್ಕೆ ಆಶ್ರಿತರನ್ನು ರಕ್ಷಿಸುವುದು.ಸಂಸಾರ ಕಾಂತಾರದಲ್ಲಿ ಕಳೆದು ಹೋಗಿರುವ ಒಬ್ಬ ಚೇತನನನ್ನು ರಕ್ಷಣೆ ಮಾಡಿದರೆ ಅದು ಅವನಿಗೆ ಲಾಭ.

"ಅಭಯಂ ಸರ್ವಭೂತೇಭ್ಯೋ ದದಾಮಿ ಏತತ್ ವ್ರತಂ ಮಮ."

"ವಿನತಂ"---ಮೂರನೆಯ ಅಧ್ಯಾಯದ ಅರ್ಥ.

"ರಕ್ಷಾ ದೀಕ್ಷ"---ನಾಲ್ಕನೆಯ ಅಧ್ಯಾಯದ ಅರ್ಥ.

ಒಬ್ಬ ರಾಜನಿಗೆ ಛತ್ರ ಚಾಮರಗಳಿರುವಂತೆ ಭಗವಂತನಿಗೆ ಒಂದು ಅಸಾಧಾರಣವಾದ ಚಿಹ್ನೆ ಏನೆಂದರೆ ಜಗತ್ ಕಾರಣತ್ವ ಮತ್ತು ಮೋಕ್ಷಪ್ರದತ್ವ. ಒಂದು ಪರತ್ವ ಇನ್ನೊಂದು ಸೌಲಭ್ಯ.ಇದು ಭಗವಂತನಿಗೆ ಲಕ್ಷಣ.

ಇದು ಹೇಗೆ ತಿಳಿಯುವುದೆಂದರೆ,

"ಶ್ರುತಿ ಶಿರಸಿ ವಿದೀಪ್ತಂ"----"ಶ್ರೂಯತೇ ನಿತ್ಯಂ ಇತಿ ಶ್ರುತಿಃ"

ಶ್ರವಣಕ್ಕೆ ವಿಷಯವಾದುದು,ಅಪೌರುಷೇಯ,ಸ್ವತಃ ಪ್ರಮಾಣ,ನಿತ್ಯವಾದುದು----ಶ್ರುತಿಗೆ ವಿಶೇಷಣ. ಇದರಿಂದ ಬ್ರಹ್ಮ ಸ್ವರೂಪ ತಿಳಿಯುತ್ತದೆ.

"ಶಿರಸಿ" ಎಂದರೆ ಶಿರಃ ಪ್ರಧಾನವಾದ ಉಪನಿಷತ್ತುಗಳು.ಪರತತ್ವ ಪ್ರಧಾನವಾದುದು.

"ವಿದೀಪ್ತಂ" ----ವಿಶೇಷವಾಗಿ ದೀಪ್ತವಾಗಿದೆ,ಪ್ರಕಾಶವಾಗಿದೆ.

ಅಲ್ಲಿ ಅಗ್ನಿ, ಇಂದ್ರ ಎಂದು ಏನು ಹೇಳಿದರೂ ಬ್ರಹ್ಮವನ್ನೇ ಹೇಳಿದಂತಾಯಿತು.ಏಕೆಂದರೆ "ಸಾಕ್ಷಾದಪಿ ಅವಿರೋಧಂ ಜೈಮಿನಿಃ". ಅಗ್ನಿ,ಇಂದ್ರ ಮೊದಲಾದ ಹೆಸರಿಂದ ಅದೇ ಅಗ್ನಿ ಅದೇ ಇಂದ್ರ ಎಂದು ಹೇಳಿ ಬ್ರಹ್ಮವನ್ನೇ ಪ್ರತಿಪಾದಿಸಲಾಗಿದೆ.

"ಬ್ರಹ್ಮಣಿ ಶ್ರೀನಿವಾಸೇ"---"ಬ್ರಹ್ಮಣಿ" ಎನ್ನುವುದು ಸಾಮಾನ್ಯವಾದ ಒಂದು ಶಬ್ದ. ಸತ್,ಬ್ರಹ್ಮ,ಆಕಾಶಃ,ದಹರಃ,ಜ್ಯೋತಿಃ,ಆತ್ಮಾ ಇವುಗಳೆಲ್ಲಾ ಪರಬ್ರಹ್ಮವನ್ನು ಹೇಳುವ ಸಾಧಾರಣ ಶಬ್ದಗಳು.ವಿಶೇಷವಾಗಿ ಪರ್ಯವಸಾನವಾಗುವುದು ಎಲ್ಲಿ ಎಂದರೆ "ಶ್ರೀನಿವಾಸೇ" ಎಂದರು."ನಾರಾಯಣ" ಎನ್ನುವುದಕ್ಕೆ ಎಲ್ಲಾ ಅರ್ಥವನ್ನೂ "ಶ್ರೀನಿವಾಸೇ" ಎನ್ನುವುದರಲ್ಲಿ ಹೇಳಿದರು.ಶ್ರೀ ವಿಶಿಷ್ಟನಾದವನು, ಮಹಾಲಕ್ಷ್ಮೀ ವಿಶಿಷ್ಟನಾದವನು ಎಂದರ್ಥ.ಉಭಯಾದಿಷ್ಠಾನವಾದ ಶೇಷಿತ್ವ.

ಸಾಮಾನ್ಯವಾದ ಒಂದು ಶಬ್ದ ವಿಶೇಷ ಅರ್ಥದಲ್ಲಿ ಪರ್ಯವಸಿಸುತ್ತದೆ.ವಿಶೇಷವಾದುದು ಎಲ್ಲಿ ಪರ್ಯವಸಿಸುತ್ತದೆ ಎನ್ನುವುದನ್ನು ನಾರಾಯಣ ಅನುವಾಕದಲ್ಲಿ ಎಂದು ರಾಮಾನುಜರು ಭಾಷ್ಯತೆಗೆದು ಪ್ರಕಾಶಪಡಿಸುತ್ತಾರೆ.ವಿಶೇಷಲಿಂಗಗಳನ್ನು "ಶಕ್ರಶ್ಚ ನಾರಾಯಣಃ ಶಿವಶ್ಚ ನಾರಾಯಣಃ ದ್ಯಾವಾ ಪೃಥಿವ್ಯೌಚ ನಾರಾಯಣಃ ನಾರಾಯಣ ಏವೇದಗಂ ಸರ್ವಂ" ಎಂದು ಹೇಳಿ ಅಕ್ಷರ ಶಿವ ಎಂದು ಏನೇನು ಶಬ್ದ ಹೇಳಿದರೋ

ಎಲ್ಲಾ ನಾರಾಯಣನಲ್ಲಿ ಪರ್ಯವಸಿಸುತ್ತದೆ.ಯಾವಾಗಲೂ ಶ್ರೀ ವಿಶಿಷ್ಟನಾದವನು ಶ್ರೀಮನ್ನಾರಾಯಣ ಅವನೇ ಪರತತ್ವ ಎನ್ನುವುದಕ್ಕೆ "ಶ್ರೀನಿವಾಸೇ" ಎಂದರು. ಶ್ರೀನಿವಾಸಂ" ಎನ್ನುವುದು ನಿತ್ಯ ವಿಭೂತಿ. ನಿತ್ಯವಿಭೂತಿ ಎನ್ನುವುದನ್ನು ಇಲ್ಲಿ ಸೂಚಿಸಲಾಗಿದೆ."ಪರಸ್ಮಿನ್"--"ಪರಃ" ಎನ್ನುವುದು ಪರಮಾತ್ಮನನ್ನು ಹೇಳುತ್ತದೆ.

"ಪರಸ್ಮಿನ್" ಎಂದರೆ ಅತ್ಯಂತ ಶ್ರೇಷ್ಠವಾದುದು.ಅದಕ್ಕಿಂತ ಶ್ರೇಷ್ಠವಾದುದು ಇನ್ನೊಂದಿಲ್ಲ. "ಬ್ರಹ್ಮವಿತ್ ಆಪ್ನೋತಿ ಪರಂ" ಎಂದು ಇಷ್ಟನ್ನು ಹೇಳಿ ಪರತತ್ವ ನಿರ್ಣಯ ಮಾಡಿ, ಆ ಪರತತ್ವವನ್ನು ಯಾರು ಹೋಗಿ ಶರಣಾಗತಿ ಮಾಡಿ "ವಿನತ" ರಾಗುತ್ತಾರೋ ಅವರು ಅವನನ್ನು ಪಡೆಯುತ್ತಾರೆ ಎಂದು ಹೇಳಿದರು.

ಇದಕ್ಕೆ ಉಪಾಯವೇನೆಂದು ಹೇಳುತ್ತಾರೆ."ಶೇಮುಷೀ ಭಕ್ತಿ ರೂಪಾ"---"ಶೇಮುಷೀ" ಎಂದರೆ ಚಿಂತನೆ,ಧ್ಯಾನ. "ಭಕ್ತಿ" ಎಂದರೆ ಪ್ರೀತಿ,ಪ್ರೇಮ,ಎರಡನ್ನೂ ಸೇರಿಸಿಕೊಂಡರೆ "ಪ್ರೀತಿ ರೂಪವಾದ ಧ್ಯಾನ"--ಎಂದಾಗುತ್ತದೆ. ಇದು ಉಪಾಸನಾತ್ಮಕವಾದ ಧ್ಯಾನ.

ಉಪಾಸನೆಗೆ ಅತ್ಯವಶ್ಯಕವಾದುದು ಮೂರು ಅಂಶಗಳು.

೧] ಭಗವದ್ರೂಪವಾದ ಜ್ಞಾನ

೨] ಅದು ನಿರಂತರವಾಗಿರಬೇಕು.

೩] ಅದು ಪ್ರೀತಿರೂಪವಾಗಿರಬೇಕು.

ಭಗವದ್ ಜ್ಞಾನಕ್ಕೆ, ಭಗವದ್ ಧ್ಯಾನಕ್ಕೆ, ಭಗವದ್ ಪ್ರಾಪ್ತಿಗೆ, ಭಕ್ತಿ ಅತ್ಯವಶ್ಯಕ.

"ಭವತು"---ಭಕ್ತಿಯೇ ಅತ್ಯಂತ ಸ್ವಾದನೀಯ, ಪ್ರಿಯವಾದುದು.ಭಗವತ್ ಚಿಂತನೆ ಪ್ರಿಯ.ಯಾರು ಅತ್ಯಂತ ಪ್ರಿಯರೋ ಅವರ ಚಿಂತನೆಯೂ ಪ್ರಿಯ.ನಮಗೆ ಅತ್ಯಂತ ಅಭಿಮತವಾದುದು ಭಕ್ತಿ.ಇಲ್ಲಿ ರಾಮಾನುಜರು "ಮಮ" ಎಂದು ಹೇಳಿದರು.ಅವರಿಗೆ ಭಕ್ತಿಯೇ ಅತ್ಯಂತ ಪ್ರಿಯ.ಅದು ಉಂಟಾಗಲಿ ಎಂದರು."ಮಮ" ಎನ್ನುವುದು ಇಲ್ಲಿ ಅಹಂಕಾರವಲ್ಲ. ಪ್ರತಿಬಂಧಕವಿಲ್ಲದೆ ಶುದ್ಧಭಾವವುಳ್ಳ ನನಗೆ ಎಂದರ್ಥ."ಅಪಾಪಃ" ಇಲ್ಲಿ ನಾವೆಲ್ಲರೂ "ಮಮ" ಎಂದು ಹೇಳಿದರು.

ಲೋಕದಲ್ಲಿ "ಭಕ್ತಿ ಮಾರ್ಗ ಪ್ರಚೋದನ", ಭಕ್ತಿ ಎನ್ನುವುದು ಲೋಪವಾದಾಗ "ಭಕ್ತಿ" ಎನ್ನುವ ಮಳೆಯನ್ನು ವರ್ಷಿಸಿ, ಭಕ್ತಿಪ್ರವಾಹ ಹರಿಸಿದ ಮಹಾತ್ಮರು ಭಗವಾನ್ ರಾಮಾನುಜರು. ಇಲ್ಲಿ "ಮಮ" ಎನ್ನುವುದು ಸಾಧ್ಯೋಪಾಯ.

"ಭಗವಾನ್" ಎನ್ನುವುದು ಸಿದ್ಧೋಪಾಯ.

ಈ ಶ್ಲೋಕದಲ್ಲಿ ಶಾಸ್ತ್ರ ಪ್ರತಿಪಾದಕವಾದುದೆಲ್ಲವನ್ನೂ ತಿಳಿಸಿ,ಇತರ ಮತಗಳನ್ನು ನಿರಾಕರಣೆ ಮಾಡಿ ಸಿದ್ಧಾಂತಸ್ಥಾಪನೆ ಮಾಡುವ ವಿಷಯಗಳನ್ನು ನಿರೂಪಿಸಿದ್ದಾರೆ.

"ಜನ್ಮ ಸ್ಥೇಮ ಭಂಗಾದಿ ಲೀಲೇ" ಎನ್ನುವಲ್ಲಿ ಸೃಷ್ಟಿಯೇ ಇಲ್ಲ. ಜಗತ್ತು ಯಾವಾಗಲೂ ಹೀಗೆಯೇ ಇತ್ತು ಎನ್ನುವುದನ್ನು ನಿರಾಕರಣೆ ಮಾಡಿ ಸೃಷ್ಟಿಕಾಲ, ಸ್ಥಿತಿಕಾಲ,ಪ್ರಳಯಕಾಲ ಎಲ್ಲಾ ಉಂಟೆಂದು ತಿಳಿಸುತ್ತಾರೆ.

"ಲೀಲಾ" ಎನ್ನುವಲ್ಲಿ ಆಟಕ್ಕಾಗಿ ಮಾಡಿದ ಸ್ವಚ್ಛಂದ ಕ್ರಿಯೆ ಎಂದು ತಿಳಿಸುತ್ತಾರೆ.

ಇದರಿಂದ ಪೃಕೃತಿ ತಾನೇ ಪರಿಣಾಮ ಹೊಂದಿತು ಈಶ್ವರ ಸಾಕ್ಷಿಮಾತ್ರವಾಗಿದ್ದಾನೆ ಎನ್ನುವ ಸಾಂಖ್ಯರ ಮತ,ಜೈನವಾದ ಮುಂತಾದವುಗಳನ್ನು ನಿರಾಕರಣೆ ಮಾಡಿದಂತಾಯಿತು.
"ವಿನತ ವಿವಿಧ ಭೂತ" ಎನ್ನುವುದರಿಂದ ಜೀವಾತ್ಮರು ಅನೇಕರು ಎಂದು ಹೇಳಿ, ಜೀವಾತ್ಮರೆಲ್ಲಾ ಒಂದೇ, ಜೀವ-ಬ್ರಹ್ಮ ಒಂದೇ ಎಂದು ಹೇಳುವ ವಾದವೆಲ್ಲಾ ನಿರಾಕರಣೆ ಮಾಡಿದಂತಾಯಿತು.
"ವಿನತ" ಬೇರೆ "ಪರಸ್ಮಿನ್" ಬೇರೆ ಎಂದು ಹೇಳಿ ಈಶ್ವರನಿಗೂ ಜೀವನಿಗೂ ಭೇಧವನ್ನು ಹೇಳಿದಂತಾಯಿತು.ಇದರಿಂದ ಬ್ರಹ್ಮವೇ ಅಜ್ಞಾನದಿಂದ ಅವಿದ್ಯೆಯಿಂದ ಜೀವದಂತೆ ಕಾಣುವುದು ಎನ್ನುವ ಅದ್ವೈತ ವಾದವನ್ನು ನಿರಾಕರಣೆ ಮಾಡಿದಂತಾಯಿತು.
"ಶ್ರುತಿ ಶಿರಸಿ" --ಎನ್ನುವುದರಿಂದ ವೇದಬಾಹ್ಯರಾದ ಚಾರುವಾಕರು,ಬೌದ್ಧ,ಜೈನ ಅವರ ಅಭಿಪ್ರಾಯಗಳೆಲ್ಲದರ ನಿರಾಕರಣೆಯಾಯಿತು. ಈಶ್ವರನನ್ನು ಅನುಮಾನದಿಂದ ತಿಳಿಯಬಹುದು ಎನ್ನುವುದನ್ನು ನಿರಾಕರಣೆ ಮಾಡಿ "ಶಾಸ್ತ್ರಯೋನಿತ್ವಾತ್" ಎಂದರು.

ಅವನು ಶಾಸ್ತ್ರೈಕ ಸಮಧಿಗಮ್ಯ."ಬ್ರಹ್ಮಣಿ"--ಎನ್ನುವುದರಿಂದ ಅಬ್ರಹ್ಮಾತ್ಮಕವಾದ ಪ್ರಧಾನ ಜಗತ್ತಿಗೆ ಕಾರಣ ಎನ್ನುವ ಸಾಂಖ್ಯರ,ಪರಮಾಣು ಕಾರಣ ಎನ್ನುವ ವೈಶೇಷಿಕರ ನಿರಾಕರಣೆ,"ಶ್ರೀನಿವಾಸೇ" ಎನ್ನುವುದರಿಂದ ಪಶುಪತಿ ಮೊದಲಾದವರನ್ನು ಪರಬ್ರಹ್ಮ ಎಂದು ಹೇಳುವುದನ್ನು ನಿರಾಕರಣೆ ಮಾಡಿ ಶ್ರೀಮನ್ನಾರಾಯಣನೇ ಜಗತ್ತಿಗೆ ಕಾರಣ, ಪರಬ್ರಹ್ಮ ಎಂದು ಸ್ಥಾಪನೆ ಮಾಡಿಯಾಯಿತು."ಶೇಮುಷೀ ಭಕ್ತಿ ರೂಪಾ" ಎನ್ನುವುದರಿಂದ ನಿರ್ವಿಶೇಷ ಬ್ರಹ್ಮದಿಂದ ವಾಕ್ಯಾರ್ಥಜ್ಞಾನದಿಂದ ಮೋಕ್ಷ ಎಂದು ಹೇಳುವ ಅದ್ವೈತಿಗಳ ನಿರಾಕರಣೆ.

ಶ್ರುತಿಯಿಂದಲೇ ತಿಳಿಯಬೇಕು,ಶ್ರುತಿಯಿಂದಲೇ ಪರಬ್ರಹ್ಮನನ್ನು ತಿಳಿಯಲಾಗುವುದು ಎಂದು ಹೇಳಿರುವುದರಿಂದ ವೇದಾಂತ ಸಿದ್ಧಾಂತವನ್ನು ಈ ಶ್ಲೋಕದಲ್ಲಿ ಧೃಡವಾಗಿ ಸ್ಥಾಪನೆ ಮಾಡಿಯಾಯಿತು. "ವಿದೀಪ್ತಿ" ಎಂದರೆ ಜ್ಞಾನ ಉಂಟಾಗಬೇಕು.ಯಾವುದರಿಂದ ಎಂದರೆ "ಶ್ರುತಿ ಶಿರಸಿ ವಿದೀಪ್ತೇ" ಉಪನಿಷತ್ತಿನಲ್ಲಿ ಹೇಳುವ ಕ್ರಮ. "ಬ್ರಹ್ಮ ಜ್ಞಾನ" ಉಂಟಾದರೆ "ವಿನತ" ನಾಗುತ್ತಾನೆ,ಶರಣಾಗತಿ ಮಾಡುತ್ತಾನೆ.ಹಾಗಾದರೆ ಅವನಿಗೆ "ರಕ್ಷೈಕ ದೀಕ್ಷೆ".

ಜ್ಞಾನ ಮೊದಲು ಉಂಟಾಗಬೇಕು.ಜ್ಞಾನ ಸಂಪಾದನೆಯಾದ ಮೇಲೆ ಅನುಷ್ಠಾನದಲ್ಲಿ ಭಕ್ತಿ ಅಥವಾ ಪ್ರಪತ್ತಿ ಮಾಡಬೇಕು.ಆಗ ಸರ್ವ ರಕ್ಷಕನಾದ ಶ್ರೀಮನ್ನಾರಾಯಣನು ರಕ್ಷಣೆ ಮಾಡುತ್ತಾನೆ.

ಮೊದಲು ಜ್ಞಾನಪರ್ವ, ನಂತರ ಉಪಾಸನಾ ಪರ್ವ ಕೊನೆಯಲ್ಲಿ ಫಲಪರ್ವ----ರಕ್ಷಣೆ ಎಂದು ಈ ಶ್ಲೋಕದಲ್ಲಿ ಸೂಚನೆ ಮಾಡಿ,ತತ್ವ ವಿಚಾರವನ್ನೆಲ್ಲಾ ಈ ಶ್ಲೋಕದಲ್ಲಿ ನಿರೂಪಣೆ ಮಾಡಿದ್ದಾರೆ.

ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಯತೀಂದ್ರ ಮಹಾದೇಶಿಕಾಯ ನಮಃ

॥ ಶ್ರೀಃ ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ ॥

॥ ಶ್ರೀ ಕೃಷ್ಣಬ್ರಹ್ಮತನ್ತ್ರ ಪರಕಾಲ ಮಹಾದೇಶಿಕಾಯನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ ॥

# ಆಚಾರ್ಯೋಪದೇಶದ ಒಂದು ವಿಚಾರ

ಶ್ರೀಮಾನ್ ಸಂಪತ್ಕುಮಾರ

ಬೆಂಗಳೂರು

---

ತಪೋನಿಷ್ಠರೂ,ಮಂತ್ರಸಿದ್ಧರೂ,ವಾಕ್ಸಿದ್ಧರೂ,ಮಹಾಜ್ಞಾನಿಗಳೂ ಮತ್ತು ಮಹಾಯೋಗಿಗಳೂ ಆದ ಶ್ರೀಮದಭಿನವ ವಾಗೀಶಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳ ಎಂಭತ್ತೊಂದನೇಯ ತಿರುನಕ್ಷತ್ರಮಹೋತ್ಸವದ ವಿಷಯವನ್ನು ಕೇಳಿ ಅತ್ಯಂತ ಸಂತೊಷವಾಯಿತು. ಈ ಸುಸಂದರ್ಭದಲ್ಲಿ ಸ್ವಾಮಿಗಳ ವೈಭವ, ಪ್ರಭಾವಗಳು, ಆಚಾರ್ಯರು ಮಾಡಿದ ಸಿದ್ಧಾಂತ ಪ್ರಚಾರ ಮತ್ತು ಪರಕಾಲಮಠದ ಪೂರ್ವಾಚಾರ್ಯರ ಅಪೂರ್ವ ಶ್ರೀಸೂಕ್ತಿಗಳನ್ನು ಒಂದು ಸ್ಮರಣಸಂಚಿಕೆಯ ರೂಪದಲ್ಲಿ ಪರಕಾಲಮಠದಿಂದ ಪ್ರಕಾಶಮಾಡುತ್ತಿರುವ ವಿಷಯವನ್ನು ಕೇಳಿ ಮತ್ತಷ್ಟು ಸಂತೋಷವಾಯಿತು. ಈ ಸಂದರ್ಭದಲ್ಲಿ ಪೂರ್ವಾಚಾರ್ಯರುಗಳ ಶ್ರೀಸೂಕ್ತಿಗಳನ್ನು ಅವಲಂಬಿಸಿ ಬರುವ ತತ್ತ್ವ-ಹಿತ-ಪುರುಷಾರ್ಥಗಳ ವಿಚಾರವನ್ನು ನಮ್ಮ ಆಚಾರ್ಯಶ್ರೇಷ್ಠರು ಶ್ರೀಮದಭಿನವ ವಾಗೀಶ ಪರಕಾಲ ಸ್ವಾಮಿಗಳು ನಮಗೆ ಉಪದೇಶಿಸಿದ ಪರಿಯನ್ನು ಪದಪುಷ್ಪಗಳ ಮೂಲಕ ಸಮರ್ಪಿಸಿಕೊಂಡು ಧನ್ಯತೆಯನ್ನು ಪಡೆದುಕೊಳ್ಳುತ್ತಿದ್ದೇನೆ.

ಅಲಂಕಾರ ಶಾಸ್ತ್ರವು ಸಂಸ್ಕೃತಸಾಮಾನ್ಯ ಶಾಸ್ತ್ರದ ಒಂದು ಭಾಗ. ಈ ಅಲಂಕಾರಶಾಸ್ತ್ರದಲ್ಲಿ ಅನೇಕ ಮಹಾಪಂಡಿತರು, ವಿದ್ವಾಂಸರು ಅವರದೇ ಆದಂತಹ ಅಭಿಪ್ರಾಯವನ್ನು ಬರೆದು ಪ್ರಪಂಚಕ್ಕೆ ಅಲಂಕಾರ ಶಾಸ್ತ್ರವನ್ನು ಪ್ರಚಾರಮಾಡಿದ್ದಾರೆ. ಆದರೆ ಈ ಎಲ್ಲಾ ಅಲಂಕಾರಶಾಸ್ತ್ರದ ಸೂಕ್ತಿಗಳು ವೇದಾಂತವಿಚಾರಕ್ಕೆ ಅನುಗುಣವಾಗಿ ಅಥವಾ ಪರಬ್ರಹ್ಮನ ವಿಷಯವಾಗಿ ಹೇಳಿಲ್ಲ. ಹೀಗಿರುವಾಗ ಶಾಲೀವಾಹನ ೧೭೬೧ನೆಯ ವಿಕಾರಿ ಸಂವತ್ಸರ ಜ್ಯೇಷ್ಠ ಕೃಷ್ಣ ಪಂಚಮಿ ಸ್ಥಿರವಾರದಲ್ಲಿ, ಚಿತ್ರದುರ್ಗ ಜಿಲ್ಲೆಯ ಹೊಸದುರ್ಗಗ್ರಾಮದ ಶ್ರೀ ಶೈಲಘನಗಿರಿ ಅಪ್ಪಳಾಚಾರ್ಯವಂಶದ ಪ್ರಸಿದ್ಧ ಗ್ರಂಥಕರ್ತರೂ, ಘನವಿದ್ವಾಂಸರೂ ಆಗಿದ್ದ ತಾತಾಚಾರ್ಯರ ದ್ವಿತಿಯ ಪುತ್ರರಾಗಿ ಜನಿಸಿ, ಚಿಕ್ಕ ವಯಸ್ಸಿನ್ನಲ್ಲೇ ಸಂಸ್ಕೃತ ಸಾಮಾನ್ಯಶಾಸ್ತ್ರವಾದ ವ್ಯಾಕರಣ, ಅಲಂಕಾರ, ಛಂದಸ್ಸು ಮತ್ತು ಕಾವ್ಯಗಳಲ್ಲಿ ಪೂರ್ಣಪಾಂಡಿತ್ಯ ಪಡೆದು, ಸ್ವತಂತ್ರವಾಗಿ ಕವನ ಮಾಡುವ ಸಾಮರ್ಥ್ಯವನ್ನು ಪಡೆದು ಮತ್ತು ಹದಿನಾರನೆಯ ವಯಸ್ಸಿನಲ್ಲೇ ಮೈಸೂರು ಪರಕಾಲಮಠಕ್ಕೆ ಬಂದು ಅಂದಿನ ತಾಡಮರಿ ಶ್ರೀನಿವಾಸಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳನ್ನು ಆಶ್ರಯಿಸಿ, ಶ್ರೀಭಾಷ್ಯ ಮತ್ತು ಇತರ ವೇದಾಂತ ಗ್ರಂಥಗಳನ್ನು ಆಚಾರ್ಯರ ಸಾನಿಧ್ಯದಲ್ಲಿ ಅಧ್ಯಯನ ಮಾಡಿ ನಂತರ ವೇದ, ವೇದಾಂತ, ನ್ಯಾಯ, ತರ್ಕ, ಜ್ಯೋತಿಷ್ಯ, ಧರ್ಮ, ಮೀಮಾಂಸಾ,

ಆಗಮ, ಕಾವ್ಯ, ಮತ್ತು ಸಂಗೀತ ಶಾಸ್ತ್ರಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದು, ಕವಿಗಂಡಬೇರುಂಡ, ಕವಿಸಾರ್ವಭೌಮ, ಸರಸಕವಿ ಚಕ್ರವರ್ತಿ, ಕೃಷ್ಣಕವಿ ಎಂದು ನಾನಾ ವಿಧವಾದ ಬಿರುದಾಂಕಿತಗಳನ್ನು ಪಡೆದು, ಶ್ರೀನಿವಾಸ ದೇಶಿಕೇಂದ್ರಬ್ರಹ್ಮತಂತ್ರ ಪರಕಾಲಸ್ವಾಮಿಗಳ ಸಮೀಪದಲ್ಲಿ ಶರಣಾಗತಿಯನ್ನು ಅನುಷ್ಠಿಸಿ, ಶ್ರೀರಂಗನಾಥಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳಿಂದ ಸನ್ಯಾಸಾಶ್ರಮ ಸ್ವೀಕಾರ ಮಾಡಿ, ಕರ್ಣಾಟಕರಾಜ್ಯದವರೇ ಆದ ಶ್ರೀ ಶ್ರೀ ಶ್ರೀ ಕೃಷ್ಣಬ್ರಹ್ಮತಂತ್ರ ಪರಕಾಲಸ್ವಾಮಿಗಳು ಪರಕಾಲಮಠದ ಮೂವತ್ತೊಂದನೆಯ ಪೀಠಾಧಿಪತಿಗಳಾಗಿ ಗುರುಪೀಠವನ್ನು ಅಲಂಕರಿಸಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ಸರ್ವೋತ್ಕೃಷ್ಟವಾಗಿ ಪ್ರಕಾಶಮಾಡಿದರು.

ಶ್ರೀಕೃಷ್ಣಬ್ರಹತಂತ್ರ ಪರಕಾಲಸ್ವಾಮಿಗಳು ಒಟ್ಟು ನೂರ ಎಂಭತ್ತು ಸತ್ಸಂಪ್ರದಾಯ ಶ್ರೀಸುಕ್ತಿಗಳನ್ನು ಬರೆದು ಅನುಗ್ರಹ ಮಾಡಿದ್ದಾರೆ, ಅದರಲ್ಲಿ ಅಲಂಕಾರಮಣಿಹಾರವೆಂಬ ಅಲಂಕಾರಶಾಸ್ತ್ರದ ಗ್ರಂಥವು ಜಗದ್ವಿಖ್ಯಾತವಾಗಿದೆ. ಶ್ರೀಕೃಷ್ಣಬ್ರಹ್ಮತಂತ್ರ ಪರಕಾಲಸ್ವಾಮಿಗಳು ಅಲಂಕಾರಮಣಿಹಾರದಲ್ಲಿ ಸಕಲ ಅಲಂಕಾರಗಳನ್ನು ವೇದಾಂತ ವಿಚಾರವಾಗಿ, ಪರಬ್ರಹ್ಮನ ವಿಚಾರವಾಗಿ ಮತ್ತು ಆಚಾರ್ಯ ಶ್ರೇಷ್ಠರಾದಂತಹ ಶ್ರೀ ನಿಗಮಾನ್ತ ಮಹಾದೇಶಿಕರ ವಿಷಯವಾಗಿ ಹೇಳಿದ್ದಾರೆ.

ಹೀಗೆ ಯಾವುದೋ ಒಂದು ಅಲಂಕಾರವನ್ನು ವಿವರಿಸುವಾಗ ಆಚಾರ್ಯ ಶ್ರೇಷ್ಠರಾದ ಶ್ರೀನಿಗಮಾನ್ತ ಮಹಾದೇಶಿಕರನ್ನು ಉತ್ಕೃಷ್ಟ ವರ್ತಕರು (ವ್ಯಾಪಾರ ಮಾಡುವವರು) ಎಂದು ಹೇಳಿದರು. ತತ್ ಕ್ಷಣವೇ ನಾನಾ ವಿಧವಾದ ಪ್ರಶ್ನೆಗಳು ಮನಸ್ಸಿಗೆ ಬರುತ್ತವೆ. ಶ್ರೀ ನಿಗಮಾನ್ತ ಮಹಾದೇಶಿಕರು ಶ್ರೀವೈಷ್ಣವ ಸಂಪ್ರದಾಯದ ಪ್ರಧಾನ ಆಚಾರ್ಯರೂ ಮತ್ತು ಪ್ರಕಾಂಡ ಪಂಡಿತರೂ ಹಾಗು ಅತ್ಯಂತ ವಿರಕ್ತಸ್ವಭಾವದಿಂದ ಜೀವನವನ್ನು ಮಾಡಿರುವವರು. ಹೀಗಿರುವಾಗ ಹೇಗೆ ವರ್ತಕರು (ವ್ಯಾಪಾರ ಮಾಡುವವರು) ಎಂದು ಹೇಳುವುದಕ್ಕೆ ಸಾಧ್ಯ ಮತ್ತು ಯಾವ ವ್ಯಾಪಾರ ಮಾಡಿದರು ಎಂಬ ಅನೇಕ ಸಂಶಯಗಳು ಬರುತ್ತವೆ. ಆದರೆ ಶ್ರೀಕೃಷ್ಣಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳ ಕಾವ್ಯ ದೃಷ್ಟಿಯೇ ಬೇರೆ ಅವರ ಅನುಭವದ ಶೈಲಿಯೇ ಬೇರೆ. ಕೃಷ್ಣಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳು ಈ ರೀತಿ ಸಮಾಧಾನವನ್ನು ಹೇಳಿದ್ದಾರೆ.

ಪ್ರಾಚೀನ ಕಾಲದಿಂದ ಋಷಿಗಳ, ಯೋಗಿಗಳ ಮತ್ತು ಯತಿಗಳ ಅನುಷ್ಠಾನರೂಪದಲ್ಲಿ ಬಂದ ಶರಣಾಗತಿಯು ಸಾಧ್ಯೋಪಾಯಾನುಷ್ಠಾನದ ಒಂದು ಮಾರ್ಗವು. ಈ ಉತ್ಕೃಷ್ಟವಾದ ಮಾರ್ಗಕ್ಕೆ ಅನ್ಯಮತಗಳಿಂದ ವಿರುದ್ಧವಾಗಿ ನಾನಾ ವಿಧವಾದ ವಾದ-ವಿವಾದಗಳು, ಆಕ್ಷೇಪಣೆಗಳು ಬಂದವು. ವೇದಮಾರ್ಗದ ಸಿದ್ಧಾನ್ತಕ್ಕೆ ಅಪಾಯ ಒದಗಿದಾಗ ಅಂತಹ ಕಠಿನ ಕಾಲದಲ್ಲಿ ಶ್ರೀನಿಗಮಾನ್ತ ಮಹಾದೇಶಿಕರು ಅವತಾರ ಪುರುಷರಾಗಿ ಜನಿಸಿ, ಶೃತಿ, ಸ್ಮೃತಿ, ಪುರಾಣ, ಆಗಮ, ಇತಿಹಾಸದ ಅನೇಕ ಸೂಕ್ತಗಳ ಪ್ರಮಾಣಗಳಿಂದ ಶರಣಾಗತಿ ಅನುಷ್ಠಾನಕ್ಕೆ ವಿರುದ್ಧವಾಗಿ ಬಂದ ವಾದಗಳನ್ನು ಮತ್ತು ವಾದಿಗಳನ್ನು ಸೋಲಿಸಿ, ಪ್ರಾಚೀನ ಋಷಿಗಳ ಕಾಲದಿಂದ ಬಂದ ವೇದಮಾರ್ಗದ ಅನುಷ್ಠಾನರೂಪವಾದ ಶರಣಾಗತಿಯ ಸಿದ್ಧಾಂತವನ್ನು "ರಹಸ್ಯತ್ರಯಸಾರ" ವೆಂಬ ಅಮೊಘ ಗ್ರಂಥದ ಮೂಲಕ ಪುನಃ ಸಿದ್ಧಾಂತವನ್ನು ಸ್ಥಾಪಿಸಿದರು.

ಶರಣಾಗತಿಯಲ್ಲಿ ಜೀವಾತ್ಮನು ಆನುಕೂಲ್ಯ ಸಂಕಲ್ಪ, ಪ್ರಾತಿಕೂಲ್ಯ ವರ್ಜನ, ಕಾರ್ಪಣ್ಯ, ಮಹಾವಿಶ್ವಾಸ ಮತ್ತು ಗೋಪ್ತೃತ್ವ ಎಂಬ ಐದು ಅಂಗಗಳನ್ನಿಟ್ಟುಕೊಂಡು ಸ್ವನಿಷ್ಠೆ ಅಥವಾ ಆಚಾರ್ಯ ನಿಷ್ಠೆಯ ಮೂಲಕ ಮಹಾವಿಶ್ವಾಸದಿಂದ ಸಂಸಾರ ಬಂಧನದಿಂದ ಮುಕ್ತಿ ಮತ್ತು ನಿರಂತರವಾದ ಅಪರಿಮಿತವಾದ ಬ್ರಹ್ಮಾನಂದಾನುಭವದ ಫಲಕ್ಕಾಗಿ ಪರಬ್ರಹ್ಮನಲ್ಲಿ ಆತ್ಮಸಮರ್ಪಣೆಯನ್ನು ಮಾಡುತ್ತಾನೆ. ಇದರಿಂದ ಜೀವಾತ್ಮನಿಗೆ ಸಿಗುವ ಲಾಭವೇನೆಂದರೆ ದೇಹಾವಸಾನದ ನಂತರ ಸಂಸಾರ ಬಂಧನದಿಂದ ಮುಕ್ತಿ ಹಾಗು ಅಪರಿಮಿತವಾದ ಬ್ರಹ್ಮಾನಂದಾನುಭವ.

ಶರಣಾಗತಿ ವಿಷಯ ಹಾಗಿರಲಿ, ಶ್ರೀಕೃಷ್ಣಬ್ರಹ್ಮತನ್ತ್ರ ಪರಕಾಲಸ್ವಾಮಿಗಳು ಬರೆದ ಕಾವ್ಯ ರಸಕ್ಕೆ ಮತ್ತೆ ಬರೋಣ. ಸಾಧಾರಣವಾಗಿ ಲೋಕದ ಜನರು ವ್ಯವಹಾರದಲ್ಲಿ, ಲಾಭಾರ್ಥದೃಷ್ಟಿಯಿಂದ ಸಾವಿರದ್ರವ್ಯಗಳ ಮೌಲ್ಯಕ್ಕೆ ಅನುಗುಣವಾದ ಧನವಿನಿಯೋಗದಿಂದ ಒಂದು ಲಕ್ಷದ್ರವ್ಯಗಳಮೌಲ್ಯವನ್ನು ಲಾಭವಾಗಿ ಪಡೆದರೆ ಅದು ಉತ್ಕೃಷ್ಟ ವ್ಯಾಪಾರ ಎಂದು ಹೇಳುತ್ತಾರೆ.

ಇದೇ ವ್ಯಾಪಾರದ ನಿಯಮವನ್ನು ಶರಣಾಗತಿ ವಿಷಯದಲ್ಲಿ ನೋಡಿದರೆ, ಅಣುವಾದ ಜೀವಾತ್ಮನ ಆತ್ಮ ಸಮರ್ಪಣೆಯಿಂದ ಸಿಗುವ ಲಾಭ ಉತ್ಕೃಷ್ಟವಾದ ಮತ್ತು ಬೆಲೆ ಕಟ್ಟಲು ಆಗದ ಪರಮಪದ ಪ್ರಾಪ್ತಿ. ಶ್ರೀಕೃಷ್ಣಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳು ಕಾವ್ಯರಸವಾಗಿ ಹೇಳಿದ ಉತ್ಕೃಷ್ಟವ್ಯಾಪಾರವೆಂದರೆ ಈ **ಶರಣಾಗತಿಯು** ಮತ್ತು ಇಂತಹ ಸಾಧ್ಯೋಪಾಯದ ಅನುಷ್ಠಾನವನ್ನು ಪುನಃ ಸಂರಕ್ಷಣೆ ಮಾಡಿ ಸ್ಥಾಪಿಸಿದ ಶ್ರೀನಿಗಮಾನ್ತ ದೇಶಿಕರು **ವರ್ತಕರು** ಎಂದು.

ಈ ರೀತಿಯ ಕಾವ್ಯರಸದ ಅನುಭವವನ್ನು ಲೋಕಕ್ಕೆ ನೀಡಿದ ಶ್ರೀಕೃಷ್ಣಬ್ರಹ್ಮತಂತ್ರ ಪರಕಾಲ ಸ್ವಾಮಿಗಳ ಅಲಂಕಾರ ಮಣಿಹಾರ ಗ್ರಂಥವು ಅತ್ಯಂತ ಶ್ಲಾಘನೀಯವಾದದ್ದು ಮತ್ತು ರಮಣೀಯಾವದದ್ದು. ಇದನ್ನು ಎಷ್ಟು ಹೊಗಳಿದರೂ ಸಾಲದು. ಈ ರೀತಿಯ ಅನುಭವಕ್ಕೆ ಅಂತ್ಯವೇ ಇಲ್ಲ ಮತ್ತು ಈ ಲಘುವಾದ ಲೇಖನವನ್ನು ಬರೆಯಲು ಅವಕಾಶವನ್ನು ನೀಡಿದ ಸ್ಮರಣಸಂಚಿಕೆಯನ್ನು ಪ್ರಕಾಶಪಡಿಸುತ್ತಿರುವ ಭಾಗವತರಿಗೆ ಮತ್ತು ಶ್ರೀಮದಭಿನವ ವಾಗಿಶಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳಿಗೆ ನನ್ನ ಅನಂತ ಕೋಟಿ ಪ್ರಣಾಮಗಳು.

ದಾಸನಾದ ನನಗೆ ಹಯಗ್ರೀವ ಮನ್ತ್ರವನ್ನು ಉಪದೇಶಿಸಿ, ಶ್ರೀಪರಕಾಲಮಠದ ಗ್ರಂಥಾಲಯದ ಶ್ರೀಸೂಕ್ತಿಗಳನ್ನು ವರ್ಗೀಕರಿಸುವ ಕೈಂಕರ್ಯದಲ್ಲಿ ಮತ್ತು ಶ್ರೀಸೂಕ್ತಿಗಳ ಪ್ರಕಾಶನೆಯ ಕೈಂಕರ್ಯದಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಿದ ಮಹಾ ಯೋಗಿಗಳಾದ ಶ್ರೀಮದಭಿನವ ವಾಗಿಶಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳಿಗೆ ಪುನಃ ಪುನಃ ಅನಂತ ಕೋಟಿ ಪ್ರಣಾಮಗಳು.

ಪರಕಾಲ ಮಠವೇ ಉತ್ಕೃಷ್ಟವಾದ ಪರಮಪದವು

ಶ್ರೀ ಶ್ರೀ ಶ್ರೀಮದಭಿನವ ವಾಗಿಶಬ್ರಹ್ಮತನ್ತ್ರ ಪರಕಾಲ ಸ್ವಾಮಿಗಳೇ ಬ್ರಹ್ಮಋಷಿಗಳು

**ಇಂತಹ ಯತಿಶ್ರೇಷ್ಠರನ್ನು ಆಚಾರ್ಯರಾಗಿ ಪಡೆದ ನಾವೇ ಧನ್ಯರು**

ಈ ಕಾಲವೇ ಕೃತಯುಗವು

॥ ಶ್ರೀಃ ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ ॥

# ದಿವ್ಯದೇಶ ರಸಪ್ರಶ್ನೋತ್ತರಗಳು

ಉ. ವೇ. ಶ್ರೀಮಾನ್ ಸಿ. ಗೋವಿಂದಾಚಾರ್

ಬೆಂಗಳೂರು

---

೧. ತಿರುಪ್ಪಾರ್ಕಡಲ್ ಎಲ್ಲಿದೆ?

ಅ) ಕಡಲ್ ಮಲ್ಲೈ

ಆ) ಶ್ರೀವೈಕುಂಠಮ್

ಇ) ತಿರುಕ್ಕುರಂಗುಡಿ

ಈ) ಭೂಲೋಕದಲ್ಲಿಲ್ಲ

೨. ಯಾವ ದಿವ್ಯದೇಶದ ದೇವರಿಗೆ 'ದ್ರಾವಿಡವೇದ ದರ್ಶಕ' ಎಂಬ ಹೆಸರಿದೆ?

೩. ಆಳ್ವಾರರ ಕಾಲದ ಹಯಗ್ರೀವಕ್ಷೇತ್ರ ಯಾವುದು?

೪. ಪಂಚರಂಗಕ್ಷೇತ್ರಗಳಲ್ಲಿ ಒಂದಾದ ಆದಿರಂಗಕ್ಷೇತ್ರ ಎಲ್ಲಿದೆ?

೫. ತಿರುಮಂಗೈಆಳ್ವಾರರಿಗೆ 'ನಾಲುಕವಿಪೆರುಮಾಳ್' ಎಂಬ ಪ್ರಶಸ್ತಿ ಪ್ರಾಪ್ತವಾದ ಕ್ಷೇತ್ರ ಯಾವುದು?

೬. ಗಜೇಂದ್ರಮೋಕ್ಷ ಘಟನೆಯನ್ನು ಸ್ಥಳಪುರಾಣದಲ್ಲಿ ಸೂಚಿಸಿರುವ ದಿವ್ಯದೇಶ ಯಾವುದು?

೭. ಕ್ಷಿರಾಬ್ಧಿ ಪುಷ್ಕರಿಣಿ ಎಲ್ಲಿದೆ?

೮. ಚೋರನಾಥ ಎಂಬ ಹೆಸರು ಯಾವ ದಿವ್ಯದೇಶದ ಮೂರ್ತಿಗೆ ಸಲ್ಲುವುದು?

೯. ಮಲೆನಾಡಿನ (ಚೇರದೇಶ-ಕೇರಳ) ಶ್ರೀರಂಗ ಯಾವುದು?

೧೦. ದಕ್ಷಿಣ ದ್ವಾರಕ ಎಂದು ಕರೆಯಲ್ಪಡುವ ಕ್ಷೇತ್ರ ಯಾವುದು?

೧೧. ಇಲ್ಲಿ ಹೇಳಿರುವ 'ಬ್ರಹ್ಮ' ಪದಗಳು ಯಾವ ಯಾವ ಕ್ಷೇತ್ರಗಳ ಹೆಸರನ್ನು ಸೂಚಿಸುವುದು?

ಅ) ಕಾಂಚನ ಬ್ರಹ್ಮ

ಆ) ನಾದ ಬ್ರಹ್ಮ

ಇ) ಅನ್ನ ಬ್ರಹ್ಮ

೧೨. 'ಕರಿಗಿರಿ' ಎಂದು ಕರೆಯಲ್ಪಡುವ ಎರಡು ಕ್ಷೇತ್ರಗಳಲ್ಲಿ ಒಂದು ಹಸ್ತಿಗಿರಿ ವರದರಾಜಸ್ವಾಮಿ ದೇವಸ್ಥಾನ ಕಂಚಿ, ಇನ್ನೊಂದು ಯಾವುದು?

೧೩. ಅಕ್ಕಾರಕ್ಕನಿ ಎಂಬ ದಿವ್ಯನಾಮ ಯಾವ ಕ್ಷೇತ್ರದ ಮೂರ್ತಿಗೆ ಸಲ್ಲುವುದು?

---

**ಉತ್ತರಗಳು**

| | |
|---|---|
| ೧) ಭೂಲೋಕದಲ್ಲಿಲ್ಲ | ೮) ಶ್ರೀವೈಕುಂಠಮ್ (ನವ ತಿರುಪತಿಗಳಲ್ಲಿ ಒಂದು) |
| ೨) ಕುಂಭಕೋಣದ ಆರಾವಮುದನ್ | ೯) ತಿರುವಟ್ಟಾರ್ |
| ೩) ಯಾವುದು ಕಾಣ ಸಿಗದು | ೧೦) ಮನ್ನಾರ್ ಗುಡಿ |
| ೪) ಶ್ರೀರಂಗಪಟ್ಟಣ | ೧೧) ಅ) ತಿರುಪತಿ, ಆ) ಪಂಡರಾಪುರ ಇ) ಉಡುಪಿ |
| ೫) ಶೀರ್ಗಾಳಿ | ೧೨) ದೇವರಾಯನ ದುರ್ಗ |
| ೬) ಕಪಿಸ್ಥಲಂ | ೧೩) ಘಟಿಕಾಚಲ (ಶೋಲಿಂಗರ್) |
| ೭) ತಿರುಮೂಹೂರ್ (ಮಧುರೈ ಸಮೀಪ) | ಯೋಗಾನರಸಿಂಹ ಸ್ವಾಮಿ |

॥ ಶ್ರೀಃ॥

॥ ಶ್ರೀಲಕ್ಷ್ಮೀಹಯವದನ ಲಕ್ಷ್ಮೀನಾರಾಯಣ ವೇಣುಗೋಪಾಲ ಪರಬ್ರಹ್ಮಣೇನಮಃ ॥



॥ ಶ್ರೀಶಠಕೋಪ ರಾಮಾನುಜ ದೇಶಿಕೇಭ್ಯೋನಮಃ॥

॥ ಶ್ರೀ ಕೃಷ್ಣಬ್ರಹ್ಮತನ್ತ್ರ ಪರಕಾಲ ಮಹಾದೇಶಿಕಾಯನಮಃ ॥

॥ ಶ್ರೀಬ್ರಹ್ಮತಂತ್ರ ಸ್ವತಂತ್ರ ಪರಕಾಲ ಗುರುಪರಂಪರಾಯೈ ನಮಃ॥

# ಆಚಾರ್ಯ ವಿಗ್ರಹಧ್ಯಾನ

ಶ್ರೀಚರಣಗಳಲ್ಲಿ ಪ್ರಾರ್ಥನೆ

ಶ್ರೀ ಚಿತ್ತಂಪಲ್ಲಿ ಕಂಡಾಡೈ ವೆಂಬಾರ್ ತೋಳಪ್ಪರ್ ರಾಜೀವಲೋಚನ ರಾಮಾನುಜ ದಾಸಃ (ಬಾಲಾಜಿ ಸಿ. ಜಿ)

ಬೆಂಗಳೂರು

---

ನಮ್ಮ ಆಚಾರ್ಯರಾದ ಶ್ರೀಮದಭಿನವ ವಾಗೀಶ ಬ್ರಹ್ಮತನ್ತ್ರಸ್ವತನ್ತ್ರ ಪರಕಾಲ ಸ್ವಾಮಿಗಳ ಶತಾಭಿಷೇಕವೈಭವದ ಸ್ಮೃತಿಚಿಹ್ನದ ರೂಪದಲ್ಲಿ ಹೊರಬರುವ ಈ ಸಂಚಿಕೆಯಲ್ಲಿ, "ಗುಣೈರ್ದಾಸ್ಯಮುಪಾಗತಃ" ಎಂಬಂತೆ ಸ್ವಾಮಿಗಳ ಸಕಲಾತ್ಮಗುಣ ಪೂರ್ತಿಯನ್ನು ಕಂಡು ಅನೇಕ ಭಾಗವತೋತ್ತಮರು ಅವರವರ ಅನುಭವಪರೀವಾಹಗಳನ್ನು ಈ ಅಕ್ಷರಸಾಗರದಲ್ಲಿ ಆಮಗ್ನಗೊಳಿಸಿರುತ್ತಾರೆ. ಇಂತಹ ಒಂದು ಅನುಭವಪ್ರವಾಹದಲ್ಲಿ ದಾಸನ ಪ್ರಾರ್ಥನಾರೂಪವಾದ ಹಲವು ಕೃತಜ್ಞತಾಬಿಂದುಗಳನ್ನು ಸೇರಿಸಿ, ಸ್ವರೂಪಲಾಭವನ್ನು ಪಡೆಯುವ ಒಂದು ಸದವಕಾಶವನ್ನು ಕಲ್ಪಿಸಿಕೊಟ್ಟ ಆಚಾರ್ಯರ ಸತ್ಯಸಂಕಲ್ಪರೂಪವಾದ ಅನುಗ್ರಹ ಪರಂಪರೆಗೆ ಅಂಜಲಿಯನ್ನು ಸಲ್ಲಿಸುತ್ತಿದ್ದೇನೆ.

ಭಗವಂತನ ದಿವ್ಯಮಂಗಳವಿಗ್ರಹ ಧ್ಯಾನದಂತೆಯೇ ಸದಾಚಾರ್ಯರ ದಿವ್ಯಮಂಗಳ ವಿಗ್ರಹಧ್ಯಾನವೂ ಶ್ರೇಷ್ಠ ಆಗು ಅವಶ್ಯ ಶಿಷ್ಯಕರ್ತವ್ಯವೆಂದು ಅಪ್ಪಣೆಕೊಡಿಸಿರುವ ಪೂರ್ವಾಚಾರ್ಯರ ಉಪದೇಶಗಳನ್ನನುಸರಿಸಿ, ನಮ್ಮ ಪರಮಾಚಾರ್ಯರಾದ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರಸ್ವತಂತ್ರ ಪರಕಾಲ ಸ್ವಾಮಿಗಳ ದಿವ್ಯಮಂಗಳವಿಗ್ರಹಧ್ಯಾನದಲ್ಲಿ ನಿಮಗ್ನರಾಗಿ ಪದಪುಷ್ಪಗಳಮೂಲಕ ಅನುಷ್ಠಿಸೋಣ.

ರವಿಸದೃಶವಾದ ಕಾಂತಿಯನ್ನು ಬೀರುವ, ಬ್ರಹ್ಮತೇಜಸ್ಸಿನಿಂದ ಪರಿಶುದ್ಧವಾಗಿ ಬೆಳಗುತ್ತಲಿರುವ, ನಿತ್ಯಪುಷ್ಕಲವಾದ ಚಂದಿರನಂತೆ ಶೋಭಿಸುತ್ತಿರುವ, ಸದಾ ಮಂದಹಾಸಬೀರುವ ಮುಖಕಮಲದೊಂದಿಗೆ ಕೂಡಿದ ನಮ್ಮ ಆಚಾರ್ಯರ ಚೂಡಾವತಂಸದಿಂದ ಶ್ರೀಪಾದದವರೆಗೂ ಬೆಳಗುತ್ತಿರುವ ದಿವ್ಯಮಂಗಳ ವಿಗ್ರಹವು ನಮ್ಮ ಕಣ್ಣುಗಳಿಗೆ ಸದಾ ಭಾಸವಾಗುತ್ತಿರಲಿ.

ಯಾವ ಆಚಾರ್ಯರು ಭಾಗವತರ ವಿಷಯದಲ್ಲಿ ಪರತಂತ್ರರಾಗಿದ್ದು, ಸ್ವಾಮಿದೇಶಿಕರ ಚರಣನಳಿನಗಳಲ್ಲಿ ಸಮಸ್ತಾತ್ಮಭರವನ್ನೂ ಅರ್ಪಿಸಿಕೊಂಡ ಬ್ರಹ್ಮತಂತ್ರ ಸ್ವತಂತ್ರ ಸ್ವಾಮಿಗಳ ಪರಂಪರೆಯಲ್ಲಿ ಬಂದವರಾಗಿದ್ದು, ಅವರಂತೆಯೇ ಬ್ರಹ್ಮತಂತ್ರವೆನಿಸಿಕೊಂಡ ಶಾರೀರಕಶಾಸ್ತ್ರಜ್ಞಾನದಲ್ಲಿ ಪೂರ್ಣಪಾಂಡಿತ್ಯವನ್ನು ಹೊಂದಿ ಸ್ವತಂತ್ರರಾಗಿದ್ದಾರೆಯೋ ಅಂತಹ ನಮ್ಮ ಆಚಾರ್ಯರ ದಿವ್ಯ ಮಂಗಳ ವಿಗ್ರಹರೂಪವು ನನ್ನ ಮನಸ್ಸಿನಲ್ಲಿ ಸದಾಕಾಲ ಧೃತಿಯಾಗಿ ನಿಂತಿರಲಿ.

ಶ್ರೀಬ್ರಹ್ಮತಂತ್ರಸ್ವತಂತ್ರ ಪರಕಾಲಸ್ವಾಮಿ ಪರಂಪರೆಯ ಪೂರ್ವಾಚಾರ್ಯರುಗಳ ಪಾದಧೂಳಿಯಿಂದ ಪ್ರಕಾಶಿಸುತ್ತಿರುವ, ಆ ಗುರುಪರಂಪರೆಯಲ್ಲಿಯೇ ಚಕ್ರವರ್ತಿಯಂತೆ ಬೆಳಗುತ್ತಿರುವ ನಮ್ಮ ಆಚಾರ್ಯರ ತೇಜೋಮಯವಾದ ರೂಪವನ್ನು ನನ್ನ ಮನಸ್ಸು ಸದಾ ಧ್ಯಾನಿಸುತ್ತಿರಲಿ.

ಪ್ರಶಸ್ತವಾದ, ಸ್ವಚ್ಛವಾದ, ಬ್ರಹ್ಮವಿತ್ತುಗಳು ತಲೆಯಲ್ಲಿ ಧರಿಸಿಕೊಳ್ಳುವಂತಹ, ಜ್ಞಾನಾದಿ ಶ್ರೀಮಂತಿಕೆಯನ್ನು ಕೊಡುವಂತಹ, ವೇದಗಳಿಗೆ ಶಿಖಾಪ್ರಾಯವಾಗಿರುವ ಉಪನಿಷತ್ತುಗಳಂತೆ ಬೆಳಗುತ್ತಿರುವ, ಬಿಳುಪಾದ, ನೀಳವಾದ ಅಗ್ನಿಸಮಾನವಾದ ಪರಿಶುದ್ಧತೆಯಿಂದ ಕೂಡಿದ, ಚೆನ್ನಾಗಿ ಕಟ್ಟಲ್ಪಟ್ಟ ಶಿಖೆಯಿಂದ ಕೂಡಿದ ನಮ್ಮ ಸ್ವಾಮಿಯ ವಿಗ್ರಹವನ್ನು ನನ್ನ ಮನಸ್ಸಿನ ಧ್ಯಾನ ಪರಂಪರೆಯು ಸದಾ ಕಾಲ ಆಲಂಬನವನ್ನಾಗಿ ಪಡೆಯಲಿ.

ಅರ್ಧಚಂದ್ರನಂತೆ ಹೊಳೆಯುವ ಹಣೆಯಲ್ಲಿ, ವಿಷ್ಣುಪಾದಾಕೃತಿಗೆ ಹೋಲುವ ಊರ್ಧ್ವಪುಂಡ್ರವು ಶೋಭಿಸುತ್ತಿದ್ದು, ಪ್ರಕೃತಿಸಹಜವಾಗಿರುವ ತನ್ನ ಅಸ್ಥಿರತೆಯನ್ನು ಹೋಗಿಸಿಕೊಳ್ಳಬೇಕೆಂದು ನಿಶ್ಚಯಿಸಿದ ಮಿಂಚು ಸ್ಥಿರವಾಗಿ ನಮ್ಮ ಆಚಾರ್ಯರ ಹಣೆಯಲ್ಲಿ ಶ್ರೀಚೂರ್ಣತಿಲಕವಾಗಿ ಬಂದು ನೆಲೆಸಿದ್ದು, ಎರಡು ಗಂಗಾ ಪ್ರವಾಹಗಳ ನಡುವೆ ಪ್ರಕಾಶಮಾನವಾಗಿ ಬೆಳಗುವ ಸರಸ್ವತೀ ನದಿಯಂತೆ  ರಾರಾಜಿಸುತ್ತಿದ್ದು, ಇವರು ಶಠಕೋಪಮುನಿಯ ಅಪರಾವತಾರವೋ ಎಂಬಂತಿರುವ ನಮ್ಮ ಆಚಾರ್ಯರ ದಿವ್ಯಮಂಗಳ ರೂಪವು ನನ್ನ ಹೃದಯ ಸಂಪುಟದಲ್ಲಿ ಸದಾಕಾಲ ಅಲಂಕರಿಸಲ್ಪಟ್ಟು, ಧ್ಯಾನಿಸಲ್ಪಟ್ಟು ಸಾಕ್ಷಾತ್ಕರಿಸಿಕೊಳ್ಳುವಂತಾಗಲಿ.

ಬ್ರಾಹ್ಮೀ ಮುಹೂರ್ತದ ಸಮಯದಲ್ಲಿ ತೋರುವ ಕೆಂಪಾದ ಆಕಾಶವೇ ನಮ್ಮ ಆಚಾರ್ಯರು ಧರಿಸಿಕೊಂಡಿರುವ ಕಾಶಾಯವಸ್ತ್ರದಂತಿದ್ದು, ಸೂರ್ಯರಶ್ಮಿಯ ಕಾಂತಿಯಂತೆ ಕಂಗೊಳಿಸುವ ದ್ವಾದಶೋರ್ಧ್ವಪುಂಡ್ರಗಳು, ಬ್ರಹ್ಮಜ್ಞಾನದ ತೇಜಸ್ಸಿನಿಂದ ಬೆಳಗುತ್ತಿರುವ ಬ್ರಹ್ಮಗಂಧದಿಂದ ಕೂಡಿದ ದಿವ್ಯಮಂಗಳವಿಗ್ರಹವು ನಮ್ಮ ಮನಸ್ಸಿನ ಪಟದಲ್ಲಿ ಸದಾ ಪ್ರತಿಷ್ಠಿತವಾಗಿರಲಿ.

ಕಲ್ಪಲತೆಯ ಜೋಡಿಯಂತಿರುವ, ತೀರ್ಥದಲ್ಲಿ ಉದಯಿಸಿರುವ ಕಮಲಗಳಂತಿರುವ, ಆಶ್ರಯಿಸಿ ಬರುವ ಶರಣರ ಸಮೂಹಕ್ಕೆ ಸಕಲ ಸಂಪತ್ತನ್ನೂ ಕೊಟ್ಟು ದಾರಿತೋರುವ ಕಟಾಕ್ಷಪೂರಿತವಾದ ನಮ್ಮ ಆಚಾರ್ಯರ ನೇತ್ರಸೌರಭವು ನನ್ನ ಕಣ್ಣುಗಳಿಂದ ಸದಾ ಸಾಕ್ಷಾತ್ಕರಿಸಿಕೊಳ್ಳುವಂತಾಗಲಿ.

ನಮ್ಮ ಸ್ವಾಮಿಯ ಜಿಹ್ವಾಗ್ರಸಿಂಹಾಸನದಲ್ಲಿ ಹಯವದನನು ಸುಖಾಸೀನನಾಗಿ ಕುಳಿತಿದ್ದಾನೆ. ಇವನ ತೇಜೋಮಯವಾದ ಉತ್ಕೃಷ್ಟ ಕಾಂತಿಯೇಸ್ವಾಮಿಯ ಚಿರುಮಂದಹಾಸದ ಧಾವಳ್ಯಕ್ಕೆ ಕಾರಣವೋ ಎಂಬಂತಿದೆ.

ದಿವ್ಯಸೂರಿಗಳು ಹಾಡಿ ಕೊಂಡಾಡಿದ ಕ್ಷೇತ್ರಗಳ ಭಗವತ್ಪ್ರತಿನಿಧಿಗಳೋ ಎಂಬಂತೆ, ವೈವಿಧ್ಯಮಯ ವರ್ಣಗಳಲ್ಲಿ ಕಂಗೊಳಿಸುವ ಪವಿತ್ರಮಾಲೆಗಳನ್ನು ನಮ್ಮ ಆಚಾರ್ಯರು ಧರಿಸಿ ಬೆಳಗುತ್ತಿದ್ದು, ಇವು ಅವರ ಹೃದಯದಲ್ಲಿ ವಿರಾಜಿಸುವ ಶ್ರೀಲಕ್ಷ್ಮೀಹಯಗ್ರೀವನ ವಿಹಾರಕ್ಕಾಗಿ ಕಟ್ಟಿರುವ ಡೋಲಿಕೆಯೋ ಎಂಬಂತಿಹುದು.

ಮಿಂಚಿನಂತೆ ಮಿನುಗುತ್ತಿರುವ ಉಪವೀತವನ್ನು ಧರಿಸಿ, ಪಾವಿತ್ರ್ಯಗುಣವೇ ಕುಶವಾಗಿ ಅಭಿವ್ಯಕ್ತಗೊಂಡು ಅವರಲ್ಲಿ ಪವಿತ್ರವಾಗಿ ಸೇರಿ, ತ್ರಿದಂಡಹಸ್ತರಾಗಿ ರಾರಾಜಿಸುತ್ತಿರುವ ನಮ್ಮ ಆಚಾರ್ಯರ ದಿವ್ಯ ರೂಪವು, “ಉಪವೀತಿನಂ ಊರ್ಧ್ವಪುಂಡ್ರವಂತಂ ತ್ರಿಜಗತ್ಪುಣ್ಯಫಲಂತ್ರಿದಂಡಹಸ್ತಂ” ಎಂಬ ದೇಶಿಕರ ಅನುಭವಕ್ಕೆ ಸಮಾನವಾಗಿ ಇಲ್ಲಿ ನಾವು ಪ್ರತ್ಯಕ್ಷವಾಗಿ ಕಾಣುವಂತಿದೆ.

ಆಪ್ಯಾಯಮಾನವಾಗಿ ಬೆಳಗಿರುವ ತಾವರೆಯ ಪುಷ್ಪದಂತಿರುವ ನಮ್ಮ ಸ್ವಾಮಿಗಳ ಪದಕಮಲಗಳು ನಮ್ಮ ಸ್ಮೃತಿಪಟಗಳಲ್ಲಿ ಸದಾಕಾಲ ಪ್ರತಿಷ್ಠಾಪಿತವಾಗಿರಲಿ. “ಯತಿಚಕ್ರವರ್ತಿ ಪದಪದ್ಮ ಪತ್ತನಂ” ಎಂದು ಅನುಭವಿಸಿದ ದೇಶಿಕೋಕ್ತಿಯು ಇಲ್ಲಿ ಅನುಸಂಧೇಯ.

ವಿಷ್ಣುಭಕ್ತ ಲಕ್ಷಣಗಳೆಲ್ಲವೂ ಪೂರ್ಣವಾಗಿರುವ ನಮ್ಮ ಆಚಾರ್ಯರ ಪಾದಕಮಲಗಳನ್ನು ಧ್ಯಾನಮಾಡುವವರ ಹೃದಯಾಂಧಕಾರವನ್ನು, ಅವರ ಪಾದಗಳ ನಖಕಾಂತಿಯು ಪೂರ್ಣವಾಗಿ ಹೋಗಲಾಡಿಸುವುದರಲ್ಲಿ ಸಾಮರ್ಥ್ಯವನ್ನು ಹೊಂದಿವೆ.

“ಆಚಾರ್ಯಾದಿಹ ದೈವತಾಂಸಮಧಿಕಾಂ ಅನ್ಯಾಂ ನ ಮನ್ಯಾಮಹೇ” ಎಂಬ ಸೂಕ್ತಿಯಂತೆ ಆಚಾರ್ಯಪಾದುಕೆಗಳು ಸಹಸ್ರ ಶ್ಲೋಕಗಳಿಂದ ಕೊಂಡಾಡಲ್ಪಟ್ಟ ಭಗವಂತನ ಪಾದುಕೆಗಳಿಗಿಂತಲೂ ಶ್ರೇಷ್ಠವಾದುವು. ಯಾವ ಭೇದಗಳನ್ನೂ ಎಣಿಸದೆ ಸಮಾನವಾಗಿ ವರ್ಷಿಸುವ ಮೇಘದಂತೆ ಅನುಕಂಪಾ ಕ್ಷಮೆಗಳೇ ಅಭಿವ್ಯಕ್ತವಾದಂತಿರುವ ನಮ್ಮ ಆಚಾರ್ಯರ ಪಾದುಕೆಗಳು ತಮ್ಮನ್ನು ಆಶ್ರಯಿಸಿ ಬರುವ ಶಿಷ್ಯರನ್ನು ಮುಕ್ತಹಸ್ತವಾದ ಪರಿಯಲ್ಲಿ ಅನುಗ್ರಹಿಸಿ ಅಜ್ಞಾನಾಂಧಕಾರಗಳಿಂದ ಉಜ್ಜೀವಿಸುತ್ತಲಿವೆ.

ವೇದವಿರುದ್ಧಾರ್ಥ ಪ್ರತಿಪಾದಕರೂಪವಾದ ಬಾಹ್ಯಕುದೃಷ್ಟಿಗಳಿಂದ ಮೂರ್ಛಿತವಾದ ಸಂಸಾರವೆಂಬ ಜಗತ್ತಿನ ರೋಗವು ಒಬ್ಬ ಸದಾಚಾರ್ಯರ ಅನರ್ಘ್ಯವಾದ ಗುಣಗಳ ಹಾಗು ವೈದಷ್ಯಪೂರ್ಣ ಉಪದೇಶಗಳಿಂದ ನೀಗುತ್ತದೆ. ಇಂತಹ ಸುಗುಣಮಣಿರತ್ನದಂತೆ ಪ್ರಕಾಶಿಸುತ್ತಲಿರುವ ನಮ್ಮ ಆಚಾರ್ಯರ ಮಂಗಳಸ್ವರೂಪ ಧ್ಯಾನದಿಂದ ಸಂಸಾರ ಬೇಗೆಯು ನಮಿಂದ ದೂರವಾಗುತ್ತದೆ. ಈ ದಿವ್ಯ ಮಂಗಳ ವಿಗ್ರಹವು ನನ್ನ ಮನಸ್ಸಿನಲ್ಲಿ ಬೇರ್ಪಡಿಸಲಾಗದ ರೀತಿಯಲ್ಲಿ ಸುಲಗ್ನವಾಗಿ ನೆಲೆಸಲಿ. ನಮ್ಮ ಆಚಾರ್ಯರ ವಿಷಯದಲ್ಲಿ ಸಾಧ್ಯ ಉಪೇಯವಾದ ಪರಮಭಕ್ತಿಯು ನಮಗೆ ದೊರಕಲಿ.

ಯಾರ ದೆಸೆಯಿಂದ ಎಲ್ಲ ಖೇದಗಳೂನೀಗಿಸಲ್ಪಡುತ್ತದೆಯೋ, ಯಾರ ದೆಸೆಯಿಂದ ಸರ್ವ ಸಂತೋಷ ಸಮೃದ್ಧಿಗಳೂ ಕೊಡಲ್ಪಡುತ್ತದೆಯೋ, ಯಾರ ದೆಸೆಯಿಂದ ಪುರುಷಾರ್ಥಪ್ರಾಪ್ತಿಸಹಾಯಕ ಉಪಾಯಾನುಷ್ಠಾನ ಜ್ಞಾನವು ಆಶ್ರಿತರಿಗೆ ಅನುಗ್ರಹಿಸಲ್ಪಡುತ್ತದೆಯೋ, ಯಾರ ದೆಸೆಯಿಂದ ಹೀನಾಯವಾದ ಕೆಟ್ಟ ಬುದ್ಧಿ ವಿಚಾರಗಳು ಭೇದಿಸಲ್ಪಡುತ್ತದೆಯೋ, ಯಾರ ದೆಸೆಯಿಂದ ಆಶ್ರಿತರಾದ ನಮಗೆ ಯಾವ ವಿಷಾದವೂ ಉಂಟಾಗುವುದಿಲ್ಲವೋ

ಯಾರ ಅನುಗ್ರಹದಿಂದ ನಮಗೆ ಸಂಸಾರ ಸಾಗರವನ್ನು ದಾಟಿಹೋಗಲು ಸಾಧ್ಯವಾದೀತೋ ಅಂತಹ ಉತ್ತಮಾಚಾರ್ಯರಾದ ನಮ್ಮ ಶ್ರೀಮದಭಿನವ ವಾಗೀಶ ಪರಕಾಲ ಸ್ವಾಮಿಗಳನ್ನು ಅನವರತ ಭಕ್ತಿಯಿಂದ ಶಿರಸಾ ನಮಿಸಿ ಕೊಂಡಾಡುತ್ತೇನೆ.

ಆಶ್ರಿತರಲ್ಲಿ ಅತ್ಯಂತ ವಾತ್ಸಲ್ಯವುಳ್ಳ ಕೃಪಾಸಾಗರರಾದ ನಮ್ಮ ಸ್ವಾಮಿಯ ಅನುಗ್ರಹವು ಧಾರಾಕಾರವಾಗಿ ನಮ್ಮ ಮೇಲೆ ಸದಾ ವರ್ಷಿಸುತ್ತಿರಲಿ. ನಮ್ಮ ಸ್ವಾಮಿಯ ಅಡಿದಾವರೆಗಳಲ್ಲಿ ಸೇವೆಸಲ್ಲಿಸುತ್ತಿರುವ ಸತ್ಪುರುಷರ ಅನುಗ್ರಹದ ಪರಂಪರೆಯು ನಮ್ಮ ಮೇಲೆ ಸದಾಕಾಲವೂ ಇರುವಂತಾಗಲಿ. ಭಗವಂತನ ನಿತ್ಯಕೈಂಕರ್ಯಶ್ರೀಯಿಂದ ಭೂಷಿತರಾದ ಪೂರ್ವಾಚಾರ್ಯರುಗಳ, ಸಿದ್ಧಾಂತನಿಧಿಯಂತಿರುವ ಶ್ರೀಸೂಕ್ತಿಗಳೂ ಹಾಗು ಅವುಗಳಲ್ಲಿ ಪ್ರತಿಪಾದಿತವಾಗಿರುವ ಉಪದೇಶಗಳನ್ನು ರಕ್ಷಿಸುವ ಪರಮಧ್ಯೇಯದಲ್ಲಿ ದೀಕ್ಷಾಬದ್ಧರಾಗಿರುವ ನಮ್ಮ ಆಚಾರ್ಯರಲ್ಲಿ, ಅವರ ಅನುಗ್ರಹವೇ ನಮ್ಮನ್ನು ಕ್ರಮವಾಗಿ ದಾಸನಾಗಿರುವಂತೆ ಮಾಡಲಿ. ಸಕಲಾತ್ಮಗುಣಪೂರ್ಣರಾದ ನಮ್ಮ ಆಚಾರ್ಯರು ಪರಮ ಕೃಪೆಯಿಂದ ನಮ್ಮನ್ನು ಸತ್ಸಂಪ್ರದಾಯಪ್ರೇರಕವಾದ ಜ್ಞಾನ ಭಕ್ತ್ಯಾದಿ ಗುಣಗಳಿಂದ ಸದಾಕಾಲ ಇರುವಂತೆ ನಮ್ಮನ್ನು ರಕ್ಷಿಸಲಿ. ಸಕಲ ಪೂರ್ವಾಚಾರ್ಯರುಗಳ ಪರಮ ಕೃಪೆಗೆ ಪಾತ್ರರಾಗಿರುವ ನಮ್ಮ ಆಚಾರ್ಯರು, ಅದೇ ಆಚಾರ್ಯರುಗಳು, ರಚಿಸಿದ ಪರಮ ವೈದಿಕ ಶ್ರೀವೈಷ್ಣವ ಶ್ರೀಸಂಪ್ರದಾಯವನ್ನವಲಂಬಿಸಿದ ಶ್ರೀಸೂಕ್ತಿಗಳಲ್ಲಿ ಹೇಳಿರುವ ಪ್ರಪನ್ನನ ನಿಷ್ಠೆಯನ್ನು ನಮಗೆ ಅನುಗ್ರಹಿಸಲಿ. ಪ್ರಸ್ಥಾನಗಳಲ್ಲಿ ಮತ್ತು ಅವುಗಳನ್ನು ಪ್ರತಿಪಾದಿಸುವ ಸೂಕ್ತಿಗಳಲ್ಲಿ ಹೇಳಿರುವ ಪರಮಾತ್ಮನನ್ನು ನಮ್ಮ ಆಚಾರ್ಯರ ಉಪದೇಶಗಳ ಮೂಲಕ ತಿಳಿದುಕೊಂಡಿರುವವರೂ, ನಮ್ಮ ಆಚಾರ್ಯರ ಉಪದೇಶಗಳಂತೆ ಅನುಷ್ಠಾನಗಳನ್ನು ಮಾಡುತ್ತಿರುವ ಪರಮಭಕ್ತರೊಡನೆ ನಮಗೆ ನಿತ್ಯಯೋಗವು ದೊರಕುವಂತಾಗಲಿ.

ನಮ್ಮ ಆಚಾರ್ಯರ ಕೃಪೆಯು ನಮ್ಮನ್ನು ಸರ್ವಕಾಲದಲ್ಲಿಯೂ, ಸರ್ವಾವಸ್ಥೆಗಳಲ್ಲಿಯೂ, ಸರ್ವ ಸ್ಥಳಗಳಲ್ಲಿಯೂ ಭಗವತ್-ಭಾಗವತ ಅಪಚಾರಗಳನ್ನು ಮಾಡದಂತೆ ಅನುಗ್ರಹಿಸಲಿ. ಅಂತೆಯೇ ನಮ್ಮ ಆಚಾರ್ಯರ ಪಾದಕಮಲಗಳು ನಮಗೆ ಸರ್ವಕಾಲ-ಸರ್ವಾವಸ್ಥೆಗಳಲ್ಲಿಯೂ, ರಕ್ಷಕವಾಗಿದ್ದು ಅನುಗ್ರಹಿಸಲಿ. ನಮ್ಮ ಆಚಾರ್ಯರು ಸಂಕಲ್ಪಿಸುವ ಕೈಂಕರ್ಯಗಳಲ್ಲಿ ನಮ್ಮನ್ನು ಅರ್ಪಿಸಿಕೊಳ್ಳುವ ವಿಷಯದಲ್ಲಿ ನಮ್ಮ ಮನಸ್ಸೆಂಬ ಹೂಗುಚ್ಛವು ಸದಾ ಕೌತೂಹಲವನ್ನು ಹೊಂದಿರಲಿ.

ಪೂರ್ವಾಚಾರ್ಯರ ಪದಕಮಲಗಳನ್ನೇ ಪರಮಪ್ರಾಪ್ಯವೆಂದು ನೆನೆದಿರುವ ನಮ್ಮ ಆಚಾರರಿಗೆ ಮಂಗಳವಾಗಲಿ ಎಂದು ಪ್ರಾರ್ಥಿಸುತ್ತ, ಅನವರತ ಅವರ ಗುಣಕೀರ್ತನೆಗಳಿಂದ ಪ್ರೇರಿತನಾಗಿ ಅವರ ಚರಣದಡಿದಾವರೆಗಳಲ್ಲಿ ಈ ಪ್ರಾರ್ಥನೆಗಳ ಪದಪುಷ್ಪಗಳನ್ನು ಸಮರ್ಪಿಸಿ “ಸಫಲಂ ಮಮ ಜನ್ಮ ತಾವದೇತತ್” ಎಂಬಂತೆ ಸಾರ್ಥಕ್ಯವನ್ನು ಸೂಚಿಸಿಕೊಳ್ಳುತ್ತಿದ್ದೇನೆ.